
ಸಂಪುಟ: 05 ಸಂಚಿಕೆ: 194 ಪುಟಗಳು: 08 ಶನಿವಾರ 27 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5



ಮಹಾಯೋಗಿನ್ಯಾಧೀಶ್ವರಿ
ನಂದಗೋಪಸುತಂ ದೇವಿ
ಪತಿ ಮೇ ಕುರೂ ತೇ ನಮಃ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ದಸರಾಗೆ ಹಣ ಕೊಡಿ: ಸಿಎಂಗೆ ಗುತ್ತಿಗೆದಾರರ ಮನವಿ

• ಉದಯವಾಹಿನಿ, ಬೆಂಗಳೂರು

'ಗುತ್ತಿಗೆದಾರರು ಹಾಗೂ ಕಾರ್ಮಿಕರಿಗೆ ಅತ್ಯಂತ ಮಹತ್ವದ ಹಬ್ಬವಾಗಿರುವ ದಸರಾ ಆರಂಭವಾಗಿದ್ದು, ಎಲ್ಲಾರಿಗೂ ಅನುಕೂಲವಾಗುವ ದೃಷ್ಟಿಯಿಂದ ಎಲ್ಲಾ ಇಲಾಖೆಗಳಲ್ಲಿ ಬಾಕಿ ಬಿಲ್‌ಗಳ ಬಿಡುಗಡೆ ಸೂಚನೆ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಮನವಿ ಮಾಡಿಕೊಂಡಿದೆ. ಎಲ್ಲಾ ಸರ್ಕಾರಗಳು, ಮುಖ್ಯಮಂತ್ರಿಗಳು ಈ ಹಬ್ಬಗಳ ಸಂದರ್ಭದಲ್ಲಿ ಬಿಲ್‌ಗಳ ಹಣ ಬಿಡುಗಡೆ ಮಾಡಿದ್ದಾರೆ. ತಾವೂ ಈ ಬಾರಿ ಹಣ ಬಿಡುಗಡೆ ಮಾಡಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ. 'ಕಳೆದ ಮೂರು ವರ್ಷಗಳಿಂದ ಯುಗಾದಿ ಹಬ್ಬದ ಸಂದರ್ಭದಲ್ಲಿ ಹಣ ಬಿಡುಗಡೆ ಆಗಿಲ್ಲ. ಈ ಬಾರಿ ದಸರಾಗೆ ಹಣ ಬಿಡುಗಡೆ ಮಾಡಬೇಕು. ಕಾರ್ಮಿಕರಿಗೆ ಮುಂಗಡ ಹಾಗೂ ಬೋನಸ್ ನೀಡುವ ಆಚರಣೆಗಳಿವೆ.

ಹೀಗಾಗಿ, ತಾವು ಕಾರ್ಮಿಕರ ಸಮಸ್ಯೆಗಳನ್ನು ಅರಿತು, ಬಾಕಿ ಬಿಲ್ ಪಾವತಿಸಲು ಎಲ್ಲಾ ಇಲಾಖೆಗಳ ಸಚಿವರು ಹಾಗೂ ಅಧಿಕಾರಿಗಳಿಗೆ ತುರ್ತಾಗಿ ಸೂಚಿಸಬೇಕು ಎಂದು ಪತ್ರ ಬರೆದಿದ್ದಾರೆ.

## ಪರೀಕ್ಷಾ ಪೂರ್ವ ತರಬೇತಿ ಅನುದಾನದಲ್ಲಿ ಅಕ್ರಮ

• ಉದಯವಾಹಿನಿ, ಬೆಂಗಳೂರು

ಸಮಾಜ ಕಲ್ಯಾಣ ಇಲಾಖೆ ಪರೀಕ್ಷಾ ಪೂರ್ವ ತರಬೇತಿಗೆಂದು ನಿಗದಿಪಡಿಸಿರುವ 112.87 ಕೋಟಿ ಅನುದಾನದಲ್ಲಿ ಅಕ್ರಮ ನಡೆದಿದೆ. ಈ ಕುರಿತು ಲೋಕಾಯುಕ್ತ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್.ಮಹೇಶ್ ಒತ್ತಾಯಿಸಿದರು. ಸಮಾಜ ಕಲ್ಯಾಣ ಇಲಾಖೆ 2024-25 ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಗಾಗಿ ಈ ಮೊತ್ತವನ್ನು ನಿಗದಿಪಡಿಸಿದೆ. ಈಗ ಎಸ್‌ಐ ಮತ್ತು ಕಾನ್‌ಸ್ಟೇಬಲ್ ನೇಮಕಾತಿ ನಡೆಯುತ್ತಿದೆ. ಇದಕ್ಕೆ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಉತ್ತಮ ಸಂಸ್ಥೆಗಳಿಗೆ ಟೆಂಡರ್ ನೀಡಿಲ್ಲ.

ಬದಲಿಗೆ ಟೆಂಡರ್‌ನಲ್ಲಿ ಎಲ್-1 ಆಗಿದ್ದ ಕಡಿಮೆ ಗುಣಮಟ್ಟದ ತರಬೇತಿ ಸಂಸ್ಥೆಗಳಿಗೆ ಟೆಂಡರ್ ನೀಡಲಾಗಿದೆ. ವಿಜಯಪುರದಕಬ್ಬರ್ ಅಕಾಡೆಮಿ ಮತ್ತು ಎಸ್.ವಿ.ವಿಸ್ಲಂ ಅಕಾಡೆಮಿಗಳಿಗೆ 40 ಕೋಟಿ ಟೆಂಡರ್ ನೀಡಲಾಗಿದೆ ಎಂದು ದೂರಿದರು.

## ಶಿವನು ವೇದ ಮೂಲದವನಲ್ಲ ಎಂಬುದು ಗೊತ್ತೇ: ಜಾಮದಾರ


• ಉದಯವಾಹಿನಿ, ಬೆಂಗಳೂರು

'ಶಿವನು ವೇದ ಮೂಲದವನಲ್ಲ ಎನ್ನುವುದಾದರೂ ನಿಮಗೆ ಏನಾದರೂ ಗೊತ್ತಿದೆಯೇ' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಅವರು ಬಿಜೆಪಿಯ ಪ್ರತಾಪ್ ಸಿಂಹ ಅವರನ್ನು ಪ್ರಶ್ನಿಸಿದ್ದಾರೆ. 'ಪ್ರತಾಪ ಅವರೆ, 'ಕಾವಿಧಾರಿಗಳೆ ನಿಮ್ಮ ದೇವರು ಯಾವುದು' ಎಂದು ಪ್ರಶ್ನಿಸಿದ್ದೀರಿ. ಲಿಂಗಾಯತರ 'ಶಿವ' ಎಂಬ ದೇವರು, 'ವೈದಿಕ'ರ ಶಿವನಲ್ಲ.

ಋಗ್ವದದಲ್ಲಿ ಬರುವ ರುದ್ರನನ್ನು ನೀವೇ ಬಹುಕಾಲದ ನಂತರ ಶಿವ ಎಂದು ಹಲುಬಿದಿರಿ. ಆಗಮ ಮೂಲದ ಶಿವನೂ ನಿಮ್ಮ ಅನರ್ಥ ಅರ್ಥೈಸುವಿಕೆಯಿಂದ ಭಗ್ನನಾದನು. ಆ ನಂತರ ಬಂದ ಶ್ವೇತಾಶ್ವರ ಉಪನಿಷತ್ತಿನಲ್ಲಿ ಶಿವನ ಬಗ್ಗೆ ಒಂದಿಷ್ಟು ಮಾಹಿತಿಯಿದೆ. ಆದಾಗ್ಯೂ, ಹರಪ್ಪ, ಮಹೆಂಜದಾರೋಗಳ ಉತ್ಖನನದಲ್ಲಿ ದೊರೆತ ಶಿವಲಿಂಗಗಳು ವೇದಪೂರ್ವ ಕಾಲದವು ಎಂಬುದು ಜಗತ್ತೇ ತಿಳಿದಿದೆ' ಎಂದಿದ್ದಾರೆ. 'ಲಿಂಗಾಯತರ ಶಿವ ಬೂದಿಬಡುಕನಲ್ಲ. ಸ್ಮಶಾನದಲ್ಲಿ ಪಿಶಾಚಿಯಂತೆ ತಿರುಗುವವನಲ್ಲ.

ಇವೆಲ್ಲ ಶಿವನಿಗೆ ಕೊಟ್ಟ ಹೆಸರುಗಳು, ಹೆಸರಿಗೊಂದರಂತೆ ಬರೆದ ಕತೆಗಳು ಮತ್ತು ಶೈವ ಪುರಾಣಗಳ ಸೃಷ್ಟಿಗಳು. ಲಿಂಗಾಯತ ಶರಣರು ಈ ಪುರಾಣಗಳನ್ನು, 'ಪುಂಡರ ಗೋಷ್ಠಿಗಳು' ಎಂದು ಅವುಗಳನ್ನು ತಿರಸ್ಕರಿಸಿದ್ದಾರೆ' ಎಂದಿದ್ದಾರೆ. 'ನಿಮ್ಮ ಸ್ವರ್ಗ-ನರಕಗಳನ್ನು ಶರಣರು ಅಲ್ಲಗೆಳೆದಿದ್ದಾರೆ. ಅಲ್ಲಮರ ವಚನಗಳಂತೂ ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತಗಳನ್ನು ತಿರಸ್ಕರಿಸುತ್ತವೆ. ಆದ್ದರಿಂದಲೇ ಲಿಂಗಾಯತರು ಸತ್ತಾಗ 'ಲಿಂಗೈಕ್ಯ'ರಾಗುತ್ತಾರೆ. ವೀರಶೈವರು ಸತ್ತರೆ 'ಸ್ವರ್ಗವಾಸಿ' ಇಲ್ಲವೆ 'ಕೈಲಾಸ ವಾಸಿ'ಯಾಗುತ್ತಾರೆ' ಎಂದು ಜಾಮದಾರ ಹೇಳಿದ್ದಾರೆ.

ಪ್ರಹ್ಲಾದ್ ಜೋಶಿ, ವಿಶ್ವೇಶ್ವರ ಭಟ್ ಮುಂದಾಳತ್ವದಲ್ಲಿ ಭೈರಪ್ಪ ಅಂತ್ಯಕ್ರಿಯೆ




ಸಾಹಿತಿ ಎಸ್‌ಎಲ್ ಭೈರಪ್ಪ ಇನ್ನು ನೆನಪು

# ಬದುಕಿನ 'ಯಾನ' ಮುಗಿಸಿದ ಸಾಹಿತಿ

# ಎಸ್.ಎಲ್ ಭೈರಪ್ಪ ಪಂಚಭೂತಗಳಲ್ಲಿ ಲೀನ!

ಅಕ್ಷರ ಮಾಂತ್ರಿಕನಿಗೆ ಸಕಲ ಸರ್ಕಾರಿ ಗೌರವ





### ಸರ್ಕಾರಿ ಗೌರವ ಸಲ್ಲಿಕೆ

ಪೊಲೀಸ್ ಅಧಿಕಾರಿ ಶಿವಾನಂದ ನೇತೃತ್ವದ ಹತ್ತು ಜನರ ತಂಡವು ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಭೈರಪ್ಪರಿಗೆ ಗೌರವ ಸಲ್ಲಿಸಿತು. ಪ್ರಹ್ಲಾದ್ ಜೋಶಿ, ಸಚಿವ ಮಹದೇವಪ್ಪ ಸೇರಿದಂತೆ ಹಲವು ರಾಜಕೀಯ ಗಣ್ಯರ ನೇತೃತ್ವದಲ್ಲಿ ಭೈರಪ್ಪ ಅವರ ಮಕ್ಕಳಾದ ರವಿಶಂಕರ್ ಹಾಗೂ ಉದಯ್ ಶಂಕರ್ ಅವರಿಗೆ ರಾಷ್ಟ್ರಧ್ವಜವನ್ನು ಹಸ್ತಾಂತರಿಸಿದರು.

1. ಪಂಚಭೂತಗಳಲ್ಲಿ ಹಿರಿಯ ಸಾಹಿತಿ ಎಸ್‌ಎಲ್ ಭೈರಪ್ಪ ಲೀನ
2. ಚಾಮುಂಡಿ ತಪ್ಪಲಿನ ಚಿತಾಗಾರದಲ್ಲಿ ಅಂತ್ಯಕ್ರಿಯೆ
3. ಪುತ್ರರು ಮತ್ತು ಸಹನಾ ವಿಜಯ್ ಕುಮಾರ್‌ರಿಂದ ಚಿತೆಗೆ ಅಗ್ನಿ ಸ್ಪರ್ಶ

### ಪುತ್ರರು, ಸಹನಾರಿಂದ ಅಂತಿಮ ಸಂಸ್ಕಾರ

ಮುಂಜಾನೆಯಿಂದಲೇ ಮೈಸೂರಿನಲ್ಲಿರುವ ಭೈರಪ್ಪನವರ ನಿವಾಸದಲ್ಲಿ ಅಂತಿಮ ವಿಧಿವಿಧಾನ ಕೈಗೊಳ್ಳಲಾಯಿತು. ಅಭಿಮಾನಿಗಳು ಅಂತಿಮ ವಿಧಿವಿಧಾನದಲ್ಲಿ ಭಾಗವಹಿಸಿ ಭೈರಪ್ಪ ಅವರಿಗೆ ನಮನ ಸಲ್ಲಿಸಿದರು. ಆನಂತರ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವ ನೀಡಲಾಯಿತು. ಪುತ್ರರು ಮತ್ತು ಭೈರಪ್ಪರ ಕೊನೆ ಗಾಲದಲ್ಲಿ ಜೊತೆಗಿದ್ದ ಸಹನಾ ವಿಜಯ್ ಕುಮಾರ್‌ರಿಂದ ಚಿತೆಗೆ ಅಗ್ನಿ ಸ್ಪರ್ಶಿಸಲಾಯಿತು. ಅವರ ಪಾರ್ಥೀವ ಶರೀರಕ್ಕೆ ಸರ್ಕಾರಿ ಗೌರವ ಸಲ್ಲಿಸಿ, ಹೊಯ್ಸಳ ಬ್ರಾಹ್ಮಣ ಸಂಪ್ರದಾಯದ ಪ್ರಕಾರ ಅಂತಿಮ ಸಂಸ್ಕಾರದ ಕಾರ್ಯಗಳನ್ನು ನಡೆಸಲಾಯಿತು. ಪತ್ನಿ ಸರಸ್ವತಿ, ಭೈರಪ್ಪನವರ ಕುಟುಂಬಸ್ಥರು, ಅಭಿಮಾನಿಗಳು, ಶಿಷ್ಯರು, ರಾಜಕೀಯ ಗಣ್ಯರಾದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಚಿವ ಮಹದೇವಪ್ಪ, ಪ್ರತಾಪ್ ಸಿಂಹ ಸೇರಿ ಹಲವರು ಭೈರಪ್ಪರಿಗೆ ಕಣ್ಣೀರಿನ ವಿದಾಯ ಹೇಳಿದರು.

**ಚಿತೆಗೆ ಅಗ್ನಿಸ್ಪರ್ಶ ಮಾಡಿದ ಲೇಖಕಿ ಸಹನಾ**

• ಉದಯವಾಹಿನಿ, ಮೈಸೂರು

ದಿವಂಗತ ಹಿರಿಯ ಸಾಹಿತಿ, ಕನ್ನಡದ ಹೆಮ್ಮೆಯ ಕಾದಂಬರಿಕಾರ, ಕನ್ನಡದ ಓದುಗರ ಭಾವತಂತುಗಳನ್ನು ಮೀಟಿದ ಸರಸ್ವತಿಯ ವರಪುತ್ರ ಡಾ.ಎಸ್.ಎಲ್ ಭೈರಪ್ಪ ಅವರಿಗೆ ಇಂದು ಕನ್ನಡಿಗರು ಭಾರವಾದ ಹೃದಯದಿಂದ ವಿದಾಯ ಹೇಳಿದ್ದಾರೆ. ಅವರ ಪಾರ್ಥಿವ ಶರೀರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಮಧ್ಯಾಹ್ನ ಪಂಚಭೂತಗಳಲ್ಲಿ ಲೀನವಾಯಿತು. ಸಕಲ ಸರ್ಕಾರಿ ಗೌರವಗಳೊಂದಿಗೆ ಬ್ರಾಹ್ಮಣ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಲಾಯಿತು. ಅಂತ್ಯಸಂಸ್ಕಾರದ ವೇಳೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯ ಸಚಿವ ಎಚ್‌ಸಿ ಮಹದೇವಪ್ಪ. ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತಿತರರು ಉಪಸ್ಥಿತರಿದ್ದರು.

ಅಗಲಿದ ಕಾದಂಬರಿಕಾರ ಭೈರಪ್ಪ ಅವರಿಗೆ ಸಕಲ ಸರ್ಕಾರಿ ಗೌರವ ಸಲ್ಲಿಕೆ ಮಾಡಲಾಯಿತು. ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜ ಹೊದಿಸಿ ಗೌರವ ಸಲ್ಲಿಕೆ ಮಾಡಿದರು. ಹಲವು ಗಣ್ಯರು ಗೌರವ ಸಮರ್ಪಣೆ ಮಾಡಿದರು ಗಾಳಿಯಲ್ಲಿ ಮೂರು ಸುತ್ತಿನ ಗುಂಡು ಹಾರಿಸಿ ಪೊಲೀಸರಿಂದ ಗೌರವ ಸಲ್ಲಿಕೆ ನೆರವೇರಿತು. ಈ ಸಂದರ್ಭದಲ್ಲಿ ರಾಷ್ಟ್ರಗೀತೆ ಮೊಳಗಿತು. ಸರ್ಕಾರಿ ಗೌರವದ ಬಳಿಕ ತ್ರಿವರ್ಣ ಧ್ವಜ ಹಸ್ತಾಂತರ ಮಾಡಲಾಯಿತು. ಭೈರಪ್ಪನವರ ಮಕ್ಕಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಹೆಚ್‌ಸಿ ಮಹದೇವಪ್ಪ ತ್ರಿವರ್ಣ ಧ್ವಜ ಹಸ್ತಾಂತರ ಮಾಡಿದರು. ಭೈರಪ್ಪನವರ ಪುತ್ರರಾದ ಉದಯಶಂಕರ್ ಹಾಗೂ ರವಿಶಂಕರ್ ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ನೆರವೇರಿಸಿ ಅಗ್ನಿಸ್ಪರ್ಶ ಮಾಡಿದರು. ಭೈರಪ್ಪನವರನ್ನು ಮಗಳಂತೆ ಅಕ್ಕರೆಯಿಂದ ನೋಡಿಕೊಂಡ ಕಾದಂಬರಿಕಾರ್ತಿ ಸಹನಾ ವಿಜಯಕುಮಾರ್, ಪ್ರತಾಪ್‌ಸಿಂಹ ಕೂಡ ಅಗ್ನಿಸ್ಪರ್ಶ ಮಾಡಿದರು. ಭೈರಪ್ಪ ಅವರ ಕೊನೆಯ ದಿನಗಳಲ್ಲಿ ಅವರೊಂದಿಗೆ ಇದ್ದ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಈ ಸಂದರ್ಭದಲ್ಲಿ ಜೊತೆಗಿದ್ದರು. ಮೈಸೂರು ಹಾಗೂ ಬೆಂಗಳೂರಿನ ಜನತೆ, ಭೈರಪ್ಪನವರ ಸಾಹಿತ್ಯಾಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಸೇರಿ ಈ ಅಂತ್ಯಕ್ರಿಯೆಗೆ ಸಾಕ್ಷಿಯಾದರು. ಅಂತ್ಯಸಂಸ್ಕಾರ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಎಡಿಸಿ ಶಿವರಾಜು ಸೇರಿದಂತೆ ಅಧಿಕಾರಿ ವರ್ಗ ಭಾಗಿಯಾಗಿತ್ತು.

ಬೆಂಗಳೂರಿನಲ್ಲಿ ಅಗಲಿದ ಡಾ.ಎಸ್.ಎಲ್. ಭೈರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಗುರುವಾರ ಬೆಂಗಳೂರಿನಲ್ಲಿ ನಡೆದಿತ್ತು. ಸಿಎಂ, ಡಿಸಿಎಂ ಸೇರಿದಂತೆ ಗಣ್ಯರು ಆಗಮಿಸಿ ಗೌರವ ಸಲ್ಲಿಸಿದ್ದರು. ಗುರುವಾರ ಶರೀರವನ್ನು ಮೈಸೂರಿಗೆ ತಂದು ನಗರದ ಕಲಾ ಮಂದಿರ ಬಳಿಯ ಕಿಂದರಿ ಜೋಗಿ ಆವರಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಇಂದು ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿದೆ.

**ಸಾಹಿತ್ಯ ಲೋಕದ 'ಪರ್ವ' ಯುಗಾಂತ್ಯ**

**ಭೈರಪ್ಪಗೆ ಸಿಎಂ ಸೇರಿ ಹಲವು ಗಣ್ಯರಿಂದ ಅಂತಿಮ ನಮನ:** ಕನ್ನಡದ ಅಸ್ಮಿತೆಯಾಗಿದ್ದ ಹಿರಿಯ ಕಾದಂಬರಿಕಾರ, ಸರಸ್ವತಿ ಸಮ್ಮಾನ್ ಪುರಸ್ಕೃತ ಸಾಹಿತಿ ಎಸ್.ಎಸ್. ಭೈರಪ್ಪ ಸೆಪ್ಟೆಂಬರ್ 24ರಂದು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. 94 ವರ್ಷದ ಅವರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರು ಪತ್ನಿ ಸರಸ್ವತಿ, ಪುತ್ರರಾದ ರವಿಶಂಕರ್, ಉದಯ್ ಶಂಕರ್ ಸೇರಿದಂತೆ ಅಪಾರ ಅಭಿಮಾನಿ ಬಳಗವನ್ನು ಅಗಲಿದ್ದಾರೆ.

### ಪ್ರಧಾನಿ ಕಂಬನಿ, ಶೋಕ ಸಂದೇಶ



ಭೈರಪ್ಪ ಅವರ ಪೂರ್ಣ ಹೆಸರು ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ ಎಂದು. ಕನ್ನಡ ಸಾಹಿತ್ಯ ಲೋಕದ ದಿಗ್ಗಜ ವ್ಯಕ್ತಿಯಾಗಿದ್ದರು. 1931ರ ಆಗಸ್ಟ್ 20ರಂದು ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸಂತೇಶಿವರ ಗ್ರಾಮದಲ್ಲಿ ಜನಿಸಿದರು. ಭೈರಪ್ಪನವರು ಭಾರತದ ಆತ್ಮವನ್ನು ಆಳವಾಗಿ ಅಧ್ಯಯನ ಮಾಡಿದ ಒಬ್ಬ ಧೀಮಂತ ಸಾಹಿತಿ, ಸಂಶೋಧಕರನ್ನು ಕಳೆದುಕೊಂಡಂತಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಹ ಕಂಬನಿ ಮಿಡಿದಿದ್ದು, ಶೋಕ ಸಂದೇಶ ಕಳಿಸಿದ್ದಾರೆ. ಭೈರಪ್ಪ ಅವರ ಕುಟುಂಬಕ್ಕೆ ಸ್ಥೈರ್ಯ ನೀಡಿದ್ದಾರೆ. ಭಾರತ ಸರ್ಕಾರ, ಪ್ರಧಾನಿ ಮೋದಿ ಅವರ ಪರವಾಗಿ ಮತ್ತು ವೈಯಕ್ತಿಕವಾಗಿ ಭೈರಪ್ಪ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ನಮನ ಸಲ್ಲಿಸಿದ್ದೇನೆ ಎಂದರು.

### ವಿಲ್ ಗೊಂದಲ

ಭೈರಪ್ಪನವರ ಬೆಂಬಲಿಗರೊಬ್ಬರು ವಿಲ್‌ವೊಂದನ್ನು ಪ್ರದರ್ಶಿಸಿದ್ದರು. ಅದರಲ್ಲಿ ಭೈರಪ್ಪನ ಚಿತೆಗೆ ಸಹನಾ ವಿಜಯ್ ಕುಮಾರ್ ಎಂಬುವವರು ಮಾತ್ರ ಅಗ್ನಿ ಸ್ಪರ್ಶಿಸಬೇಕು. ಪುತ್ರರು ಈ ಕ್ರಿಯೆಯಲ್ಲಿ ಭಾಗಿಯಾಗಬಾರದು ಎಂದಿತ್ತು. ಇದು ಸಾಕಷ್ಟು ಗೊಂದಲಕ್ಕೆ ಎಡೆಮಾಡಿ ಕೊಟ್ಟಿತ್ತು. ಮೈಸೂರು ಪೊಲೀಸರು ಬೆಂಬಲಿಗನನ್ನು ವಶಕ್ಕೆ ಪಡೆದರು.

## ಧರ್ಮಸ್ಥಳ ದೇವಸ್ಥಾನವನ್ನು ಧಾರ್ಮಿಕ ದತ್ತಿ ಇಲಾಖೆಗೆ ನೀಡುವ ಪ್ರಸ್ತಾಪವಿಲ್ಲ


• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳ ದೇವಸ್ಥಾನವನ್ನು ಧಾರ್ಮಿಕ ದತ್ತಿ ಇಲಾಖೆಗೆ ನೀಡುವ ಪ್ರಸ್ತಾಪವಿಲ್ಲ ಎಂದು ಸಚಿವ ರಾಮಲಿಂಗಾ ರೆಡ್ಡಿ ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿ ಈ ಕುರಿತಾಗಿ ಮಾತನಾಡಿದ ಅವರು, ಸರ್ಕಾರದ ಮುಂದೆ ಈ ರೀತಿಯ ಯಾವುದೇ ಪ್ರಸ್ತಾಪವಿಲ್ಲ ಎಂದು ತಿಳಿಸಿದರು.

ಹಿಂದೂ ದೇವಾಲಯಗಳನ್ನ ಧಾರ್ಮಿಕ ದತ್ತಿ ಇಲಾಖೆಯಿಂದ ಬಿಡುಗಡೆ ಮಾಡಿ ಎಂದು ರಾಜ್ಯಪಾಲರಿಗೆ ವಿಎಚ್‌ಪಿ ದೂರು ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ವಿಶ್ವ ಹಿಂದೂ ಪರಿಷತ್ ಮುಖಂಡರಿಗೆ ಟಾಂಗ್ ನೀಡಿದರು. ಇಡೀ ದೇಶದಲ್ಲೇ ಮೋದಿ ಒಂದು ಕಾನೂನು ತಂದರೆ ನಮ್ಮ ಅಭ್ಯಂತರವಿಲ್ಲ. ಈ ಸಂಬಂಧ ಒಂದು ಕಾನೂನು ತಂದರೆ ಮುಗಿಯಿತು. ಹಿಂದೆ ಧಾರ್ಮಿಕ ದತ್ತಿ ಇಲಾಖೆಯೇ ಇರಲಿಲ್ಲ. ಅನುವಂಶಿಕ ದೇವಾಲಯಗಳಿದ್ದವು. ಆಗ ಅಣ್ಣ, ತಮ್ಮಂದಿರು ಹಾಗೂ ಉತ್ತರಾಧಿಕಾರಿಗಳ ನಡುವೆ ಜಗಳ ನಡೆದ ಕಾರಣ ಬ್ರಿಟಿಷ್ ಕಾಲದಲ್ಲಿ ಮುಜರಾಯಿ ಇಲಾಖೆ ಆರಂಭ ಆಯಿತು ಎಂದು ವಿವರಿಸಿದರು.

**ವಿಶ್ವ ಹಿಂದೂ ಪರಿಷತ್ ಮುಖಂಡರಿಗೆ ಟಾಂಗ್**

ಸಿ ವರ್ಗದ ದೇವಾಲಯಗಳಿವೆ ಅದನ್ನು ಅಭಿವೃದ್ಧಿ ಮಾಡಿದ್ರೆ ಸಾಕು. ಅದಕ್ಕೆ ಬಿಜೆಪಿ ಅವರು ಅಡ್ಡ ಬಂದರು. ಬಿಜೆಪಿ ಅವರು ದೇವರ ಕೆಲಸಕ್ಕೂ ಅಡ್ಡ ಬರ್ತಾರೆ ಎಂದು ಆರೋಪಿಸಿದರು. ಶಕ್ತಿ ಯೋಜನೆ ಸರ್ಕಾರದಿಂದ ಅನುದಾನ ಬಾಕಿ ವಿಚಾರವಾಗಿ ಇದೇ ವೇಳೆ ಮಾತನಾಡಿ, ಸ್ವಲ್ಪ ಬಾಕಿಯಿದೆ ಅದರಲ್ಲಿ ಒಂದು ಸಾವಿರ ಕೋಟಿ ಉಚಿತವಾಗಿ ನೀಡಿದ್ದಾರೆ. 3 ಸಾವಿರ ಕೋಟಿ ಬಾಕಿಯಿತ್ತು. ಒಂದು ಸಾವಿರ ಕೋಟಿ ಸಿಎಂ ಸಿದ್ದರಾಮಯ್ಯ ಅವರು ನೀಡಿದ್ದಾರೆ ಎಂದು ವಿವರಿಸಿದರು.



ಪುದುಚೇರಿಯಲ್ಲಿ ಕಾಂಗ್ರೆಸ್ ಶಾಸಕನಿಂದ ಕಾರು ಖರೀದಿಸಿದ ವಿಚಾರವಾಗಿ ಇದೇ ಸಂದರ್ಭದಲ್ಲಿ ಮಾತನಾಡಿ, ತೆರಿಗೆ ವಂಚನೆ ಮಾಡಿ ಬೇರೆ ಕಡೆ ವಾಹನ ತಗೊಂಡು ಇಲ್ಲಿಗೆ ಬಂದಿದ್ರೆ ಅವರು ಒಂದು ವರ್ಷ ಆದ ಬಳಿಕ ಟ್ಯಾಕ್ಸ್ ಕಟ್ಟಬೇಕು. ಅದು ಯಾರೇ ಆಗಿರಲಿ ಟ್ಯಾಕ್ಸ್ ಕಟ್ಟಬೇಕು ಎಂದು ಸಚಿವರು ಸ್ಪಷ್ಟಪಡಿಸಿದರು.

ಇನ್ನು ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ರಸ್ತೆ ಗುಂಡಿ ವಿಚಾರವಾಗಿಯೂ ಮಾತನಾಡಿ ಬಿಜೆಪಿ ವಿರುದ್ಧ ಹರಿಹಾಯ್ದರು. ರಸ್ತೆ ಗುಂಡಿ ಸಮಸ್ಯೆಗೆ ಹಿಂದಿನ ಬಿಜೆಪಿ ಸರ್ಕಾರ ಕಾರಣ ಎಂದು ಆರೋಪ ಮಾಡಿದ ಅವರು, ಕಾಂಗ್ರೆಸ್ ಸರ್ಕಾರ ನಗರದ ರಸ್ತೆ ಗುಂಡಿಗಳನ್ನು ಮುಚ್ಚಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದೆ ಎಂದು ತಿಳಿಸಿದರು.

## ಜಾತಿ ಗಣತಿ: ಶಿಕ್ಷಕರಿಗೆ ಸಂಭಾವನೆಗೆ 60 ಕೋಟಿ ರೂ.

• ಉದಯವಾಹಿನಿ, ಬೆಂಗಳೂರು



ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸೆಪ್ಟೆಂಬರ್ 22 ರಿಂದ ಆರಂಭಿಸಿರುವ ಸಮೀಕ್ಷೆಯಲ್ಲಿ ಒಟ್ಟು 1.20 ಲಕ್ಷ ಸಮೀಕ್ಷಕರು ಪಾಲ್ಗೊಂಡಿದ್ದಾರೆ. ಸಮೀಕ್ಷಾದಾರರಿಗೆ 5000 ರೂ. ಜತೆಗೆ ಪ್ರತಿ ಮನೆ ಸಮೀಕ್ಷೆಗೆ 100 ರೂ. ಹಾಗೂ ಮೇಲ್ವಿಚಾರಕರಿಗೆ 10,000 ರೂ. ಗೌರವ ಸಂಭಾವನೆ ನಿಗದಿಪಡಿಸಲಾಗಿದೆ.

ಮೊದಲ ಕಂತಿನಲ್ಲಿ 60.36 ಕೋಟಿ ರೂ.ಗಳನ್ನು ಎಲ್ಲಾಜಿಲ್ಲಾಧಿಕಾರಿಗಳ ಪಿ.ಡಿ. ಖಾತೆ/ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಿ ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ.ದಯಾನಂದ್ ಆದೇಶ ಹೊರಡಿಸಿದ್ದಾರೆ. ಅನುದಾನ ಬಳಕೆಗೆ ಎರಡು ನಿಬಂಧನೆಗಳನ್ನು ವಿಧಿಸಲಾಗಿದೆ.

ಅನುದಾನವನ್ನು ಸಮೀಕ್ಷಾದಾರರಿಗೆ ತಲಾ 5000 ರೂ.ನಂತೆ ಮೊದಲ ಕಂತಿನ ಗೌರವಧನ ನೀಡಲು ಬಳಸಬೇಕು. ಉಳಿದ ಅನುದಾನವನ್ನು ಮುಂದಿನ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು. ಸಮೀಕ್ಷೆಗೆ ಸಂಬಂಧಪಟ್ಟಂತೆ ಬಿಡುಗಡೆ ಮಾಡಲಾದ ಅನುದಾನ, ವೆಚ್ಚದ ವಿವರವನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು ಹಾಗೂ ನಿಯಮಾನುಸಾರ ವೆಚ್ಚಗಳನ್ನು ಭರಿಸಿದ ನಂತರ ಹಣ ವಿನಿಯೋಗ ಪ್ರಮಾಣ ಪತ್ರವನ್ನು ಆಯೋಗಕ್ಕೆ ಸಲ್ಲಿಸಬೇಕೆಂದು ಸೂಚಿಸಿದ್ದಾರೆ.

### ಸ್ವಯಂ ಇಚ್ಛೆಗೆ ಬಿಟ್ಟ ಸಂಗತಿ

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸೆ.22ರಿಂದ ಆರಂಭಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದು ಜನರ/ ಕುಟುಂಬಗಳ ಸ್ವಯಂ ಇಚ್ಛೆಗೆ ಬಿಟ್ಟಿದ್ದು ಎಂಬುದಾಗಿ ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ.ದಯಾನಂದ್ ತಿಳಿಸಿದ್ದಾರೆ. ಸಮೀಕ್ಷೆಯಲ್ಲಿ ರಾಜ್ಯದ ಎಲ್ಲಾ ಜನರನ್ನೂ ಸಮೀಕ್ಷೆಗೆ ಒಳಪಡಿಸಲು ಉದ್ದೇಶಿಸಲಾಗಿದ್ದರೂ ಸಮೀಕ್ಷೆಯಲ್ಲಿಭಾಗವಹಿಸುವುದು ಜನರ/ಕುಟುಂಬಗಳ ಸ್ವಯಂ ಇಚ್ಛೆಗೆ ಬಿಡಲಾಗಿದೆ. ಮಾಹಿತಿಯನ್ನು ನೀಡುವ ಬಗ್ಗೆ ಆಯೋಗ ಒತ್ತಾಯ ಮಾಡುವುದಿಲ್ಲಎಂದು ಅವರು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

## ಪಪ್ಪಿ ಜಾಮೀನು ಅರ್ಜಿ ಸಲ್ಲಿಕೆಗೆ ಕರ್ನಾಟಕ ಹೈಕೋರ್ಟ್ ಅನುಮತಿ

### ■ ಅಕ್ರಮ ಬೆಟ್ಟಿಂಗ್ ಆರೋಪದ ಮೇರೆಗೆ ಜಾರಿ ನಿರ್ದೇಶನಾಲಯದಿಂದ ಚಿತ್ರದುರ್ಗ ಶಾಸಕರ ಬಂಧನ

• ಉದಯವಾಹಿನಿ, ಬೆಂಗಳೂರು

ಅಕ್ರಮ ಬೆಟ್ಟಿಂಗ್ ಆರೋಪದ ಮೇರೆಗೆ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಶಾಸಕ ಕೆ.ಸಿ.ವೀರೇಂದ್ರಗೆ ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿಯ ಸಲ್ಲಿಸಲು ಕರ್ನಾಟಕ ಹೈಕೋರ್ಟ್ ಅನುಮತಿ ನೀಡಿದೆ.

**ಎರಡು ದಿನ ಮಧ್ಯಂತರ ಜಾಮೀನು**



ತಮ್ಮ ಪತಿಯ ಬಂಧನವನ್ನು ಅಕ್ರಮವೆಂದು ಘೋಷಿಸುವಂತೆ ಕೋರಿ ಕೆಸಿ ವೀರೇಂದ್ರ ಪತ್ನಿ ಆರ್‌ಡಿ ಚೈತ್ರಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಐ. ಅರುಣ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಆ ವೇಳೆ ನ್ಯಾಯಾಲಯ ವಾದ - ಪ್ರತಿವಾದ ಆಲಿಕೆ ಪೂರ್ಣಗೊಳಿಸಿತು.

ಆನಂತರ ಅರ್ಜಿದಾರರ ಪರ ವಕೀಲರು, ದಸರಾ ಹಬ್ಬದ ಹಿನ್ನೆಲೆಯಲ್ಲಿ ಎರಡು ದಿನ ಮಧ್ಯಂತರ ಜಾಮೀನು ನೀಡುವಂತೆ ಕಳೆದ ವಿಚಾರಣೆ ವೇಳೆ ನ್ಯಾಯಪೀಠವನ್ನು ಕೋರಲಾಗಿತ್ತು. ನ್ಯಾಯಾಲಯ, ಕೇಂದ್ರ ಸರಕಾರಿ ವಕೀಲರಿಗೆ ಆ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿತ್ತು ಎಂದರು.

ಅದಕ್ಕೆ ಕೇಂದ್ರ ಸರಕಾರಿ ವಕೀಲರು, ಅರ್ಜಿದಾರರ ಪತಿಗೆ ಜಾಮೀನು ಅಗತ್ಯವಿದ್ದಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಏಕಾಏಕಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗದು ಮತ್ತು ಮಧ್ಯಂತರ ಜಾಮೀನು ಮಂಜೂರು ಮಾಡಬಾರದು ಎಂದು ಹೇಳಿತು.



**ಅಕ್ರಮ ಬಂಧನವೆಂದು ಹೇಳಲಾಗದು**

ಅರ್ಜಿದಾರರ ಪತಿ ನಡೆಸಿರುವ ಅಪರಾಧ ಕೃತ್ಯಗಳಿಂದ ದೊಡ್ಡ ಪ್ರಮಾಣದಲ್ಲಿ ಆದಾಯ ಗಳಿಸಿದ್ದಾರೆ. ಅವರು ಗೋವಾ ಮತ್ತು ದುಬೈನಲ್ಲಿ ಮನೆಗಳನ್ನು ಮಾಡಿಕೊಂಡಿರುವುದು ವಿಚಾರಣೆ ವೇಳೆ ಗೊತ್ತಾಗಿದ್ದು, ಅದಕ್ಕೆ ಸಾಕ್ಷ್ಯಾಧಾರಗಳಿವೆ. ಅಲ್ಲದೆ, ವೀರೇಂದ್ರ ಅವರನ್ನು ನ್ಯಾಯಾಲಯದ ಮೂಲಕ ರಿಮ್ಯಾಂಡ್ ಆದೇಶ ಪಡೆದು ಬಂಧನಕ್ಕೊಳಪಡಿಸಲಾಗಿದೆ. ಅಲ್ಲದೆ, ಕಾನೂನು ಪ್ರಕಾರವೇ ಬಂಧನ ಮಾಡಲಾಗಿದೆ. ಹೀಗಾಗಿ, ಅಕ್ರಮ ಬಂಧನವೆಂದು ಹೇಳಲಾಗದು,'' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

**ಜಾಮೀನು ಅರ್ಜಿ ಸಲ್ಲಿಸಲು ಅನುಮತಿ:** ಆಗ ಅರ್ಜಿದಾರರ ಪರ ವಕೀಲರು, ಹಾಗಿದ್ದರೆ ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಲು ಅನುಮತಿ ನೀಡಬೇಕು ಎಂದು ಕೋರಿದರು. ಅದಕ್ಕೆ ನ್ಯಾಯಾಲಯ ಸಮ್ಮತಿ ಸೂಚಿಸಿ ವಿಚಾರಣೆ ಮುಂದೂಡಿತು.

ಕಳೆದ ವಿಚಾರಣೆ ವೇಳೆ ಕೇಂದ್ರ ಸರಕಾರಿ ವಕೀಲರು, ಶಾಸಕ ಕೆಸಿ ವೀರೇಂದ್ರ ಬಂಧನ ಕಾನೂನುಬದ್ಧವಾಗಿಯೇ ಇದೆ. ಅರ್ಜಿದಾರರ ಪತಿ ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿದ್ದಾರೆ. ಆರೋಪ ಸಂಬಂಧ ಆರು ಎಫ್‌ಐಆರ್ ದಾಖಲಾಗಿದ್ದು, ಆರೋಪಪಟ್ಟಿ ಸಲ್ಲಿಸಲಾಗಿದೆ.

ಅವರ ಪತಿಯಿಂದ ವಶಪಡಿಸಿಕೊಂಡಿರುವ ಮೊಬೈಲ್‌ನಲ್ಲಿ ಹಣ ಕಳೆದುಕೊಂಡಿರುವವರ ನೋವಿನ ಮಾತುಗಳಿವೆ. ನಾವು ಹಣ ಕಳೆದುಕೊಂಡಿದ್ದೇವೆ. ನಮಗೆ ಬದುಕುವುದಕ್ಕೂ ಸಾಧ್ಯವಾಗದ ಸ್ಥಿತಿಯಲ್ಲಿದ್ದೇವೆ ಎಂಬ ಸಂದೇಶಗಳಿವೆ. ಇದು ವಂಚನೆ ಮಾಡಿರುವ ಅಂಶಗಳನ್ನು ವಿವರಿಸಲಿದೆ, ಎಂದು ತಿಳಿಸಿದರು.

ಈ ದಿನದ ದರ | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹11,488/Gram24ct ₹10,530/Gram22ct | ಬೆಳ್ಳಿ: ₹142.60/Gram

## ಜಾತಿಗಣತಿ ಸಮೀಕ್ಷೆ ಆರಂಭವಾಗಿ ಇಂದಿಗೆ 4 ದಿನ 2.62 ಲಕ್ಷ ಮನೆಗಳ ಸರ್ವೆ ಮುಕ್ತಾಯ

• ಉದಯವಾಹಿನಿ, ಬೆಂಗಳೂರು

ಜಾತಿಗಣತಿ ಸಮೀಕ್ಷೆ ಆರಂಭವಾಗಿ (ಸೆ.26) 4 ದಿನಗಳು ಕಳೆದಿವೆ. ಸಮೀಕ್ಷೆಯ ಅಂಕಿಅಂಶ ಲಭ್ಯವಾಗಿದ್ದು, ಇದುವರೆಗೂ 2,62,626 ಮನೆಗಳ ಸಮೀಕ್ಷೆ ಮುಕ್ತಾಯಗೊಂಡಿದೆ. 1 ದಿನದ ಸಮೀಕ್ಷೆಗೆ ಟಾರ್ಗೆಟ್ 11.87 ಲಕ್ಷ ಮನೆಗಳ ಟಾರ್ಗೆಟ್ ನೀಡಲಾಗಿತ್ತು. ಅದರಂತೆ ಸಮೀಕ್ಷೆಯ ಟಾರ್ಗೆಟ್ ರೀಚ್ ಆಗಿಲ್ಲ. ಇನ್ನೂ ಸೆ.25 ರಂದು ರಾಜ್ಯಾದ್ಯಂತ 79,804 ಮನೆಗಳ ಸಮೀಕ್ಷೆ ನಡೆದಿದೆ. 19 ಜಿಲ್ಲೆಗಳ 526 ಬ್ಲಾಕ್‌ಗಳಲ್ಲಿ ಸಮೀಕ್ಷೆಗೆ ಇನ್ನೂ ಸಿಬ್ಬಂದಿ ನಿಯೋಜನೆ ಮಾಡಲಾಗಿಲ್ಲ. ಒಟ್ಟು 1,43,81,702 ಕುಟುಂಬಗಳ ಸಮೀಕ್ಷೆಯ ಗುರಿಯನ್ನು ಸರ್ಕಾರ ಹೊಂದಿದೆ. ಅ. 7ರವರೆಗೆ ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಲಿದ್ದಾರೆ. ಜಾತಿ ಗಣತಿಗೆ ಹಿಂದುಳಿದ ವರ್ಗಗಳ ಆಯೋಗ 1.75 ಲಕ್ಷ ಶಿಕ್ಷಕರನ್ನು ಬಳಸಿಕೊಳ್ಳಲಿದ್ದು, ಗಣತಿಗೆ ನಿಯೋಜಿತರಾಗಿರುವ ಶಿಕ್ಷಕರಿಗೆ ಗಣತಿ ಕಾರ್ಯವನ್ನು ಯಾವ ರೀತಿ ನಡೆಸಬೇಕು, ಯಾವೆಲ್ಲಾ ಮಾಹಿತಿಗಳನ್ನು ಸಂಗ್ರಹಿಸಬೇಕು ಎಂಬ ಬಗ್ಗೆ ಈಗಾಗಲೇ ತರಬೇತಿಯನ್ನು ನೀಡಿದೆ.

## 52 ಉಪಜಾತಿಗಳನ್ನ ತೆಗೆದಿದ್ದು ಬೇಸರ ಆಯ್ತು ಕ್ಯಾಥೋಲಿಕ್ ಧರ್ಮಾಧ್ಯಕ್ಷ ಪೀಟರ್ ರಿಚರ್ಡ್

• ಉದಯವಾಹಿನಿ, ಬೆಂಗಳೂರು

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಕ್ರಿಶ್ಚಿಯನ್ ಜೋಡಿತ 52 ಉಪಜಾತಿಗಳನ್ನ ಕೈಬಿಟ್ಟಿರುವುದಕ್ಕೆ ಕ್ಯಾಥೋಲಿಕ್ ಧರ್ಮಾಧ್ಯಕ್ಷ ಪೀಟರ್ ರಿಚರ್ಡ್, ಸಹಾಯಕ ಧರ್ಮಾಧ್ಯಕ್ಷ ಸತೀಶ್ ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ. ಜೊತೆಗೆ ಮಾತನಾಡುತ್ತಾ, ಸಮೀಕ್ಷೆ ಪಟ್ಟಿಯಲ್ಲಿ 52 ಉಪ ಜಾತಿಗಳು ಇರೋದು ನೋಡಿ ಖುಷಿ ಆಗಿತ್ತು. ಆಮೇಲೆ ತೆಗೆದಿದ್ದು ಬೇಸರ ಆಯ್ತು. 52 ಉಪಜಾತಿಗಳನ್ನ ನಾವು ಗುರುತಿಸಿಲ್ಲ ಸರ್ಕಾರ ಗುರುತಿಸಿದ್ದು. ಸರ್ಕಾರದ ನಿರ್ಧಾರಕ್ಕೆ ನಾವು ಬದ್ಧ ಆಗಿರುತ್ತೇವೆ. ಅಲ್ಲದೇ ನಾವು ಮತಾಂತರ ಮಾಡಲ್ಲ, ರಾಜಕಾರಣಿಗಳು ಸುಮ್ಮನೆ ಆರೋಪ ಮಾಡಬಾರದು. ಸಮೀಕ್ಷೆಯಲ್ಲಿ ಜನ ನಿಮಗೆ ಅನಿಸಿದ್ದನ್ನ ಬರೆಸಿ ಅಂತಾ ಕರೆ ಕೊಟ್ಟಿದ್ದಾರೆ. ಇದೇ ವೇಳೆ ಕ್ರೈಸ್ತ ಧರ್ಮಗುರುಗಳು ಮೀಸಲಾತಿ ಬೇಡಿಕೆ ಸಹ ಇಟ್ಟಿದ್ದಾರೆ. ರಾಜ್ಯದಲ್ಲಿ 9.45 ಲಕ್ಷ ಕ್ರೈಸ್ತರಿದ್ದಾರೆ ಅಂತ ಹೇಳ್ತಿದ್ದಾರೆ. ಆದ್ರೆ ನಮ್ಮ ಅಂದಾಜಿನಲ್ಲಿ ಅದಕ್ಕಿಂತಲೂ ಜಾಸ್ತಿ ಇದ್ದಾರೆ. ನಾವು ಈಗ 3ಅ ಯಲ್ಲಿ ಇದ್ದೇವೆ. ಸಮೀಕ್ಷೆ ಮುಗಿದ ಬಳಿಕ 2ಅ ಸೇರ್ಪಡೆ ಮಾಡಬೇಕು ಅಂತ ಒತ್ತಾಯ ಮಾಡ್ತೇವೆ ಎಂದಿದ್ದಾರೆ. ಏಕೆಂದ್ರೆ ನಮ್ಮಲ್ಲೂ ಬಡವರು ಇದ್ದಾರೆ. 2ಅ ಮೀಸಲಾತಿ ಕೊಡಿ ಅಂತ ಧರ್ಮಾಧ್ಯಕ್ಷರು ಸಿಎಂ ಒತ್ತಾಯ ಮಾಡೋದಾಗಿ ತಿಳಿಸಿದ್ದಾರೆ.

## ವಾಣಿವಿಲಾಸ ಆಸ್ಪತ್ರೆಯಲ್ಲಿ ಔಷಧಗಳ ಕೊರತೆ

• ಉದಯವಾಹಿನಿ, ಬೆಂಗಳೂರು


ವಾಣಿವಿಲಾಸ ಸರ್ಕಾರಿ ಆಸ್ಪತ್ರೆಯಲ್ಲಿ ಮೆಡಿಸಿನ್ ಸಿಗದೇ ರೋಗಿಗಳು ಪರದಾಡ್ತಿದ್ದಾರೆ. ಯಾಕೆ ಶಾರ್ಟೆಜ್ ಅಂತ ಪ್ರಶ್ನಿಸಿದ್ರೆ, ರೋಗಿಗಳಿಗೆ ಸಿಬ್ಬಂದಿ ಗದರಿಸ್ತಿದ್ದಾರೆ, ಸಿಎಂ ಅವರನ್ನೇ ಕೇಳಿ ಅಂತ ಉಡಾಫೆ ಉತ್ತರ ಕೊಡ್ತಿದ್ದಾರೆ. ಈ ಕರ್ಮಕಾಂಡ ಕ್ಯಾಮರಾದಲ್ಲಿ ಸೆರೆಯಾಗಿದೆ. ಹೌದು. ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಮೆಡಿಸಿನ್ ಶಾರ್ಟೆಜ್ ಇದೆ. ಅಗತ್ಯ ಔಷಧಿಗಳು ಸಿಗದೇ ರೋಗಿಗಳು ಪರದಾಡ್ತಿದ್ದಾರೆ. ಅನಿವಾರ್ಯವಾಗಿ ಖಾಸಗಿ ಮೆಡಿಕಲ್‌ಗಳಲ್ಲಿ ಕಾಸು ಕೊಟ್ಟು ಔಷಧ ಖರೀದಿ ಮಾಡ್ತಿದ್ದಾರೆ. ಆದ್ರೆ, ಔಷಧ ಕೊಡಿ ಅಂತ ರೋಗಿಗಳು ಕೇಳಿದ್ರೆ ಖಾಲಿಯಾಗಿದೆ, ಸಿಎಂ ರನ್ನೇ ಕೇಳಿ ಅಂತ ಸಿಬ್ಬಂದಿ ಉಡಾಫೆ ಉತ್ತರ ನೀಡಿದ್ದಾರೆ.

**ಸಮಸ್ಯೆ ಆಗಿದ್ರೆ ಸರಿಪಡಿಸುವ ಕೆಲಸ ಮಾಡ್ತೇವೆ:** ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಿಂದ ಔಷಧಿಗಳ ಪೂರೈಕೆಯಲ್ಲಿ ವ್ಯತ್ಯಯ ಆಗ್ತಿದೆ. ಇದರಿಂದ ವಾಣಿವಿಲಾಸ ಆಸ್ಪತ್ರೆಗೆ ಅಗತ್ಯ ಔಷಧಿಗಳು ಪೂರೈಕೆ ಆಗ್ತಿಲ್ಲ. ಕೆಲ ಮಾತ್ರೆಗಳು ಮಾತ್ರ ಸ್ಟಾಕ್ ಇದೆ ಎನ್ನಲಾಗ್ತಿದೆ. ಇನ್ನೂ ಈ ವಿಚಾರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರತಿಕ್ರಿಯಿಸಿ, ವೈದ್ಯಕೀಯ ಶಿಕ್ಷಣ ಸಚಿವರ ಜೊತೆ ಮಾತನಾಡಿ, ಸಮಸ್ಯೆ ಆಗಿದ್ರೆ ಮಾಹಿತಿ ಪಡೆದು ಸರಿಪಡಿಸುವ ಕೆಲಸ ಮಾಡಲಾಗುತ್ತೆ ಎಂದು ತಿಳಿಸಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲಾ ಉಚಿತವಾಗಿ ಸಿಗುತ್ತೆ ಅಂತ ಆಸ್ಪತ್ರೆ ಆವರಣದಲ್ಲಿದ್ದ ಜನೌಷಧಿ ಕೇಂದ್ರಗಳನ್ನ ಮುಚ್ಚಿಸಿದ್ರು. ಈಗ ಆಸ್ಪತ್ರೆಯಲ್ಲಿ ಔಷಧಿಗಳೇ ಸಿಗ್ತಿಲ್ಲ. ಔಷಧಿ ಖರೀದಿಗೆ ಕರೆಯಲಾಗಿರುವ ಟೆಂಡರ್ ಕೂಡ ಅಂತಿಮ ಆಗಿಲ್ಲ. ಹೀಗಾಗಿ ಕೆಲ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಎದುರಿಸುವಂತಾಗಿದೆ.

## ಧರ್ಮಸ್ಥಳ ಕೇಸ್‌ನಲ್ಲಿ ರಾಜ್ಯ ಸರ್ಕಾರ ಜನರ ಕ್ಷಮೆಯಾಚಿಸಬೇಕು: ರವಿಕುಮಾರ್

• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳ ಕೇಸ್‌ನಲ್ಲಿ ರಾಜ್ಯ ಸರ್ಕಾರ ರಾಜ್ಯದ ಜನರ ಕ್ಷಮೆ ಕೇಳಬೇಕು ಎಂದು ಬಿಜೆಪಿ ನಾಯಕ, ಎಂಎಲ್‌ಸಿ ರವಿಕುಮಾರ್ ಆಗ್ರಹ ಮಾಡಿದ್ದಾರೆ. ಧರ್ಮಸ್ಥಳ



ಕೇಸ್‌ನಲ್ಲಿ ಬುರುಡೆ ಗ್ಯಾಂಗ್ ಸುಳ್ಳು ಹೇಳಿದ ವಿಚಾರಕ್ಕೆ ಬಿಜೆಪಿ ಕಚೇರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಧರ್ಮಸ್ಥಳ ಕೇಸ್‌ನಲ್ಲಿ ಷಡ್ಯಂತ್ರ ಮಾಡಿರುವ ಎಲ್ಲರೂ ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ್ದರು. ಸುಪ್ರೀಂಕೋರ್ಟ್ ಅವರ ಅರ್ಜಿ ವಜಾ ಮಾಡಿತ್ತು. ಕೋರ್ಟ್‌ಗೆ ಅರ್ಜಿ ಹಾಕಿರೋರಿಗೆ ಸುಪ್ರೀಂಕೋರ್ಟ್ ಖಾರವಾಗಿ ಪ್ರತಿಕ್ರಿಯೆ ನೀಡಿದೆ. ಬುರುಡೆ ಗ್ಯಾಂಗ್ ಅರ್ಜಿ ವಜಾ ಮಾಡಿದ್ರೂ, ರಾಜ್ಯ ಸರ್ಕಾರ ಇಲ್ಲಿ ಎಸ್‌ಐಟಿ ರಚನೆ ಮಾಡಿತ್ತು. ಸುಪ್ರೀಂಕೋರ್ಟ್ ತೀರ್ಪಿಗೆ ಸರ್ಕಾರ ಹೀಗೆ ಮಾಡೋದಾ ಎಂದು ಪ್ರಶ್ನಿಸಿದರು. ಎಸ್‌ಐಟಿ ತನಿಖೆ ಮಾಡಿದರೂ ಏನೂ ಸಿಕ್ಕಿಲ್ಲ. ಸುಪ್ರೀಂಕೋರ್ಟ್ ಆದೇಶವೇ ಗೊತ್ತಿಲ್ಲ ಅಂತ ಜಾಣ ನಡೆ ಸರ್ಕಾರ ತೋರಿಸಿದೆ. ಸರ್ಕಾರ ಜನರ ಮುಂದೆ ಬೆತ್ತಲೆ ಆಗಿದೆ. ಸರ್ಕಾರ ಕೂಡಲೇ ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಪ್ರತಿಕ್ರಿಯೆ ಕೊಡಬೇಕು. ಸುಪ್ರೀಂಕೋರ್ಟ್ ತೀರ್ಪು ಇದ್ದರೂ ಹೇಗೆ ತನಿಖೆ ಮಾಡಿದ್ರಿ ಅಂತ ಸರ್ಕಾರ ಉತ್ತರ ಕೊಡಬೇಕು. ಸಿದ್ದರಾಮಯ್ಯ ಸರ್ಕಾರಕ್ಕೆ ಬುದ್ಧಿ ಭ್ರಮಣೆ ಆಗಿದೆ. ಸಿದ್ದರಾಮಯ್ಯ ಸರ್ಕಾರ ಜನರ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.


# ಕರ್ನಾಟಕ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ!

### ಬೆಂಗಳೂರು ಸುರಂಗ ಮಾರ್ಗ ಯೋಜನೆ ಪ್ರಶ್ನೆ ಮಾಡಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಮಹಾನಗರದಲ್ಲಿ ಸಂಚಾರ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಕೈಗೊಳ್ಳಲು ಮುಂದಾಗಿರುವ ಕೋಟ್ಯಂತರ ರೂ. ವೆಚ್ಚದ ಬಹುನಿರೀಕ್ಷಿತ ಜೋಡಿ ಸುರಂಗ ಮಾರ್ಗ ಯೋಜನೆ ಈಗ ಹೈಕೋರ್ಟ್ ಮೆಟ್ಟಿಲೇರಿದೆ.

ಸುರಂಗ ಮಾರ್ಗ ಯೋಜನೆಯ ಟೆಂಡರ್ ರದ್ದುಗೊಳಿಸುವಂತೆ ಕೋರಿ ಇಂದಿರಾನಗರ 82 ವರ್ಷದ ಆದಿಕೇಶವುಲು ರವೀಂದ್ರ, ಜೆ.ಪಿ.ನಗರದ ವಿನೋದ್ ವ್ಯಾಸುಲು ಮತ್ತು ಬಸವನಗುಡಿಯ ಎನ್.ಎಸ್.ಮುಕುಂದ್ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಗುರುವಾರ ಸಿಜೆ ವಿಭು ಬಖ್ರು ಅವರಿದ್ದ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತು. ಕೆಲ ಕಾಲ ವಾದ ಆಲಿಸಿದ ನ್ಯಾಯಾಲಯ ಸರ್ಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರಾಜ್ಯ ಪರಿಸರ ಅಧ್ಯಯನ ಮೌಲ್ಯಮಾಪನ ಪ್ರಾಧಿಕಾರ, ನಗರ ಭೂಸಾರಿಗೆ ನಿರ್ದೇಶನಾಲಯ, ಬೆಂಗಳೂರು ಸ್ಮಾರ್ಟ್ ಮೂಲಸೌಕರ್ಯ ನಿಯಮಿತ(ಸ್ಮೈಲ್) ರಾಡಿಕ್ ಕನ್ಸಲ್ಟೆಂಟ್ಸ್ ಮತ್ತು ಆಲ್ಟಿನೋಕ್ ಕನ್ಸಲ್ಟೆಂಟ್ಸ್ ಸೇರಿ ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಮುಂದೂಡಿತು. ಅರ್ಜಿದಾರರ ಪರ ವಕೀಲರು, ಆದಷ್ಟು ಬೇಗ ವಿಚಾರಣೆಗೆ ದಿನಾಂಕ ನಿಗದಿಪಡಿಸಬೇಕು ಎಂದು ನ್ಯಾಯಾಲಯವನ್ನು ಕೋರಿದರು. ಆಗ ನ್ಯಾಯಪೀಠ, ''ಈ ಯೋಜನೆ ಅತ್ಯಂತ ದೀರ್ಘಕಾಲಿನದ್ದು, ಯಾವುದೇ ತುರ್ತು ಇಲ್ಲ. ಯೋಜನೆ ಪೂರ್ಣಗೊಳ್ಳಲು ಹಲವು ವರ್ಷಗಳ ಕಾಲ




ಉದಯವಾಹಿನಿ ಚಿತ್ರ

**ಬೆಂಗಳೂರು ಸುರಂಗ ಮಾರ್ಗ ಯೋಜನೆ**

ಹಿಡಿಯುತ್ತದೆ. ನೀವು ಯೋಜನೆಯ ಕುರಿತು ಯಾವುದೇ ಪರಿಸರ ಪರಿಣಾಮ ಅಧ್ಯಯನ ನಡೆಸಿಲ್ಲವೆಂದು ಹೇಳುತ್ತಿದ್ದೀರಿ. ಹಾಗಿದ್ದರೆ ಸರ್ಕಾರ ಯಾವುದಾದರೂ ಅಧ್ಯಯನ ನಡೆಸಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಪ್ರತಿಕ್ರಿಯಿಸಲಿ. ಅದನ್ನು ಪರಿಶೀಲಿಸೋಣ'' ಎಂದು ಪ್ರತಿಕ್ರಿಯಿಸಿತು. ಅಲ್ಲದೆ, ಅರ್ಜಿದಾರರು ಸರ್ಕಾರ ಕಡ್ಡಾಯ ಕಾನೂನು ಮಾನದಂಡಗಳನ್ನು ಪಾಲಿಸದಿರುವುದು, ಆಂತರಿಕ ವ್ಯತ್ಯಯಗಳು ಮತ್ತು ಯೋಜನೆಯನ್ನು ವಿವೇಚನೆ ಬಳಸದೆ ರೂಪಿಸಿರುವ ಕಾರಣ, ಪ್ರತಿವಾದಿ ಸಂಖ್ಯೆ 7 ಆಲ್ಟಿನೋಕ್ ಕನ್ಸಲ್ಟಿಂಗ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಸಿದ್ಧಪಡಿಸಿದ ಕಾರ್ಯಸಾಧ್ಯತಾ ಅಧ್ಯಯನ ವರದಿ ಡಿ. 2024) ಮತ್ತು ಪ್ರತಿವಾದಿ ಸಂಖ್ಯೆ 6 ರಾಡಿಕ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್) ಸಿದ್ಧಪಡಿಸಿದ ವಿವರವಾದ ಯೋಜನಾ ವರದಿ ಮತ್ತು 2025ರ ಫೆಬ್ರವರಿಯಲ್ಲಿ ಬಿಡುಗಡೆಯಾದ ಪರಿಷ್ಕೃತ ಡಿಪಿಆರ್ ಅನ್ನು ರದ್ದುಗೊಳಿಸಲು ಕೋರಲಾಗಿದೆ.

ಜತೆಗೆ ಅರ್ಜಿಯಲ್ಲಿ ಸುರಂಗ ಮಾರ್ಗ ಯೋಜನೆಗೆ ಪೂರ್ವ ಪರಿಸರ ಅನುಮತಿ ಅಗತ್ಯವಿಲ್ಲವೆಂದು ಕರ್ನಾಟಕ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ 2024ರ ನ.26ರಂದು ನೀಡಿರುವ ಪತ್ರವನ್ನು ರದ್ದುಗೊಳಿಸಲು ಸಹ ಕೋರಲಾಗಿದೆ. ಸುರಂಗ ರಸ್ತೆ ನಿರ್ಮಾಣಕ್ಕಾಗಿ ಪರಿಸರ ಪರಿಣಾಮ ಮೌಲ್ಯಮಾಪನ, ಸಂಚಾರ ಯೋಜನೆ, ಸ್ವಾಧೀನದ ನಿರ್ದಿಷ್ಟ ವೆಚ್ಚದ ಪಟ್ಟಿ, ಪ್ರಸ್ತುತ ಉಪಯುಕ್ತತೆ ಮತ್ತು ಒಳಚರಂಡಿ ನಕ್ಷೆಗಳನ್ನು ಒಳಗೊಂಡಿರುವ ವರದಿ ಸಿದ್ಧಪಡಿಸದೆ, ಅಸ್ತಿತ್ವದಲ್ಲಿರುವ ಎಲ್ಲಾ ನೀರು, ಮಳೆನೀರು, ಒಳಚರಂಡಿ ಪೈಪ್‌ಗಳು, ಲೈನ್‌ಗಳು ಅಸ್ತಿತ್ವದಲ್ಲಿರುವ ಯಾವುದೇ ಕೊಳವೆಗಳು, ಲೇಔಟ್‌ಗಳ ಮೇಲೆ ಪರಿಣಾಮ ಬೀರುತ್ತವೆಯೇ ಎಂದು ಸೂಚಿಸುವ ತಿರುವು ಯೋಜನೆಯನ್ನು ಸಿದ್ಧಪಡಿಸದೆ ಜೋಡಿ ಸುರಂಗ ರಸ್ತೆ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಮುಂದಾಗಿದೆ.

**ಅರ್ಜಿದಾರರ ಪರ ವಕೀಲರು, ರಾಜ್ಯ ಸರ್ಕಾರ ಯಾವುದೇ ಸಮಯದಲ್ಲಿ ಬೇಕಾದರೂ ಟೆಂಡರ್ ಅನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ. ಹಾಗಾಗಿ ಮಧ್ಯಂತರ ತಡೆ ನೀಡಬೇಕೆಂದು ನ್ಯಾಯಪೀಠವನ್ನು ಕೋರಿದರು. ಅದಕ್ಕೆ ನ್ಯಾಯಪೀಠ, ಅವರು ಸರ್ಕಾರ ಟೆಂಡರ್ ಅನ್ನು ಅಂತಿಮಗೊಳಿಸಲಿ ಬಿಡಿ. ಸದ್ಯ ಅದರ ಬಗ್ಗೆ ಯಾವುದೇ ಪ್ರಶ್ನೆ ಇಲ್ಲವಲ್ಲ ಎಂದು ಹೇಳಿತು. ಆದಕ್ಕೆ ಅರ್ಜಿದಾರರ ಪರ ವಕೀಲರು, ಯೋಜನೆ ಬಗ್ಗೆ ಮಾಹಿತಿ ಸಿಗುವುದು ವಿಳಂಬವಾಯಿತು. ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸಿದರೂ ಹೆಚ್ಚಿನ ಮಾಹಿತಿ ದೊರಕಲಿಲ್ಲ'' ಎಂದರು. ಆಗ ನ್ಯಾಯಪೀಠ ವಿಚಾರಣೆಯನ್ನು ಡಿ.9ಕ್ಕೆ ಮುಂದೂಡಿತು.**

**ಟೆಂಡರ್ ಅನ್ನು ಅಂತಿಮಗೊಳಿಸಲಿ ಬಿಡಿ**

### ಯೋಜನೆಯ ವಿವರಗಳೇನು?

**ಬೆಂಗಳೂರು ಮಹಾನಗರದ ಸಂಚಾರ ದಟ್ಟಣೆ ಸಮಸ್ಯೆ ಪರಿಹರಿಸುವ ಸಲುವಾಗಿ ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್‌ವರೆಗೆ ಸುಮಾರು 19 ಸಾವಿರ ಕೋಟಿ ರೂ. ವೆಚ್ಚದಲ್ಲಿ ಸುರಂಗ ಮಾರ್ಗ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಬೆಂಗಳೂರು ಜೋಡಿ ಸುರಂಗ ರಸ್ತೆ ಯೋಜನೆಗೆ 2025ರ ಜು.14ರಂದು ಕರೆದಿರುವ ಟೆಂಡರ್ ಅಧಿಸೂಚನೆಯನ್ನು ರದ್ದುಗೊಳಿಸಲು ಅರ್ಜಿಯಲ್ಲಿ ಕೋರಲಾಗಿದೆ. ಜೊತೆಗೆ ಆರ್‌ಎಫ್‌ಪಿ ಪ್ರಕಟಣೆ, ಪೂರ್ವ-ಬಿಡ್ ಪ್ರಕ್ರಿಯೆಗಳು, ಬಿಡ್ ಸಲ್ಲಿಕೆ, ಬಿಡ್ ಮೌಲ್ಯಮಾಪನ ಮತ್ತು ಉದ್ದೇಶಿತ ಟೆಂಡರ್ ಪ್ರಸ್ತಾವ ಅಂತಿಮಗೊಳಿಸುವ ಪತ್ರ ಸೇರಿದಂತೆ ಎಲ್ಲಾ ಹಂತಗಳನ್ನು ರದ್ದುಗೊಳಿಸಲು ಕೋರಲಾಗಿದೆ.**

## ಫರ್ನಿಚರ್ ಶಾಪ್‌ನಲ್ಲಿ ಭಾರೀ ಅಗ್ನಿ ಅವಘಡ, ಕೋಟ್ಯಂತರ ರೂ ಮೌಲ್ಯದ ವಸ್ತುಗಳು ಭಸ್ಮ

• ಉದಯವಾಹಿನಿ, ಬೆಂಗಳೂರು

ನಗರದ ಮಲ್ಲೇಶ್ವರಂನ ಫೈಪ್ ಲೈನ್ ರೋಡ್‌ನಲ್ಲಿರುವ ಪೀಠೋಪಕರಣಗಳ ಮಳಿಗೆಯೊಂದರಲ್ಲಿ ಇಂದು ಭಾರೀ ಅಗ್ನಿ ಅವಘಡ ಸಂಭವಿಸಿದ್ದು ಕೋಟ್ಯಂತರ ರೂಪಾಯಿ ಮೌಲ್ಯದ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ.

ಮಲ್ಲೇಶ್ವರಂನ ದತ್ತಾತ್ರೇಯ ದೇವಸ್ಥಾನ ರಸ್ತೆಯಲ್ಲಿರುವ ಅಂಗಡಿಯಲ್ಲಿ ಮಧ್ಯರಾತ್ರಿ 2:30ರ ಸುಮಾರಿಗೆ ಅಂಗಡಿಗೆ ಬೆಂಕಿ ಹೊತ್ತಿಕೊಂಡಿದೆ. ಪರಿಣಾಮ



ಉದಯವಾಹಿನಿ ಚಿತ್ರ

5 ಕೋಟಿ ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾಗಿವೆ. ಅಲ್ಲದೇ ಬೆಂಕಿ ಅಕ್ಕಪಕ್ಕದ ಅಪಾರ್ಟ್‌ಮೆಂಟ್‌ನ 3 ಮನೆಗಳಿಗೂ ಆವರಿಸಿದೆ. 13 ಅಗ್ನಿಶಾಮಕ ಸಿಬ್ಬಂದಿಯಿಂದ ಬೆಂಕಿ ನಂದಿಸುವ ಕಾರ್ಯ ನಡೆಯಿತು.

ಅಗ್ನಿ ಅವಘಡದ ವೇಳೆ ಅಂಗಡಿ ಒಳಗಡೆ ಸುಮಾರು 10 ಜನ ಕೆಲಸಗಾರರು ಮಲಗಿದ್ದರು. ಅಕ್ಕಪಕ್ಕದ ನಿವಾಸಿಗಳು ಅವರನ್ನು ಎಚ್ಚರಿಸಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗಲಿರುವ ಶಂಕೆ ವ್ಯಕ್ತವಾಗಿದೆ. ಘಟನಾ ಸ್ಥಳಕ್ಕೆ ಸ್ಥಳೀಯ ಶಾಸಕ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಡಿಕೆಶಿ, ರಹೀಮ್ ಖಾನ್ ಅವರ ಖಾತೆಯಲ್ಲಿ ತುಸು ಬದಲಾವಣೆ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರು ಆಡಳಿತ ನಿರ್ವಹಣೆಗೆ ಬಿಬಿಎಂಪಿ ರದ್ದಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸಚಿವರಾದ ಡಿ.ಕೆ. ಶಿವಕುಮಾರ್ ಮತ್ತು ರಹೀಮ್ ಖಾನ್ ಅವರ ಖಾತೆಯಲ್ಲಿ ತುಸು ಬದಲಾವಣೆ ಮಾಡಲಾಗಿದೆ. ಈ ಸಂಬಂಧ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧಿಸೂಚನೆ ಹೊರಡಿಸಿದ್ದಾರೆ. ಈ ಮೊದಲು ಡಿಕೆಶಿ ಅವರಿಗೆ ಬೃಹತ್, ಮಧ್ಯಮ ನೀರಾವರಿ, ಬಿಬಿಎಂಪಿ, ಬಿಡಿಎ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್ ನಗರ ಯೋಜನೆಗೆ ಸಂಬಂಧಿಸಿದ ಪ್ರಾಧಿಕಾರಗಳು ಸೇರಿ ಬೆಂಗಳೂರು ನಗರ ಅಭಿವೃದ್ಧಿ ಜವಾಬ್ದಾರಿ ನೀಡಲಾಗಿತ್ತು. ಇದೀಗ ಬೃಹತ್, ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಬೆಂಗಳೂರು ನಗರ ಯೋಜನೆಗೆ ಸಂಬಂಧಿಸಿದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಬರುವ 5 ಪಾಲಿಕೆಗಳು, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಸೇವಾ ವಿಷಯಗಳನ್ನು ಹೊರತುಪಡಿಸಿ, ಬಿಡಿಎ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಆರ್‌ಡಿಎ, ಬಿಎಂಆರ್‌ಎಲ್ ಆಡಳಿತ ಹೊಣೆ ನೀಡಲಾಗಿದೆ. ಇನ್ನು ಪೌರಾಡಳಿತ, ಹಜ್ ಸಚಿವ ರಹೀಮ್ ಖಾನ್ ಅವರ ಖಾತೆ ಹಾಗೆಯೇ ಉಳಿದಿದ್ದರೂ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಜವಾಬ್ದಾರಿ ಮಾತ್ರ ಡಿಕೆಶಿ ಅವರಿಗೆ ನೀಡಲಾಗಿದೆ. ಮುಖ್ಯಮಂತ್ರಿಯವರ ಸಲಹೆಯ ಮೇರೆಗೆ ಇಬ್ಬರು ಸಚಿವರಿಗೆ ಸಂಬಂಧಿಸಿದಂತೆ, ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ವ್ಯವಹಾರದಲ್ಲಿ ಅಸ್ತಿತ್ವದಲ್ಲಿರುವ ಖಾತೆಗಳನ್ನು ಮಾರ್ಪಡಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ರಾಜ್ಯಪಾಲರು ತಿಳಿಸಿದ್ದಾರೆ.

## ಪುಂಡರ ಅಟ್ಟಹಾಸ: ಸಿಕ್ಕಸಿಕ್ಕ ವಾಹನಗಳಿಗೆ ಅಡ್ಡಹಾಕಿ ಲಾಂಗ್ ತೋರಿಸಿ ಬೆದರಿಕೆ, ಹಣ ವಸೂಲಿ..!

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಪುಡಿರೌಡಿಗಳ ಗ್ಯಾಂಗ್‌ವೊಂದು ಅಟ್ಟಹಾಸ ಮೆರೆದಿದೆ. ಶಸ್ತ್ರಸಜ್ಜಿತ ದುಷ್ಕರ್ಮಿಗಳ ತಂಡವೊಂದು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ 25 ಕ್ಕೂ ಹೆಚ್ಚು ನಾಲ್ಕು ಚಕ್ರದ ವಾಹನಗಳಿಗೆ ಹಾನಿ ಮಾಡಿದ್ದು, ಸಿಕ್ಕ ಸಿಕ್ಕ ವಾಹಗಿಗೆ ಅಡ್ಡ ಹಾಕಿ ಬೆದರಿಸಿ ಹಣ ಸುಲಿಗೆ ಮಾಡಿರುವ ಘಟನೆ ಬ್ಯಾಡರಹಳ್ಳಿ ಮತ್ತು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಆಟೋದಲ್ಲಿ ಬಂದಿರುವ 6 ಮಂದಿ ರೌಡಿಗಳು ಬ್ಯಾಡರಹಳ್ಳಿಯ ವಾಲ್ಮೀಕಿನಗರದಲ್ಲಿ 20 ವಾಹನಗಳಿಗೆ ಮತ್ತು ಅನ್ನಪೂರ್ಣೇಶ್ವರಿನಗರದ ಮುದ್ದಿನಪಾಳ್ಯದಲ್ಲಿ 5 ವಾಹನಗಳಿಗೆ ಹಾನಿ ಮಾಡಿದ್ದಾರೆ. ಆರೋಪಿಗಳು ಮುಖಗಳನ್ನು ಟವೆಲ್‌ನಿಂದ ಮುಚ್ಚಿಕೊಂಡಿದ್ದು, ಮಚ್ಚು-ಲಾಂಗ್ ಹಿಡಿದುಕೊಂಡಿದ್ದರಿಂದ ಯಾರೂ ಅವರ ಹತ್ತಿರ ಹೋಗಿಲ್ಲ. ಈ ಬಗ್ಗೆ ಪೊಲೀಸರಿಗೆ ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ್ದಾರೆ. ಆದರೆ, ಆರೋಪಿಗಳು ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಇಡೀ ಘಟನೆಯನ್ನು ಕೆಲವು ವಾಹನ ಮಾಲೀಕರ ತಮ್ಮ ಮೊಬೈಲ್ ಫೋನ್‌ಗಳಲ್ಲಿ ಸೆರೆಹಿಡಿದಿದ್ದಾರೆ ಎಂದು ಸ್ಥಳೀಯ ನಿವಾಸಿಯೊಬ್ಬರು ತಿಳಿಸಿದ್ದಾರೆ. ಈ ಸಂಬಂಧ ಬ್ಯಾಡರಹಳ್ಳಿ ಅನ್ನಪೂರ್ಣೇಶ್ವರಿನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ



ನಡೆಸುತ್ತಿದ್ದಾರೆ. ಆವಲಹಳ್ಳಿ-ದೊಡ್ಡಬಳ್ಳಾಪುರ ರಸ್ತೆಯಲ್ಲಿ 25 ವಾಹನಗಳಿಗೆ ಹಾನಿ ಮಾಡಿರುವ ದುಷ್ಕರ್ಮಿಗಳು, ಮೂವರ ಮೇಲೆ ದಾಳಿ ಮಾಡಿ ದರೋಡೆ ಮಾಡಿದೆ ಎಂದು ಹೇಳಲಾಗುತ್ತಿದೆ. ದಾಸನಪುರ ಬಳಿ ಮಾರುಕಟ್ಟೆಗೆ ತರಕಾರಿ ಇಳಿಸಲು ಬಂದಿದ್ದ ಕೋಲಾರದ 33 ವರ್ಷದ ಮುನಿರಾಜು ಎಂಬ ವ್ಯಕ್ತಿಯನ್ನು ಆರೋಪಿಗಳು ದರೋಡೆ ಮಾಡಿದ್ದಾರೆ. ವಾಹನದಲ್ಲಿ ಕೆಲ ಸಮಸ್ಯೆ ಎದುರಾದ ಹಿನ್ನೆಲೆಯಲ್ಲಿ ಮುನಿರಾಜು ಅವರು ರಸ್ತೆ ಬದಿ ವಾಹನ ನಿಲ್ಲಿಸಿ, ತಪಾಸಣೆ ನಡೆಸುತ್ತಿದ್ದರು. ಇದನ್ನು ನೋಡಿದ ಆರೋಪಿಗಳು ಮುನಿರಾಜು ಅವರಿಗೆ ಬೆದರಿಸಿ ಸುಲಿಗೆ ಮಾಡಿದ್ದಾರೆ. ಮುನಿರಾಜು ಅವರಿಂದ ಸುಮಾರು 75,000 ರೂ. ಮೌಲ್ಯದ ನಗದು ಇತರ ಬೆಲೆಬಾಳುವ ವಸ್ತುಗಳನ್ನು ದೋಚಿದ್ದಾರೆಂದು ತಿಳಿದುಬಂದಿದೆ.

## ಅಬಕಾರಿ ಲೈಸೆನ್ಸ್ ಇ-ಹರಾಜಿಗೆ ರಾಜ್ಯ ಸರ್ಕಾರದಿಂದ ಕರಡು ಅಧಿಸೂಚನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಅಬಕಾರಿ(ಪರವಾನಗಿಗಳ ಸಾಮಾನ್ಯ ಷರತ್ತುಗಳು) ತಿದ್ದುಪಡಿಗೆ ಪ್ರಸ್ತಾವಿತ ತಿದ್ದುಪಡಿಯ ಕುರಿತು 10 ದಿನಗಳ ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರ ಕರಡು ಅಧಿಸೂಚನೆ ಹೊರಡಿಸಿದೆ. ರಾಜ್ಯಕ್ಕೆ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣಕ್ಕೆ ಸಹಾಯ ಮಾಡಲು ನಿಷ್ಕ್ರಿಯ/ಬಳಕೆಯಾಗದ ಪರವಾನಗಿಗಳ ಇ-ಹರಾಜಿಗಾಗಿ ನಿಯಮಗಳು, 1967, ಕರ್ನಾಟಕ ಅಬಕಾರಿ(ಬಿಯರ್ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ)ನಿಯಮಗಳು, 1976 ಮತ್ತು ಕರ್ನಾಟಕ ಅಬಕಾರಿ(ಭಾರತೀಯ ಮತ್ತು ವಿದೇಶಿ ಮದ್ಯದ ಮಾರಾಟ) ನಿಯಮಗಳು 1968 ಅಡಿಯಲ್ಲಿ ನಿಷ್ಕ್ರಿಯವಾಗಿರುವ ಅಬಕಾರಿ ಲೈಸೆನ್ಸ್‌ಗಳನ್ನು ಹರಾಜು ಹಾಕಲು ಕರಡು ನಿಯಮಗಳನ್ನು ರಾಜ್ಯ



ಹಣಕಾಸು ಇಲಾಖೆಯು ಬಿಡುಗಡೆ ಮಾಡಿದೆ. ಕರ್ನಾಟಕದಲ್ಲಿ ಸುಮಾರು 588 ನಿಷ್ಕ್ರಿಯ ಅಬಕಾರಿ ಪರವಾನಗಿಗಳ ಪ್ರಸ್ತಾವಿತ ಎಲೆಕ್ಟ್ರಾನಿಕ್ ಹರಾಜಿನ ಕುರಿತು ತನ್ನ ಆಗಸ್ಟ್ 14 ರಂದು ವರದಿ ಪ್ರಕಟಿಸಿತ್ತು. ಹರಾಜಿಗೆ ಒಳಗಾಗುವ ಸಾಧ್ಯತೆ ಇರುವ ಸುಮಾರು 588 ಪರವಾನಗಿಗಳಲ್ಲಿ 288 11-A (ಸರ್ಕಾರಿ ಸ್ವಾಮ್ಯದ ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್ ಚಿಲ್ಲರೆ ಮಾರಾಟ ಮಳಿಗೆ) ಪರವಾನಗಿಗಳಾಗಿವೆ ಎಂದು ಹೇಳಲಾಗುತ್ತಿದೆ. ನಂತರ 204 ಅಐ-2 (ಚಿಲ್ಲರೆ ಮದ್ಯದ ಅಂಗಡಿಗಳು) 96 AI-9 ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಇವೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಮೂಲಗಳು ತಿಳಿಸಿವೆ. ಈ ಪರವಾನಗಿಗಳನ್ನು ಯಾವುದೇ ಕಾರಣಕ್ಕಾಗಿ ನವೀಕರಿಸಲಾಗಿಲ್ಲ ಮತ್ತು ಅವು ನಿಷ್ಕ್ರಿಯವಾಗಿವೆ. ಹರಾಜಿನ ಹಿಂದಿನ ಕಾರಣವೆಂದರೆ ಅವುಗಳನ್ನು ಮತ್ತೆ ಮಾರುಕಟ್ಟೆಗೆ ತರುವುದು ಮತ್ತು ಸರ್ಕಾರಕ್ಕೆ ಸುಮಾರು 600 ಕೋಟಿ ರೂ.ಗಳ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣ ಮಾಡುವುದು ಇದರ ಉದ್ದೇಶವಾಗಿದೆ'' ಎಂದು ಮೂಲಗಳು ತಿಳಿಸಿವೆ. ಇ-ಹರಾಜಿನ ಉದ್ದೇಶಕ್ಕಾಗಿ, ಸರ್ಕಾರವು ಅಐ2 ನ ನಾಮಕರಣವನ್ನು ಅಐ2೦ ನೊಂದಿಗೆ ಮತ್ತು AI9 ಅನ್ನು ಅಐ9೦ ನೊಂದಿಗೆ ಬದಲಾಯಿಸಿದೆ. ಪ್ರಸ್ತಾವಿತ ತಿದ್ದುಪಡಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965 (ಕರ್ನಾಟಕ ಕಾಯ್ದೆ 21 – 1966) ರ ಸೆಕ್ಷನ್ 71 ರ ಅಡಿಯಲ್ಲಿ ಮಾಡಲಾಗುತ್ತಿದೆ. ಸೆಪ್ಟೆಂಬರ್ 23 ರಂದು ಹೊರಡಿಸಿದ ಅಧಿಸೂಚನೆಯಲ್ಲಿ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಹತ್ತು ದಿನಗಳ ಅವಧಿ ಮುಗಿದ ನಂತರ ಈ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಮೇಲೆ ನಿರ್ದಿಷ್ಟಪಡಿಸಿದ ಅವಧಿ ಮುಗಿಯುವ ಮೊದಲು ಈ ಕರಡಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ'' ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

## 37ವರ್ಷಗಳಿಂದ ಬಿಎಂಪಿ, ಬಿಬಿಎಂಪಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಕೆಲಸ ಮಾಡಿದ ತೃಪ್ತಿ ಇದೆ

• ಉದಯವಾಹಿನಿ, ಬೆಂಗಳೂರು

ಮೌಲ್ಯಮಾಪಕರು ನೌಕರರ ಹಿರಿಯ ಮುಖಂಡರಾದ ಜಿಬಿಎ ನೌಕರರ ಕನ್ನಡ ಸಂಘದ ಅಧ್ಯಕ್ಷರು ಸಾಯಿಶಂಕರ್ ರವರು ವಯೋಸಹಜ ನಿವೃತ್ತಿ ದಿನ. ಸಾಯಿ ಶಂಕರ್ ರವರನ್ನು ಆತ್ಮೀಯವಾಗಿ ಸನ್ಮಾನಿಸಿ, ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಶುಭ ಕೋರಿದರು.

ಜಂಟಿ ಆಯುಕ್ತರಾದ ದಾಕ್ಷಯಿಣಿ ಎ.ಆರ್.ಓ.ಗಳಾದ ಸಂತೋಷ್ ಕುಮಾರ್, ಶ್ರೀಧರ್, ದೀಪ ಕಂದಾಯಧಿಕಾರಿಗಳಾದ ಬಸವರಾಜ್ ಮಗಿ, ಆನಂದ್ ನಿರ್ದೇಶಕರುಗಳಾದ ಎ.ಜಿ.ಬಾಬು, ಹೆಚ್.ಬಿ.ಹರೀಶ್, ಕಂದಾಯ ಪರಿವೀಕ್ಷಕ ಮುರುಳಿ ಮೋಹನ್, ರಾಜೇಶ್ ವಿನೋದ್ ಕುಮಾರ್ ನಿರೀಕ್ಷಕರು ಆರ್.ರಮೇಶ್ ಕುಮಾರ್. ಎಲ್.ಆರ್.ಮಂಜುನಾಥ್ ರವರು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

ಇದೇ ಸಂದರ್ಭದಲ್ಲಿ ಸಾಯಿಶಂಕರ್ ರವರು ಮಾತನಾಡಿ ಕಳೆದ 37ವರ್ಷಗಳಿಂದ ಬಿಎಂಪಿ ಮತ್ತು ಬಿಬಿಎಂಪಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಕೆಲಸ ಮಾಡಿದ ತೃಪ್ತಿ ಇದೆ.

ನೌಕರರ ಸಂಘ, ಕನ್ನಡ ಸಂಘದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಅಧ್ಯಕ್ಷರಾದ ಎ.ಅಮೃತ್ ರಾಜ್ ರವರ ಜೊತೆಯಲ್ಲಿ ಉತ್ತಮ ಒಡನಾಟ, ಸಂಪರ್ಕದಿಂದ ನೌಕರರ ಸಮಸ್ಯೆಗಳ ನಿವಾರಣೆಗಾಗಿ ಅವರ ಜೊತೆಯಲ್ಲಿ ಹೋರಾಟ ಮಾಡಲು ನನಗೆ ಶಕ್ತಿ ತುಂಬಿದರು. ನಿವೃತ್ತಿ ದಾಖಲೆಯಲ್ಲಿ ಮಾತ್ರ ನಿವೃತ್ತಿ ಹೊಂದಿದ್ದೇನೆ, ನಾನು ನಿರಂತರವಾಗಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ ಅವರ ಹೋರಾಟದಲ್ಲಿ ಭಾಗಿಯಾಗುತ್ತೇನೆ.

ಜ್ಯೋತಿ ಸಂಜೀವಿನಿ, ಎರವಲು ಸೇವೆ ರದ್ದು, ನೌಕರರಿಗೆ ಬಡ್ತಿ, ನೇಮಕಾತಿ ಹಲವಾರು ವಿಷಯದಲ್ಲಿ ಎ.ಅಮೃತ್ ರಾಜ್ ರವರ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟದಲ್ಲಿ ಜಯಲಭಿಸಿರುವುದು ಸಂತೋಷದಾಯಕ ವಿಷಯ. ಬಿಬಿಎಂಪಿ ಕನ್ನಡ ನೌಕರರ ಸಂಘದಲ್ಲಿ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದೆ ಮತ್ತು ರಾಜ್ಯ ಮಹಾನಗರ ಪಾಲಿಕೆ ಮತ್ತು ಬಿಬಿಎಂಪಿ ಅಧಿಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದಲ್ಲಿ ಜವಾಬ್ದಾರಿ ಸ್ಥಾನ ನೀಡಿ ಸಂಘಟನೆ ಮಾಡಲು ಸದಾ ಅಮೃತ್ ರಾಜ್ ರವರು ಬೆನ್ನುತಟ್ಟಿ ಪ್ರೋತ್ಸಾಹಿಸಿದರು. 37ವರ್ಷಗಳು ಸುದೀರ್ಘ ಸೇವೆ ಸಲ್ಲಿಸಿದ ಸಂತಪ್ತಿ ಇದೆ. ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮತ್ತು ಅಧಿಕಾರಿಗಳು ನೌಕರರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು ನಿಮ್ಮ ಪ್ರೀತಿ ಸಹಕಾರ ಹೀಗೆ ಇರಲಿ ಎಂದು ಬಯಸುತ್ತೇನೆ ಎಂದು ಹೇಳಿದರು.

# 1,200 ಚದರ ಅಡಿಗಿಂತ ದೊಡ್ಡ ಮನೆಗಳಿಗೆ ಸರ್ಕಾರ ನೀಡಲಿದೆ ಗುಡ್ ನ್ಯೂಸ್

### ಸಚಿವ ಸಂಪುಟದ ಸಭೆಯ ನಂತರ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದ ಸಚಿವ ಎಚ್.ಕೆ.ಪಾಟೀಲ

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯನವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಹಲವು ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ವಸತಿ ಕಟ್ಟಡಗಳು, ಸ್ವಾಧೀನಾನುಭವ ಪತ್ರ ಪಡೆಯುವ ವಿಚಾರದಲ್ಲಿ ಪ್ರಮುಖ ನಿರ್ಧಾರಕ್ಕೆ ಬರುವ ಸಾಧ್ಯತೆಯಿದೆ.

ನಗರ ವ್ಯಾಪ್ತಿಯಲ್ಲಿ 1,200 ಅಥವಾ ಅದಕ್ಕಿಂತ ಕಮ್ಮಿಯಿರುವ ವಸತಿ ಕಟ್ಟಡಗಳು ಸ್ವಾಧೀನಾನುಭವ ಪತ್ರ ಪಡೆಯುವುದರಿಂದ ವಿನಾಯತಿಯನ್ನು ನೀಡಲಾಗಿತ್ತು. ಈಗ, ಅದಕ್ಕಿಂತ ಹೆಚ್ಚು ಚದರಡಿ ವಿಸ್ತೀರ್ಣ ಇರುವ ಮನೆಗಳಿಗೂ, ಒಸಿಯಿಂದ ವಿನಾಯತಿ ನೀಡುವ ಸಂಬಂಧ, ಸಂಪುಟ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

ಜನರಿಗೆ ಇದರಿಂದ ಅನುಕೂಲವಾಗುವ ಸಾಧ್ಯತೆಯಿದೆ. ಆದರೆ, ಇದರಿಂದ ಕಟ್ಟಡದ ಮೂಲ ನಕ್ಷೆ ಸರಿಯಾಗಿದೆಯೇ, ಇಲ್ಲವೇ ಎಂದು ಪರೀಕ್ಷಿಸಲು ಸಾಧ್ಯವಾಗುವುದಿಲ್ಲ. ಆದರೂ, ಅಡ್ವೋಕೇಟ್ ಜನರಲ್, ಶಶಿಕಿರಣ್ ಶೆಟ್ಟಿಯವರ ಸಲಹೆಯನ್ನು ಪಡೆದು, ಸಂಪುಟ ಸಭೆಯಲ್ಲಿ ಇದನ್ನು ಮಂಡಿಸಲಾಗಿದೆ. ಚರ್ಚೆ



ಉದಯವಾಹಿನಿ ಚಿತ್ರ

ಈ ಬಗ್ಗೆ ನಡೆದಿದ್ದು, ನಿರ್ಧಾರ ಸದ್ಯದಲ್ಲೇ ತೆಗೆದುಕೊಳ್ಳುವ ಸಾಧ್ಯತೆಯಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಲಂ 241(7) ಅವಕಾಶದಡಿ 1200 ಚದರ ಅಡಿಗಳಿಗಿಂತ ಹೆಚ್ಚಿನ ವಿಸ್ತೀರ್ಣದ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲು ನಿರ್ಧರಿಸುವ ಸಾಧ್ಯತೆಯಿದೆ.

**ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಈಗಾಗಲೇ 1,200 ಚದರ ಅಡಿವರೆಗಿನ ನಿವೇಶನಗಳಲ್ಲಿ ನಿರ್ಮಿಸಲಾದ ಮನೆಗಳಿಗೆ ಒಸಿಯಿಂದ ವಿನಾಯಿತಿಯನ್ನು ನೀಡಿದೆ. ಈಗ ಸರ್ಕಾರ, ಇದಕ್ಕಿಂತ ದೊಡ್ಡದಾಗಿರುವ ನಿವೇಶನಗಳಿಗೂ ವಿಸ್ತರಿಸುವ ಚಿಂತನೆಯನ್ನು ನಡೆಸಿದೆ. ಈ ಬಗ್ಗೆ ಕಾನೂನಾತ್ಮಕ ಸಲಹೆಯನ್ನು ಪಡೆದು, ಯಾವ ದಿನಾಂಕದಿಂದ ಇದನ್ನು ಜಾರಿಗೆ ತರಬೇಕು ಎನ್ನುವ ಅಂತಿಮ ನಿರ್ಧಾರಕ್ಕೆ ಬರಲು, ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವ್ಯಾಪ್ತಿಯಲ್ಲಿ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ರೈಸಿಂಗ್ ಮೇನ್ ಸೇರಿ ರಾಜಕಾಲುವೆಯ ಬಳಿಯ ಆವರಣದಲ್ಲಿರುವ ಸಂಸ್ಕರಿಸಿದ ನೀರಿನ ಪಂಪಿಂಗ್ ಸ್ಟೇಷನ್ , ದೇವನಹಳ್ಳಿ ಬಳಿಯ ಐಟಿ ಪಾರ್ಕ್ ಕೈಗಾರಿಕಾ ಪ್ರದೇಶದಲ್ಲಿರುವ 40 MLD ಸಾಮರ್ಥ್ಯದ ತೃತೀಯ ಹಂತದ ಸಂಸ್ಕರಣಾ ಘಟಕದ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ರೂ.45.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

ಬೆಂಗಳೂರು ನೀರು ಸರಬರಾಜು ಒಳಚರಂಡಿ ಮಂಡಳಿಯ ವತಿಯಿಂದ ಎಲೆಮಲ್ಲಪ್ಪ ಚೆಟ್ಟಿಯಲ್ಲಿರುವ 15 ದ.ಲ.ಲೀ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ದೀಕರಣ ಘಟಕವನ್ನು ಮತ್ತು ಸಾದರಮಂಗಲದಲ್ಲಿ 5 ದ.ಲ.ಲೀ ಸಾಮರ್ಥ್ಯದ ಮತ್ತು ಸುಮಾರು 3.5 ಕಿ.ಮೀಗಳ 450mm dia DI Ductile Iron ಪೈಪ್ ಲೈನ್ ನ 5 ವರ್ಷಗಳ ಸಮಗ್ರ ಕಾರ್ಯಚರಣೆ ಮತ್ತು ನಿರ್ವಹಣೆ (O&M)ಯನ್ನು ರೂ.19.07 ಕೋಟಿಗಳ ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ಕ್ಯಾಬಿನೆಟ್‌ನಲ್ಲಿ ನೀಡಲಾಗಿದೆ.

**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ 90 ದ.ಲ.ಲೀ ಸಾಮರ್ಥ್ಯದ ಬೆಳ್ಳಂದೂರು ತ್ಯಾಜ್ಯ ನೀರು ಶುದ್ದೀಕರಣ ಘಟಕದ 5 ವರ್ಷಗಳ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣೆ (O&M)ಯನ್ನು ರೂ.23.36 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ.**

# ಅಂತರಾಳದಿಂದ... EDITORIAL

## ಮಾನಹಾನಿ ಪ್ರಕರಣ: ಅಪರಾಧ ವ್ಯಾಪ್ತಿಯ ಹೊರಕ್ಕೆ, ಸೂಕ್ತ ಚಿಂತನೆ

ಮಾನಹಾನಿಗೆ ಸಂಬಂಧಿಸಿದ ಕಾನೂನುಗಳಿಂದ ಕ್ರಿಮಿನಲ್ ಅಪರಾಧದ ಆಯಾಮವನ್ನು ತೆಗೆಯುವ ಚಿಂತನೆ ಸ್ವಾಗತಾರ್ಹ. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಘನತೆಯಿಂದ ಬಾಳುವ ಹಕ್ಕನ್ನು ಎತ್ತಿಹಿಡಿಯುತ್ತದೆ. ನ್ಯಾಯಮೂರ್ತಿ ಸುಂದರೇಶ್ ಅವರು ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮ ಅವರೂ ಇರುವ ವಿಭಾಗೀಯ ಪೀಠದ ನೇತೃತ್ವ ವಹಿಸಿದ್ದಾರೆ. 'ಫೌಂಡೇಷನ್ ಆಫ್ ಇಂಡಿಪೆಂಡೆಂಟ್ ಜರ್ನಲಿಸಂ' ಎಂಬ ಸಂಸ್ಥೆಯು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಈ ಪೀಠವು ನಡೆಸುತ್ತಿದೆ. ಸುದ್ದಿತಾಣವೊಂದನ್ನು ನಡೆಸುತ್ತಿರುವ ಈ ಸಂಸ್ಥೆಯು 2016ರಲ್ಲಿ ಪ್ರಕಟವಾದ ಲೇಖನವೊಂದಕ್ಕೆ ಸಂಬಂಧಿಸಿದ ಮಾನನಷ್ಟ ಮೊಕದ್ದಮೆಯ ವಿಚಾರವಾಗಿ ಜಾರಿ ಮಾಡಿರುವ ನೋಟಿಸ್ ಅನ್ನು ಕೋರ್ಟ್‌ನಲ್ಲಿ ಪ್ರಶ್ನಿಸಿದೆ. 2016ರಲ್ಲಿ ನೀಡಿದ ಒಂದು ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಮಾನನಷ್ಟ ಪ್ರಕರಣಗಳನ್ನು ಕ್ರಿಮಿನಲ್ ಆಯಾಮದಿಂದ ಕಾಣುವುದು ಸಾಂವಿಧಾನಿಕವೇ ಆಗಿದೆ ಎಂದು ಹೇಳಿತ್ತು, ಅಲ್ಲದೆ, ಸಂವಿಧಾನದ 21ನೇ ವಿಧಿಯು ನೀಡಿರುವ ಘನತೆಯ ಹಕ್ಕನ್ನು ರಕ್ಷಿಸುವ ಅಗತ್ಯವನ್ನು ಈ ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 499 ಹಾಗೂ 500ರ ಅಡಿಯಲ್ಲಿ ಮಾನಹಾನಿ ಉಂಟುಮಾಡುವುದನ್ನು ಕ್ರಿಮಿನಲ್ ಅಪರಾಧವನ್ನಾಗಿ ಕಾಣಲಾಗಿತ್ತು, ಈ ಸೆಕ್ಷನ್‌ಗಳನ್ನು ಭಾರತೀಯ ನ್ಯಾಯ ಸಂಹಿತೆಯು (ಬಿಎನ್‌ಎಸ್) ಸೆಕ್ಷನ್ 356ರಲ್ಲಿ ಉಳಿಸಿಕೊಂಡಿದೆ. ಕ್ರಿಮಿನಲ್ ಮಾನನಷ್ಟ ಮೊಕದ್ದಮೆಗಳನ್ನು ಜನರನ್ನು ಕಿರುಕುಳಕ್ಕೆ ಗುರಿಪಡಿಸಲು ಬಳಕೆ ಮಾಡುವುದು ಹೆಚ್ಚಾಗುತ್ತಿದೆ. ಅದರಲ್ಲೂ ಮುಖ್ಯವಾಗಿ, ಸಾರ್ವಜನಿಕ ಜೀವನದಲ್ಲಿ ಇರುವ ರಾಜಕೀಯ ಮುಖಂಡರಂತಹ ವ್ಯಕ್ತಿಗಳನ್ನು ನ್ಯಾಯಾಲಯದ ಕಟಕಟೆಗೆ ಎಳೆದು. ಜೈಲುಶಿಕ್ಷೆಯ ಭೀತಿಯನ್ನು ಅವರ ಮನಸ್ಸಿನಲ್ಲಿ ಜೀವಂತವಾಗಿ ಉಳಿಸಲು ಬಳಸಿಕೊಳ್ಳಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಕೂಡ ಇದನ್ನು ಅಸ್ತ್ರವನ್ನಾಗಿ ಬಳಕೆ ಮಾಡಲಾಗಿದೆ. ಈ ಅಸ್ತ್ರಕ್ಕೆ ಗುರಿಯಾದ ಹಲವರ ಪೈಕಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೂ ಒಬ್ಬರು. ಪತ್ರಕರ್ತರನ್ನು ಹಾಗೂ ಮಾಧ್ಯಮ ಸಂಸ್ಥೆಗಳನ್ನು ಗುರಿಯಾಗಿಸಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನೇರವಾಗಿ ಅಕ್ರಮಣ ನಡೆಸಲು ಕೂಡ ಈ ಕಾನೂನನ್ನು ಬಳಕೆ ಮಾಡಲಾಗಿದೆ. ಹಲವು ಕಡೆಗಳಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತದೆ: ಅವು ಕ್ರಿಮಿನಲ್ ಪ್ರಕರಣಗಳಾದ ಕಾರಣ ಆರೋಪಿ ಸ್ಥಾನದಲ್ಲಿ ಇರುವವರು ಖುದ್ದಾಗಿ ಹಾಜರಾಗಬೇಕಾದ ಅನಿವಾರ್ಯ ಸೃಷ್ಟಿಯಾಗುತ್ತದೆ. ವಿಚಾರಣೆ ಶುರುವಾಗುವುದಕ್ಕೂ ಮೊದಲು ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆಯುವ ಸಾಧ್ಯತೆ ಇರುತ್ತದೆ. ವಿಚಾರಣೆ ಶುರುವಾದ ನಂತರದಲ್ಲಿ ಅದು ದೀರ್ಘ ಅವಧಿಗೆ ನಡೆಯಬಹುದು. ಇಂತಹ ಪ್ರಕರಣಗಳಲ್ಲಿ 'ಸತ್ಯ'ವು ಗುರಾಣಿಯಾಗಿ ರಕ್ಷಣೆಗೆ ಒದಗಿ ಬರುವುದಿಲ್ಲವಾದ ಕಾರಣ, ಸಾರ್ವಜನಿಕ ಹಿತವನ್ನು ಕಾಯುವ ಉದ್ದೇಶದಿಂದ 'ಮಾನಹಾನಿಕರ' ಎಂದು ಆರೋಪಿಸಲಾದ ಮಾತುಗಳನ್ನು ಆಡಲಾಗಿದೆ ಎಂಬುದನ್ನು ಆರೋಪಿಯೇ ಸಾಬೀತು ಮಾಡಬೇಕಾಗುತ್ತದೆ. ಈ ಕಾನೂನಿನ ವಿನ್ಯಾಸ ಹೇಗಿದೆ ಎಂದರೆ, ಇದು ಆರೋಪಿಯ ವಿರುದ್ಧವಾಗಿ ಕೆಲಸ ಮಾಡುತ್ತದೆ. ನ್ಯಾಯ ಹಾಗೂ ಸಾಂವಿಧಾನಿಕ ಹಕ್ಕುಗಳ ಮೂಲ ತತ್ತ್ವವನ್ನು ಇದು ಉಲ್ಲಂಘಿಸುತ್ತದೆ. ಈ ಕಾನೂನು ವಸಾಹತು ಕಾಲದ ಪಳೆಯುಳಿಕೆ. ಇದು ಪ್ರಜಾತಂತ್ರದ ವಿರೋಧಿ, ಆದರೆ. ಇಂತಹ ಪ್ರಕರಣಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವಂತೆ ಸುಪ್ರೀಂ ಕೋರ್ಟ್, ಕೆಳಹಂತದ ನ್ಯಾಯಾಲಯಗಳಿಗೆ ಕಿವಿಮಾತು ಹೇಳಿದ್ದುದು ಪರಿಣಾಮಕಾರಿ ಆಗಿಲ್ಲ. ವ್ಯಕ್ತಿಗಳು ಹಾಗೂ ಸಂಸ್ಥೆಗಳ ಘನತೆಯನ್ನು ಕಾಯಲು ಅಗತ್ಯವಿರುವ ಕಾನೂನುಗಳು ದೇಶದಲ್ಲಿ ಜಾರಿಯಲ್ಲಿವೆ. ಮಾನಹಾನಿ ಆಗಿದೆ ಎಂಬ ಕಾರಣ ನೀಡಿ ವ್ಯಕ್ತಿಗಳು, ಸಂಸ್ಥೆಗಳು ಕ್ರಿಮಿನಲ್ ಕಾನೂನಿನ ಬಳಕೆಗೆ ಮುಂದಾಗಬೇಕಿಲ್ಲ. ಮಾನನಷ್ಟಕ್ಕೆ ಪರಿಹಾರವನ್ನು ಒದಗಿಸಿ ಕೊಡುವ ಸಿವಿಲ್ ಕಾನೂನು ಪ್ರಕ್ರಿಯೆಗಳು ಅಗತ್ಯ ರಕ್ಷಣೆಯನ್ನು ಒದಗಿಸುತ್ತವೆ. ಅವು ಘನತೆಯಿಂದ ಬದುಕುವ ಹಕ್ಕನ್ನು ರಕ್ಷಿಸುತ್ತವೆ. ಅದೇ ಸಂದರ್ಭದಲ್ಲಿ ಅವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಕಾಪಾಡುತ್ತವೆ. ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಹಲವು ದೇಶಗಳು ಮಾನನಷ್ಟವನ್ನು ಕ್ರಿಮಿನಲ್ ಅಪರಾಧವನ್ನಾಗಿ ಕಾಣುವುದನ್ನು ನಿಲ್ಲಿಸಿವೆ. ಭಾರತವೂ ಇಂಥದ್ದೊಂದು ಬದಲಾವಣೆಗೆ ಸಿದ್ಧವಾಗಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಈಗ ಆಡಿರುವ ಮಾತುಗಳ ಮೂಲಕ ಸೂಚ್ಯವಾಗಿ ಹೇಳಿದೆ.

**ಮಾನಹಾನಿಗೆ ಸಂಬಂಧಿಸಿದಂತೆ ದೇಶದಲ್ಲಿ ಜಾರಿಯಲ್ಲಿರುವ ಕಾನೂನುಗಳಿಂದ 'ಕ್ರಿಮಿನಲ್' ಅಪರಾಧದ ಆಯಾಮವನ್ನು ತೆಗೆಯಬೇಕು ಎಂದು ಸುಪ್ರೀಂ ಕೋರ್ಟ್ ನೀಡಿರುವ ಸಲಹೆಯು ಬಹುಕಾಲದಿಂದ ಇರುವ ಬೇಡಿಕೆಯೊಂದಕ್ಕೆ ಬಲ ನೀಡುವ ಕೆಲಸ ಮಾಡಿದೆ. ಮಾನಹಾನಿಯನ್ನು ಕ್ರಿಮಿನಲ್ ಅಪರಾಧವನ್ನಾಗಿ ಕಾಣುವುದು ನ್ಯಾಯಸಮ್ಮತವಲ್ಲ; ಅಂತಹ ಕಾನೂನನ್ನು ಜನರನ್ನು ಬೆದರಿಸಲು ಹಾಗೂ ಅವರಿಗೆ ಸುದೀರ್ಘ ಅವಧಿಗೆ ಕಿರುಕುಳ ನೀಡಲು ಬಳಸಲಾಗುತ್ತಿದೆ ಎಂಬ ಅರ್ಥವು ಸುಪ್ರೀಂ ಕೋರ್ಟ್ ಮಾತುಗಳಲ್ಲಿ ಇದೆ. ಈ ಮಾತುಗಳನ್ನು ಹೇಳುವಾಗ ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಅವರು ವಿಚಾರಣೆಯ ಹಂತದಲ್ಲಿ ಬಾಕಿ ಇರುವ ಮಾನನಷ್ಟ ಪ್ರಕರಣಗಳ ಬಗ್ಗೆ ಕಳವಳವನ್ನೂ ವ್ಯಕ್ತಪಡಿಸಿದ್ದಾರೆ.**



# ರಾಮಾಯಣ




## ದೂಷಣನೇ ಮೊದಲಾದ ಹದಿನಾಲ್ಕು ಸಾವಿರ ರಾಕ್ಷಸರ ವಧೆ

• ಹಿಂದಿನ ಸಂಚಿಕೆಯಿಂದ **119 ನೆಯ ಅಧ್ಯಾಯ**

ಶ್ರೀರಾಮನು ಮೂರಂಬುಗಳನ್ನು ತೊಟ್ಟು ಮಹಾಕಪಾಲನ ಶಿರಸ್ಸನ್ನು ಛೇದಿಸಿ ಕೆಲವು ಶರಗಳಿಂದ ಪ್ರಮಾಥಿಯ ಪ್ರಾಣಾಪಹಾರವನ್ನು ಮಾಡಿ ಸ್ಥೂ ಲಾಕ್ಷನ ಕಣ್ಣುಗಳಲ್ಲಿ ಅನೇಕ ಬಾಣಗಳನ್ನು ನೆಡಲು ಆ ಮೂವರೂ ಗಾಯವಡೆದು ಭೂಮಿಯಲ್ಲಿ ಬಿದ್ದರು. ಈ ರೀತಿಯಲ್ಲಿ ಶ್ರೀರಾಮನ ಜಾಣಗಳಿಂದ ಮೊದಣನೂ ಅವನೊಡನೆ ಹೋದ ನದು ಸಾವಿರ ಪಟುಭಟರೂ ಬಿದ್ದದ್ದನ್ನು ಕಂಡು ಖರನು ಅತ್ಯಂತ ಕೋಪಯುಕ್ತನಾಗಿ ತನ್ನ ಹನ್ನರಡು ಮಂದಿ ಸೇನಾನಾಯಕರನ್ನು ಕರೆದು ಎಲ್ಲೆ ಸೇನಾವತಿಗಳಿರಾ, ರಣರಂಗದಲ್ಲಿ ಶ್ರೀರಾಮನ ಬಾಣಗಳಿಂದ ದೂಷಣನು ಹತನಾದನು, ಆತನೊಡನೆ ಹೋದ ಐದು ಸಾವಿರ ಮಂದಿ ಪಟುಭಟರೂ ಲಯವಾಹರು. ನೀವು ನಮ್ಮ ಸೇನೆಯನ್ನು ಕೂಡಿಕೊಂಡು ನಾನಾಪ್ರಕಾರವಾದ ಆಯುಧಗಳಿಂದ ಯುದ್ಧವನ್ನು ಮಾಡಿ ಹುಲುಮನುಷ್ಯನಾದ ಶ್ರೀರಾಮನನ್ನು ಕೊಲ್ಲಿರಿ ಎಂದು ಆಜ್ಞಾಪಿಸಿದನು. ಆಮೇಲೆ ಖರನಿಂದ ಆಜ್ಞಾಪಿಸಲ್ಪಟ್ಟ ಶೈನಗಾಮಿ ಪೃಥುಗ್ರೀಪ ಯಜ್ಞಶತ್ರು ಮೊದಲಾದ ಹನ್ನೆರಡು ಮಂದಿ ಸೇನಾನಾಯಕರು ತಮ್ಮ ತಮ್ಮ ಸೇನೆಗಳನ್ನು ಕೂಡಿಕೊಂಡು ಶ್ರೀರಾಮನಿಗೆ ಅಭಿಮುಖವಾಗಿ ನಡೆದು ಆತನ ಮೇಲೆ ಆಪರಿಮಿತವಾದ ಬಾಣಗಳನ್ನೆಸೆದರು.

ಶ್ರೀರಾಮನು ಚಿನ್ನದ ಹಿಳುಕುಗಳುಳ್ಳ ಬಾಣಗಳನ್ನು ಆ ಸೇನೆಯ ಮೇಲೆ ಪ್ರಯೋಗಿಸಲು ಆ ವಾಣಗಳು ಹೊಗೆ ಸಹಿತವಾದ ಅಗ್ನಿಯಂತೆ ಭಯಂಕರವಾಗಿ, ಮಜ್ರಾಯುಧವು ವರ್ಜತಗಳನ್ನು ಕತ್ತರಿಸಿ ಕೆಡಹುವಂತೆ ಸಮಸ್ತರಾಕ್ಷಸರನ್ನೂ ಸಂಹರಿಸಿದವು. ಈ ರೀತಿಯಲ್ಲಿ ಶ್ರೀರಾಮನು ತನ್ನೊಡನೆ ಯುದ್ಧಕ್ಕೆ ಬಂದ ರಾಕ್ಷಸರನ್ನು ನೂರು ಮಂದಿ ಎದುರಾದರೆ ಒಂದೇ ಸಾರಿ ನೂರು ಬಾಣಗಳನ್ನು ಪ್ರಯೋಗಿಸಿಯೂ ಸಾವಿರ ಮಂದಿ ಎದುರಾದರೆ ಸಾವಿರ ಬಾಣಗಳನ್ನು ಪುಯೋಗಿಸಿಯೂ ಮುರಿದನು. ರಾಕ್ಷಸರ ಜಿಲ್ಲು ಕವಚ ಮೊದಲಾದವೆಲ್ಲವೂ ಕತ್ತರಿಸಲ್ಪಟ್ಟು ಜಿಲ್ಲುಗಳೊಡೆದು ಶರೀರವೆಲ್ಲವೂ ರಕ್ಷಾಸಗಿ ಅವರು ಭೂಮಿಯಮೇಲೆ ಬೀಳುತ್ತಿದ್ದರು. ಆ ಸಮಯದಲ್ಲಿ ಮಂಡೆಗಳನ್ನು ಕೆದರಿಕೊಂಡು ರಕ್ತದಿಂದ ನೆನೆದು ಬಿದ್ದ ರಾಕ್ಷಸರಿಂದ ಹರಡಲ್ಪಟ್ಟ ರಣಾಂಗಣವು, ರಾಕ್ಷನಶರೀರಗಳೆಂಬ ದರ್ಭೆಗಳಿಂದ ಹರಡಲ್ಪಟ್ಟ ಯಾಗಮಂಟಪದಂತೆ ಕಾಣುತ್ತಿತ್ತು. ಎಲ್ಲಿ ನೋಡಿದರೂ ಮಾಂಸಖಂಡಗಳಿಂದ ಪರಿಪೂರ್ಣವಾಗಿ ನರಕಲೋಕದಂತೆ ಭಯಂಕರವಾಗಿ ತೋರುತ್ತಿತ್ತು. ಈ ರೀತಿಯಲ್ಲಿ ಶ್ರೀರಾಮನು ಯುದ್ಧದಲ್ಲಿ ತನ್ನ ಬಾಣಗಳಿಂದ ಖರನ ಹದಿನಾಲ್ಕು ಸಾವಿರ ಮಂದಿ ರಾಕ್ಷಸರನ್ನೂ ಯಮಲೋಕಕ್ಕೆ ಕಳುಹಿಸಲು ಆ ರಾಕ್ಷಸರಲ್ಲಿ ಖರನೊಬ್ಬನೂ ತ್ರಿಶಿರನೊಬ್ಬನೂ ಉಳಿದರು.

ಮುಂದುವರಿಯುವುದು...



# ಸಾಹಿತ್ಯ ಲೋಕದ ಯಾನ ಮುಗಿಸಿದ ಎಸ್ ಎಲ್ ಬೈರಪ್ಪ



ಹರೀಶ್ ಪುತ್ತೂರು

ಅಕ್ಷರಕ್ಕಿರುವ ಪ್ರೀತಿ ಮತ್ತು ಅರ್ಥವನ್ನು ಸಾಹಿತಿ ಎಸ್ ಎಲ್ ಬೈರಪ್ಪರವರ ಬರಹಗಳನ್ನು ಓದಿದಾಗ ತಿಳಿಯುತ್ತದೆ. ಬರೆದ ಪುಸ್ತಕಗಳೆಷ್ಟು ಎಂಬುದು ಮುಖ್ಯ ಅಲ್ಲ, ಅದೆಷ್ಟು ಆದರ್ಶ ಬೀರಿದೆ ಎಂಬುದು ಮುಖ್ಯ. ಇದು ಎಸ್ ಎಲ್ ಬೈರಪ್ಪರವರ ಬರಹಗಳೊಳಗಿರುವ ಗುಟ್ಟು, ಇದನ್ನು ಇಡೀ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ ಸಾಕ್ಷಿಪ್ರಜ್ಞೆ ಕಣ್ಮರೆಯಾಗಿದ್ದಾರೆ. ಯಾವುದೇ ಒಂದು ಕಾದಂಬರಿ ಬರೆಯಲು ಕುಳಿತರೆ ಅದರಲ್ಲೊಂದು ಅಧ್ಯಾಯನ ಇದ್ದೆ ಇರುತ್ತಿತ್ತು ಅನ್ನೋದು ಅವರ ಬರಹಗಳ ಶೈಲಿಯಲ್ಲೆ ತಿಳಿಯ ಪಡಿಸುತ್ತದೆ.

ಸಾಹಿತ್ಯ ಲೋಕದ ಮಹಾನ್ ಚೇತನ ಬೈರಪ್ಪ, ಬೇಜಾವಬ್ದಾರಿ ತಂದೆಯನ್ನು ಪಡೆದ ಬೈರಪ್ಪ ರವರು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ನಾಡು ಕಂಡಂತಹ ಅತ್ಯುತ್ತಮ ಲೇಖಕರು ಹಾಗೂ ಚಿಂತಕರವರು. ಅದವರನ್ನು ಕಳೆದುಕೊಂಡ ನಾವು ನತದೃಷ್ಟರು. ಅವರ ಬರಹಗಳು ಅನೇಕ ಭಾಷೆಗಳಿಗೆ ಅನುವಾದಗಳಾಗಿವೆ, ದೇಶ ವಿದೇಶಗಳಲ್ಲೂ ಇವರ ಲೇಖನಗಳನ್ನು ಕಾದಂಬರಿಗಳ ಓದುಗರಿದ್ದಾರೆ.

ಅವರು ಬರೆದ ಕಾದಂಬರಿಗಳಲ್ಲಿ ನನಗಿಷ್ಟವಾಗಿದ್ದು ಪರ್ವ ಕಾದಂಬರಿ. ಮಹಾಭಾರತದ ಕತೆಯನ್ನು ಆಧರಿಸಿದ ಕಾದಂಬರಿಯಿದಾಗಿದ್ದು. ಬೈರಪ್ಪನವರ ಪರ್ವ ಕಾದಂಬರಿಗೆ ಮಹಾಭಾರತವೇ ಆಧಾರ ಎನ್ನುವಂತಿದೆ. ಅವರು ಮಹಾಭಾರತವನ್ನು ತನ್ನದೇ ವಿಶಿಷ್ಟ ಮತ್ತು ವಿಭಿನ್ನ ನೆಲೆಯಲ್ಲಿ ಚಿತ್ರಿಸಿದ ಕರುನಾಡಿನ ಸರಸ್ವತಿ ಪುತ್ರ. ಈ ಕಾದಂಬರಿಯಲ್ಲಿ ನಿರೂಪಣಾ ವಿಧಾನವನ್ನು ಕೈ ಬಿಟ್ಟು ಪಾತ್ರಗಳೇ ಕಥನವನ್ನು ನಿರ್ವಹಿಸುತ್ತವೆ. ಮಹಾಭಾರತವನ್ನು ರೂಢಿಗತವಾಗಿ ಹೇಳುವ ಕ್ರಮ ಮಹಾಕಾವ್ಯ ಶೈಲಿಯಲ್ಲಿ ಬರಹಗಳಿದ್ದು. ಬೈರಪ್ಪನವರು ಭಾರತದಲ್ಲಿ ಅದು ಪಾತ್ರವೇ ತನ್ನ ಆತ್ಮಶೋಧ ಮಾಡುತ್ತ ಹೇಳುತ್ತ ಹೋಗುವ ಕಾರಣದಿಂದ ಭಾವಗೀತಾತ್ಮಕ ಆಗಿದೆ.

ಇಂದಿನ ಜನಾಂಗಕ್ಕೆ ಅವರು ಆದರ್ಶ, ಕೇವಲ ಪರ್ವ ಮಾತ್ರವಲ್ಲ, ಗೃಹಭಂಗ, ಆವರಣ, ಮಂದ್ರ, ನಿರಕಾರಣ, ಧರ್ಮಶ್ರೀ, ಅವರು ಬರೆದಂತಹ ಕಾದಂಬರಿಗಳು ಇಡೀ ದೇಶ ವಿದೇಶಗಳಲ್ಲಿ ಸಾಹಿತ್ಯ ಲೋಕಕ್ಕೆ ಜಲಪಾತ ಹರಿಸಿದೆ. ತಂತು, ತಬ್ಬಲಿ ನೀನಾದೆ ಮಗನೆ, ದಾಟು, ನೆಲೆ ಕೃತಿಗಳ ರಚಿಸಿ ದೂರ ಸರಿದರು.

ಯಾನ' ಇದು ಬಹಳ ಅದ್ಬುತ ಕೃತಿ, ಎರಡು ದೋಣಿಯ ಮೇಲೆ ಕಾಲಿಟ್ಟ ಮುಗ್ಧ ಮನುಷ್ಯನಂತೇ ಗೋಚರಿಸುತ್ತದೆ. ವೈಜ್ಞಾನಿಕತೆ ಮತ್ತು ತತ್ವಗಳು ಸಹಜವಾಗಿ ಏಕಮುಖವಾಗಿ ಚಲಿಸಿ ಭೇಟಿಯಾದಂತೆ ಭಾಸವಾಗುತ್ತದೆ. ದಿನೇದಿನೇ ಬದಲಾಗುತ್ತಿರುವ ಸಾಮಾಜಿಕ ಕಟ್ಟುಪಾಡು, ಧೋರಣೆಗಳು ಭವಿಷ್ಯದ ಜನಾಂಗದ ಮೇಲೆ ಬೀರುವ ಪ್ರಭಾವ, ಪರಿಣಾಮಗಳ ಕುರಿತು 'ಯಾನ' ಒಂದು ಯಶಸ್ವಿಯಾದ ಸವಿವರ ವರದಿಯೂ ಹೌದು. ಸೌರಮಂಡಲದಿಂದಾಚೆಗೆ ಪಯಣ ಮಾಡುವಾಗ ಮಾನವನ ನೈತಿಕ ಚೌಕಟ್ಟುಗಳಲ್ಲೂ ಆಗುವ ಪಲ್ಲಟವೇ ಈ ಕಾದಂಬರಿಯ ವಸ್ತು ಸ್ಥಿತಿ. ಇಂತಹ ಉತ್ತಮ ಜ್ಞಾನವನ್ನು ಕೊಡುವ ಕೃತಿಯ ಕರ್ತೃ ಇವತ್ತು ಬದುಕಿನ ಯಾನ ಮುಗಿಸಿದ್ದಾರೆಂಬುದನ್ನು ಅರಗಿಸಿಕೊಳ್ಳಲಾಗುತ್ತಿಲ್ಲ.

ಅವರು ಬರೆದ ಎಲ್ಲಾ ಲೇಖನಿಗಳು ಸಾಹಿತ್ಯ ಜಗತ್ತಿಗೆ ಹೊಸ ಬೆಳಕನ್ನು ಬೀರಿದೆ. ಇವತ್ತು ಇಡೀ ಕನ್ನಡ ನಾಡಿಗೆ ಸಾಹಿತ್ಯ ರತ್ನದ ಚಿಲುಮೆಯನ್ನು ಅಕ್ಷರಗಳ ಮುಖೇನ ಪರಿಚಯಿಸಿ ಹೊಸ ಅಧ್ಯಾಯವನ್ನು ಸೃಷ್ಟಿಸಬಲ್ಲ ಕಾದಂಬರಿ, ಲೇಖನಿಗಳನ್ನು ನೀಡಿದ ಎಸ್ ಎಲ್ ಬೈರಪ್ಪ ರವರು ಸತಸತ ಮಾನಗಳ ಕಾಲ ಅವರು ನಮ್ಮೊಂದಿಗೆ ಇರಿ. ಹೋಗಿ ಬನ್ನಿ ಅಕ್ಷರ ಗುರುಗಳೆ.

# ಸ್ವಯಂವರ ಗ್ರ್ಯಾಂಡ್ ಉಡುಗೆ ಮಾತ್ರವೇ ಅಲ್ಲ, ಇದು ನಮ್ಮ ಹೆಮ್ಮೆ: ರಿಷಬ್ ಶೆಟ್ಟಿ

• ಉದಯವಾಹಿನಿ, ಬೆಂಗಳೂರು

ಭಾರತದ ದಕ್ಷಿಣ ಭಾರತೀಯ ಸಾಂಪ್ರದಾಯಿಕ ಉಡುಗೆಯ ಅತ್ಯಂತ ಪ್ರತಿಷ್ಠಿತ ಮತ್ತು ಜನಪ್ರಿಯ ಬ್ರಾಂಡ್ ಆಗಿರುವ ರಾಮ್‌ರಾಜ್ ಕಾಟನ್ ಇದೀಗ ವಿಶೇಷ ಸಂದರ್ಭಗಳಿಗಾಗಿಯೇ ರೂಪಿಸಿರುವ ಸ್ವಯಂವರ ಗ್ರ್ಯಾಂಡ್ ಕಲೆಕ್ಷನ್ ಅನ್ನು ಬಿಡುಗಡೆ ಮಾಡಿದೆ.

ಸ್ವಯಂವರ ಗ್ರ್ಯಾಂಡ್‌ನಲ್ಲಿ ಸೊಗಸಾದ ಆರ್ಟ್ ಸಿಲ್ಕ್ ಧೋತಿ, ಶರ್ಟ್ ಮತ್ತು ಟವೆಲ್ ಸೆಟ್ ಅನ್ನು ಒದಗಿಸಲಾಗುತ್ತಿದೆ. ಆಧುನಿಕ ಸ್ಪರ್ಶ ಇರುವ ಸಾಂಪ್ರದಾಯಿಕ ಉಡುಪನ್ನು ಮೆಚ್ಚುವ ಪುರುಷರಿಗಾಗಿ ರಚಿಸಲಾದ ಈ ಸಂಗ್ರಹವು ನಿಮ್ಮ ಸಂಸ್ಕೃತಿಯ ಭಾಗವಾದ ದಿರಿಸನ್ನು ಹೆಮ್ಮೆಯಿಂದ ಧರಿಸಲು ಅನುವು ಮಾಡಿಕೊಡುತ್ತದೆ. ಭಾರತೀಯ ನೇಯ್ಗೆ ಕಲೆಯನ್ನು ಸಂಭ್ರಮಿಸುವ ಈ ಸಂಗ್ರಹವು ಅದ್ದೂರಿಯಾಗಿದೆ ಮತ್ತು ಆಕರ್ಷಕ ವಿನ್ಯಾಸವನ್ನು ಹೊಂದಿದೆ. ಪ್ರತೀ ಸೆಟ್ ಅನ್ನೂ ಪ್ರೀಮಿಯಂ ಗುಣಮಟ್ಟದ ಕೃತಕ ರೇಷ್ಮೆಯಿಂದ ತಯಾರಿಸಲಾಗಿದೆ.



ಉಡುಪು ತುಂಬಾ ಮೃದುವಾಗಿದೆ ಮತ್ತು ಆರಾಮದಾಯಕ ಅನುಭವವನ್ನು ನೀಡುತ್ತದೆ. ಹೊಳಪನ್ನು ಹೊಂದಿರುವ ಈ ಉಡುಪು ಆಕರ್ಷಕವಾಗಿ ಮೂಡಿಬಂದಿದೆ. ಜಾಕ್ವಾರ್ಡ್ ಪ್ಯಾಟರ್ನ್ ಮತ್ತು ಚಿನ್ನದ ಲೇಪನವಿರುವ ಬಾರ್ಡರ್ ಇದರ ಸಾಂಪ್ರದಾಯಿಕ ಆಕರ್ಷಣೆಯನ್ನು ಹೆಚ್ಚಿಸುತ್ತವೆ. ಆರು ಸೊಗಸಾದ ಬಣ್ಣಗಳಲ್ಲಿ ಮತ್ತು ಬಹುವಿಧದ ಪ್ಯಾಟರ್ನ್ ಗಳಲ್ಲಿ ಈ ಸಂಗ್ರಹ ಲಭ್ಯವಿದೆ.

ಈ ಕುರಿತು ಮಾತನಾಡಿದ ರಾಮ್‌ರಾಜ್ ಕಾಟನ್‌ನ ಅಧ್ಯಕ್ಷ ಶ್ರೀ ಕೆ.ಆರ್. ನಾಗರಾಜನ್ ಅವರು, ಹಲವು ದಶಕಗಳಿಂದ ರಾಮ್‌ರಾಜ್ ಕಾಟನ್ ನಮ್ಮ ಸ್ವದೇಶಿ ಪರಂಪರೆಯನ್ನು ಜಗತ್ತಿಗೆ ಪಸರಿಸುತ್ತಾ ಬಂದಿದೆ. ಇದೀಗ ಜೀವನದ ಸ್ಮರಣೀಯ ಕ್ಷಣಗಳಿಗಾಗಿ ಸ್ವಯಂವರ ಗ್ರ್ಯಾಂಡ್ ಅನ್ನು ಬಿಡುಗಡೆ ಮಾಡಿದ್ದೇವೆ. ನಮ್ಮ ಸಂಸ್ಥೆಯ ಮೌಲ್ಯಗಳನ್ನು ಪ್ರತಿನಿಧಿಸುವ ನಮ್ಮ ಬ್ರ್ಯಾಂಡ್ ಅಂಬಾಸಿಡರ್ ಶ್ರೀ ರಿಷಬ್ ಶೆಟ್ಟಿಯವರು ಈ ಸಂಗ್ರಹ ಬಿಡುಗಡೆ ಮಾಡಿರುವುದು ಸಂತೋಷ ತಂದಿದೆ ಎಂದು ಹೇಳಿದರು. ಈ ಸಂಗ್ರಹವು ಈಗ ಎಲ್ಲಾ ರಾಮ್‌ರಾಜ್ ಕಾಟನ್ ಎಕ್ಸ್‌ಕ್ಲೂಸಿವ್ ಮಳಿಗೆಗಳಲ್ಲಿ ಮತ್ತು ದೇಶಾದ್ಯಂತ ಪ್ರಮುಖ ಜವಳಿ ಮಳಿಗೆಗಳಲ್ಲಿ ಲಭ್ಯವಿದೆ.

> **ರಾಮ್‌ರಾಜ್ ಕಾಟನ್ ಅನ್ನು ಪ್ರತಿನಿಧಿಸುತ್ತಿರುವುದು ನನಗೆ ದೊರೆತಿರುವ ಗೌರವ ಎಂದು ಭಾವಿಸಿದ್ದೇನೆ. ಯಾಕೆಂದರೆ ಈ ಬ್ರಾಂಡ್ ಅತ್ಯುತ್ತಮ ಗುಣಮಟ್ಟ ಹೊಂದಿದೆ ಸಂಪ್ರದಾಯಕ್ಕೆ ಬದ್ಧವಾಗಿರುವ ಬ್ರ್ಯಾಂಡ್ ಆಗಿದೆ. ಸ್ವಯಂವರ ಗ್ರ್ಯಾಂಡ್ ಕೇವಲ ಉಡುಗೆ ಮಾತ್ರವೇ ಅಲ್ಲ, ಹೆಮ್ಮೆಯಾಗಿದೆ. ಮದುವೆ, ಹಬ್ಬಗಳು ಮತ್ತು ವಿಶೇಷ ಸಂದರ್ಭಗಳಿಗೆ ಘನತೆಯನ್ನು ಒದಗಿಸುತ್ತದೆ ಎಂದು ಹೇಳಿದರು.**
> ನಟ ಮತ್ತು ನಿರ್ದೇಶಕ ರಿಷಬ್ ಶೆಟ್ಟಿ

# ಎಸ್‌ಐಟಿ ತನಿಖೆಗೆ ವೀರೇಂದ್ರ ಹೆಗಡೆ ಸ್ವಾಗತ

• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ ತನಿಖೆ ಬಗ್ಗೆ ಧರ್ಮಾಧಿಕಾರಿ ವೀರೇಂದ್ರ ಹೆಗಡೆ ಅವರು ಸ್ವಾಗತ ಮತ್ತು ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ ವಿಚಾರಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

ನಾವು ಯಾವಾಗಲೂ ಒಳ್ಳೆಯದನ್ನೇ ಮಾಡುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಇನ್ನೊಂದೆಡೆ ಡಿಸಿಎಂ ಡಿಕೆಶಿ ಪ್ರತಿಕ್ರಿಯಿಸಿ, ಕಾಂಗ್ರೆಸ್ ಸರ್ಕಾರ ಯಾವತ್ತಿಗೂ ಯಾರಿಗೂ ತೊಂದರೆ ಬಯಸುವುದಿಲ್ಲ. ಕಾನೂನಿನ ಚೌಕಟ್ಟಿನೊಳಗೆ ಏನು ನ್ಯಾಯ ಒದಗಿಸಬೇಕೋ ಅದನ್ನು ಮಾಡುತ್ತೇವೆ ಎಂದರು. ತಪ್ಪು ಮಾಡಿದವರಿಗೂ ಕಾನೂನು ರೀತಿಯಲ್ಲಿ ಕ್ರಮ ವಹಿಸಲಾಗುತ್ತದೆ. ಇವತ್ತಿನವರೆಗೂ ನಾವು ಧರ್ಮಸ್ಥಳ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಿಲ್ಲ. ನಾವು ಕೂಡ ಅಧಿಕಾರಿಗಳ ಬಳಿ ಏನು ಅಂತಾ ಕೇಳಿಲ್ಲ. ಇಷ್ಟು ದಿನಗಳ ಕಾಲ ಮಾಧ್ಯಮಗಳಲ್ಲಿ ಬಂದ ವರದಿ ಬಗ್ಗೆ ನಾವು ಮಾತಾಡಿದ್ದೇವೆ. ಮುಂದೆ ಅಂತಿಮವಾದ ವರದಿ ಬರಲಿ, ಆ ನಂತರ ಮಾತಾಡೋಣ ಎಂದು ಡಿಕೆಶಿ ಹೇಳಿದರು.



• ಉದಯವಾಹಿನಿ, ಬೆಂಗಳೂರು


ನಗರದ ಪ್ರತಿಷ್ಠಿತ ನೃತ್ಯ ಸಂಸ್ಥೆಯಾದ ನೃತ್ಯ ದಿಶಾ ಟ್ರಸ್ಟಿನ ಸಂಸ್ಥಾಪಕರೂ ಗುರುಗಳೂ ಆದ ಕಲಾಭೂಷಿಣಿ ಡಾ. ದರ್ಶಿನಿ ಮಂಜುನಾಥ್ ರವರ ಶಿಷ್ಯೆ ಕು||.ಪ್ರಿಯಾಂಕಾ ಶ್ರೀನಿವಾಸ್ ಅವರ ರಂಗಪ್ರವೇಶ ಸೆಪ್ಟೆಂಬರ್ 28, ಭಾನುವಾರ ಸಂಜೆ 6-00ಕ್ಕೆ ನಗರದ ಜೆ. ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನೆರವೇರಲಿದೆ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಬಿ. ಎಚ್. ನಿಶ್ಚಲ್ (ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಇಲಾಖೆ), ಶ್ರೀ ನಂಜುಂಡರಾವ್ (ಖ್ಯಾತ ವಿಮರ್ಶಕರು ಮತ್ತು ಅಂಕಣಕಾರರು), ಶ್ರೀ ಶ್ರೀನಿವಾಸಮೂರ್ತಿ (ಚಲನಚಿತ್ರ ನಿರ್ಮಾಪಕರು ಮತ್ತು ಸಾಮಾಜಿಕ ಕಾರ್ಯಕರ್ತರು), ಶ್ರೀ ಗಣೇಶ ಆರ್, (ಅರ್ಚಕರು), ಶ್ರೀ ಶಿವಕುಮಾರ್, (ಮಾಜಿ ಸದಸ್ಯರು ಮತ್ತು ಸಾಮಾಜಿಕ ಕಾರ್ಯಕರ್ತರು) ಆಗಮಿಸಲಿದ್ದಾರೆ.

ಇದು ನೃತ್ಯ ದಿಶಾ ಟ್ರಸ್ಟ್‌ನ 17ನೇ ರಂಗಪ್ರವೇಶ ಆಗಿದ್ದು, ಗುರು. ಡಾ|| ದರ್ಶಿನಿ ಮಂಜುನಾಥ್ ಅವರ ಸಂಯೋಜನೆಗೆ ಕು|| ಪ್ರಿಯಾಂಕಾ ಶ್ರೀನಿವಾಸ್ ಅತ್ಯಂತ ಆಸಕ್ತಿಯಿಂದ, ಶ್ರದ್ಧಾಭಕ್ತಿಯೊಂದಿಗೆ ಸಜ್ಜಾಗಿದ್ದಾರೆ.

**ವಾದ್ಯಮೇಳದಲ್ಲಿ:** ನಟ್ಟುವಾಂಗ-ಗುರು ಡಾ|| ದರ್ಶಿನಿ ಮಂಜುನಾಥ್, ಗಾಯನ-ವಿದುಷಿ ಶ್ರೀಮತಿ ಭಾರತಿ ವೇಣುಗೋಪಾಲ್, ಮೃದಂಗಂ : ವಿದ್ವಾನ್ ಶ್ರೀ ಎಸ್.ವಿ. ಗಿರಿಧರ್, ಪಿಟೀಲು: ವಿದ್ವಾನ್ ಶ್ರೀ ಸಿ. ಮಧುಸೂದನ್, ಕೊಳಲು : ವಿದ್ವಾನ್ ಶ್ರೀ ಎಂ.ಎಸ್. ಪ್ರಮುಖ್, ರಿದಂ ಪ್ಯಾಡ್ : ವಿದ್ವಾನ್ ಶ್ರೀ ಕಾರ್ತೀಕ್ ವೈಧತ್ರಿ, ವೀಣಾ : ಮಾ|| ಅಚ್ಯುತ್ ಜಗದೀಶ್ ಕಲಾರಸಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮಕ್ಕೆ ಆಗಮಿಸಿ, ಯುವ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕೆಂದು ಸಂಸ್ಥೆಯ ಎಲ್ಲಾ ಸದಸ್ಯರು ವಿನಂತಿಸಿದ್ದಾರೆ.




# ಜ್ವಾಲಾಪೀಠ



ಡಾ.ಡಿ.ಸಿ.ರಾಮಚಂದ್ರ, ಶ್ರೀಕ್ಷೇತ್ರ ಆದಿಚುಂಚನಗಿರಿ

ಪ್ರಸಿದ್ಧ ಪುಣ್ಯಕ್ಷೇತ್ರವೂ, ಪ್ರಾಚೀನವೂ ಆದ ಮಹಾನ್ ಧರ್ಮಕ್ಷೇತ್ರ ಶ್ರೀಆದಿಚುಂಚನಗಿರಿ, 1800 ವರ್ಷಗಳಿಗೂ ಹೆಚ್ಚು ಪುರಾಣೇತಿಹಾಸವುಳ್ಳ ಶ್ರೀಕ್ಷೇತ್ರವೂ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ, ನಾಗಮಂಗಲ ತಾಲ್ಲೂಕಿನ, ಬೆಳ್ಳೂರಿನಿಂದ ಸುಮಾರು 6ಕಿ.ಮೀ ದೂರದಲ್ಲಿದೆ. ರಮಣೀಯವೂ, ಪ್ರಶಾಂತವೂ ಹಸಿರು ವನಸಿರಿಯಿಂದ ಕಂಗೊಳಿಸುತ್ತಿರುವ ಶ್ರೀಕ್ಷೇತ್ರವು ಪರಶಿವನ ತಪ್ಪೋಭೂಮಿಯಾಗಿತ್ತು ಎಂದು ಜನಪದ ಮತ್ತು ಪುರಾಣದಿಂದ ತಿಳಿದು ಬರುತ್ತದೆ. ಪುರಾಣದಲ್ಲಿ ತಿಳಿದಂತೆ ಶ್ರೀಪೀಠವೂ ಸ್ಥಾಪನೆಯಾದದ್ದು ತ್ರೇತಾಯುಗದಲ್ಲಿ ಪರಮೇಶ್ವರನೇ ಈ ಪೀಠದ ಸ್ಥಾಪಕ ಎಂದು ನಂಬಲಾಗಿದೆ. ಶ್ರೀ ಜ್ವಾಲಾಪೀಠವು ಶಿವನು ತಪಸ್ಸಿಗೆ ಕುಳಿತ ಪವಿತ್ರವಾದ ಸ್ಥಳ. ಶಿವನ ತೇಜಸ್ಸಿನ ಅಂಶದಿಂದ ಕೂಡಿರುವುದರಿಂದ ಈ ಪೀಠವು 'ಜ್ವಾಲಾಪೀಠ', ಉರಿಗದ್ದುಗೆ ಎಂಬ ಹೆಸರು ಪಡೆದಿದೆ. ಹಿರಿಯರು ಹೇಳುವಂತೆ ಜ್ವಾಲಾಪೀಠದ ಮೇಲೆ ಸಾಸಿವೆ ಎಸೆದರೆ ಕ್ಷಣದಲ್ಲೇ ಸಿಡಿಯುತಿತ್ತು ಎಂದು ಹೇಳುತ್ತಾರೆ. ಈ ಜ್ವಾಲಾಪೀಠವೂ ಈಶ್ವರನ ತೇಜೋ ಅಂಶಗಳಿಂದ ಕೂಡಿರುವ ಕಾರಣದಿಂದ ಇದು ಅಗ್ನಿಮಯವಾದುದಾಗಿದೆ.

ಶ್ರೀ ಗುರು ಗೋರಖನಾಥರು ಶ್ರೀ ಕ್ಷೇತ್ರಕ್ಕೆ ಬಂದು ಪರಶಿವನು ತಪಸ್ಸು ಮಾಡಿದ ಜ್ವಾಲಾಪೀಠದ ಸ್ಥಳದಲ್ಲಿಯೇ ಕುಳಿತು ತಪಸ್ಸು ಮಾಡಿ ಸಿದ್ಧಿಯನ್ನು ಪಡೆದರು ಎಂಬ ಇತಿಹಾಸ ಇದೆ. ಅಂದಿನಿಂದಲೂ ಶ್ರೀ ಕ್ಷೇತ್ರ ನಾಥ ಪಂಥದ ಪ್ರಮುಖ ಪೀಠವಾಗಿ ಹೆಗ್ಗಳಿಕೆಯನ್ನು ಗಳಿಸಿದೆ.3 ಶ್ರೀಡಾ.ನಿರ್ಮಲಾನಂದನಾಥ ಈ ಜ್ವಾಲಾಪೀಠವನ್ನು ಕ್ಷೇತ್ರಧ್ಯಕ್ಷರಾದ ಜಗದ್ಗುರು ಮಹಾಸ್ವಾಮೀಜಿಯವರು ನವರಾತ್ರಿಯಲ್ಲಿ ಮಹಾನವಮಿಯ ಆಯುಧ ಪೂಜೆ, ಮಹಾಶಿವರಾತ್ರಿ ಮತ್ತು ಹೋಳಿ ಹುಣ್ಣಿಮೆಂದು ನಡೆಯುವ ರಥೋತ್ಸವದ ಹಿಂದಿನ ದಿನದಂದು ವರ್ಷದಲ್ಲಿ ಬಾರಿಯಷ್ಟೇ ಶ್ರೀಗಳು ಉರಿಗದ್ದುಗೆಯನ್ನು ಅಲಂಕರಿಸುತ್ತಾರೆ. ಪೀಠಸ್ಥರಾದವರನ್ನು ದರ್ಶನ ಮಾಡಿದರೆ ಫಲಾಫಲಗಳು ಲಭಿಸುತ್ತದೆ ಎಂದು ಮಾನವ ಜನ್ಮ ಪಡೆದುದಕ್ಕೆ ಸಾರ್ಥಕವಾಯಿತು ಎಂದು ಜ್ವಾಲಾಪೀಠದಲ್ಲಿ ಆರೋಹಣರಾಗಿರುವ ಗುರುಗಳ ದರ್ಶನವನ್ನು ಮಾಡಿದರೆ ಕೈಲಾಸದಲ್ಲಿ ಪರಶಿವನ ದರ್ಶನ ಮಾಡಿದಷ್ಟೇ ಪುಣ್ಯ ಲಭಿಸುತ್ತದೆ ಎಂದು ನಂಬಿದ್ದಾರೆ ಅಸಂಖ್ಯಾತ ಭಕ್ತ ಸಮೂಹ.

# ಕುಮಾರಿ ಪೂಜೆ ಏಕೆ, ಹೇಗೆ ಮಾಡಬೇಕು ?

ಶ್ರೀ. ವಿನೋದ ಕಾಮತ್,

**12 ವರ್ಷದ ಅವಿವಾಹಿತ ಕನ್ಯೆಗೆ ಕುಮಾರಿ ಎನ್ನುತ್ತಾರೆ. ಅವಳ ಸ್ಮೃತ್ಯುಕ್ತ ಲಕ್ಷಣಗಳು ಹೀಗಿವೆ :**

**ಅಷ್ಟವರ್ಷಾ ಭವೇದ್ ಗೌರಿ ದಷವರ್ಷಾ ಚ ಕನ್ಯಕಾ ।**
**ಸಂಪ್ರಾಪ್ತೇ ದ್ವಾದಶೇ ವರ್ಷೇ ಕುಮಾರೀತ್ಯಭಿದೀ ಯತೇ ॥**

**ಅರ್ಥ:** ಹುಡುಗಿಗೆ 8ನೇ ವರ್ಷದಲ್ಲಿ 'ಗೌರಿ', 10ನೇ ವರ್ಷದಲ್ಲಿ 'ಕನ್ಯಾ' 12ನೇ ವರ್ಷವು ಪ್ರಾರಂಭವಾದಾಗ 'ಕುಮಾರಿ' ಎನ್ನುತ್ತಾರೆ. ಪ್ರಾಚೀನ ಕಾಲದಲ್ಲಿ ಕೆಲವು ಸ್ತ್ರೀಯರು ಆಜನ್ಮ ಅವಿವಾಹಿತರಾಗಿರುತ್ತಿದ್ದರು. ಅವರ ಪ್ರೌಢ ಅಥವಾ ವೃದ್ಧ ವಯಸ್ಸಿನಲ್ಲಿಯೂ ಅವರನ್ನು ಕುಮಾರಿ ಎಂದೇ ಕರೆಯುತ್ತಿದ್ದರು; ಇದು ಅಷ್ಟಾಧ್ಯಾಯಿಯಿಂದ ತಿಳಿಯುತ್ತದೆ, ಉದಾ. ವೃದ್ಧ ಕುಮಾರಿ, ಜರತ್ಕುಮಾರಿ. (ಅಷ್ಟಾಧ್ಯಾಯಿ, 6.2.95) ಮುತ್ತೈದೆಯರು ದೇವಿಯ ಪ್ರಕಟ ಶಕ್ತಿಯ ಪ್ರತೀಕವಾಗಿದ್ದು ಕುಮಾರಿಯರು ದೇವಿಯ ಅಪ್ರಕಟ ಶಕ್ತಿಯ ಪ್ರತೀಕವಾಗಿದ್ದಾರೆ. ಪ್ರಕಟ ಶಕ್ತಿಯಲ್ಲಿ ಶಕ್ತಿಯು ಸ್ವಲ್ಪ ಪ್ರಮಾಣದಲ್ಲಿ ಅಪವ್ಯಯವಾಗುವುದರಿಂದ ಮುತ್ತೈದೆಯರ ಬದಲು ಕುಮಾರಿಯರಲ್ಲಿ ಶಕ್ತಿಯು ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ನವರಾತ್ರಿಯಲ್ಲಿ ಒಂಬತ್ತು ದಿನ ಪ್ರತಿಯೊಂದು ದಿನ ಒಬ್ಬಳಿಗೆ ಅಥವಾ ಮೊದಲ ದಿನ ಒಬ್ಬಳಿಗೆ, ಎರಡನೇ ದಿನ ಇಬ್ಬರಿಗೆ, ಒಂಬತ್ತನೇ ದಿನ ಒಂಬತ್ತು ಕುಮಾರಿಯರಿಗೆ, ಹೀಗೆ ಏರಿಕೆ ಕ್ರಮದಲ್ಲಿ ಭೋಜನವನ್ನು ನೀಡಬೇಕೆಂಬ ವಿಧಾನವಿದೆ. ಎರಡರಿಂದ ಹತ್ತು ವರ್ಷಗಳ ವಯಸ್ಸಿನ ಕುಮಾರಿಯರನ್ನು ಭೋಜನಕ್ಕೆ ಆಮಂತ್ರಿಸುತ್ತಾರೆ. ಪ್ರತಿಯೊಂದು ವರ್ಣದವರೂ ತಮ್ಮ ತಮ್ಮ ವರ್ಣದ ಕುಮಾರಿಯರನ್ನು ಭೋಜನಕ್ಕೆ




ಆಮಂತ್ರಿಸಬೇಕಾಗಿರುತ್ತದೆ. ಅವಳು ನಿರ್ದೋಷ, ನಿರೋಗಿ ಮತ್ತು ಅವ್ಯಂಗಳಾಗಿರಬೇಕು' ಎಂದೂ ಹೇಳಲಾಗಿದೆ. ದೇವೀಪೂಜೆಯಾದ ನಂತರ ಕುಮಾರಿಯ ಪೂಜೆಯನ್ನು ಮಾಡುತ್ತಾರೆ. ಮೊದಲು ಮುಂದಿನ ಮಂತ್ರದಿಂದ ಅವಳ ಆವಾಹನೆಯನ್ನು ಮಾಡುತ್ತಾರೆ.

**ಮಂತ್ರಾಕ್ಷರಮಯೀಂ ಲಕ್ಷ್ಮೀಂ ಮಾತೃಣಾಂ ರೂಪ ಧಾರಿಣೀಮ್।**
**ನವದುರ್ಗಾತ್ಮಿಕಾಂ ಸಾಕ್ಷಾತ್ ಕನ್ಯಾಮಾವಾಹ ಯಾಮ್ಯಹಮ್॥**

ಅರ್ಥ : ಮಂತ್ರಾಕ್ಷರಮಯ, ಲಕ್ಷ್ಮೀ ಸ್ವರೂಪ, ಮಾತೃಕೆಗಳ ರೂಪವನ್ನು ಧರಿಸುವ ಹಾಗೂ ಸಾಕ್ಷಾತ್ ನವ ದುರ್ಗಾತ್ಮಿಕೆಯಾಗಿರುವಂತಹ ಕನ್ಯೆಯನ್ನು ನಾನು ಆವಾಹನೆ ಮಾಡುತ್ತೇನೆ.

ಮೊದಲು ಕುಮಾರಿಯ ಕಾಲುಗಳನ್ನು ತೊಳೆಯುತ್ತಾರೆ, ಅವಳನ್ನು ಸುಶೋಭಿತ ಎತ್ತರವಾದ ಮರದ ಮಣೆಯ ಮೇಲೆ ಕೂರಿಸುತ್ತಾರೆ, ಗಂಧ, ಪುಷ್ಪ, ಲಂಗ-ರವಿಕೆ ಕೊಡುತ್ತಾರೆ ಮತ್ತು ಅವಳ ಕೊರಳಿನಲ್ಲಿ ಹೂಮಾಲೆಯನ್ನು ಹಾಕುತ್ತಾರೆ. ಅವಳಿಗೆ ಪಂಚಾಮೃತ, ಮೃಷ್ಟಾನ್ನವನ್ನು ಸಮರ್ಪಿಸುತ್ತಾರೆ. ನಂತರ ಅವಳಿಗೆ ನಮಸ್ಕಾರ ಮಾಡುತ್ತಾರೆ.' ಶಾಕ್ತ ತಂತ್ರದಲ್ಲಿ ಕುಮಾರಿಪೂಜೆಗೆ ವಿಶೇಷ ಮಹತ್ವವಿದೆ.

# ತಾಯಿ ಮಕ್ಕಳ ಆಸ್ಪತ್ರೆ ಉದ್ಘಾಟನೆ: ಶಾಸಕ ಹಂಪನಗೌಡ ಬಾದರ್ಲಿ

• ಉದಯವಾಹಿನಿ ಸಿಂಧನೂರು

ನಗರದ ತಾಯಿ ಮಕ್ಕಳ ಆಸ್ಪತ್ರೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟನೆ ಮಾಡಲಿದ್ದಾರೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ದಿ. 27 ರಂದು ಇಂದು ನಗರದ ಪಿಡಬ್ಲ್ಯೂಡಿ ಕ್ಯಾಂಪಿನಲ್ಲಿ ತಾಯಿ ಮಕ್ಕಳ ಆಸ್ಪತ್ರೆಯ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಹಾಗೂ ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಇಲಾಖೆ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ತಾಯಿ ಮಕ್ಕಳ ಆಸ್ಪತ್ರೆ ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯಾಲಯ ಸೇರಿದಂತೆ ಎರಡು ನೂತನ ಕಟ್ಟಡಗಳನ್ನು ಉದ್ಘಾಟಿಸಿ. ತಾಲ್ಲೂಕಿನ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಸಿಂಧನೂರು ದಸರಾ ಉತ್ಸವ ಹಾಗೂ ಸಾರ್ವಜನಿಕರು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ತಿಳಿಸಿದರು.

**ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ**

ದಿ.28 ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ನಮ್ಮ ನಡೆ ಆರೋಗ್ಯದ ಕಡೆ ಎಂಬ ಆರೋಗ್ಯ ಶಿಬಿರ ಬೆಳ್ಳಗೆ 10 ಗಂಟೆ ಯಿಂದ ಸಂಜೆ 4 ಗಂಟೆ ವರಿಗೂ ನಡೆಸಲಾಗುವುದು ಎಂದರು.

ಹೃದಯ. ರೋಗ ಕ್ಯಾನ್ಸರ್ ಮಕ್ಕಳ ತಪಾಸಣೆ. ನರರೋಗ . ಸೇರಿದಂತೆ ಹಲವು ರೋಗಗಳು ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯುವುದಕ್ಕೆ ಸಾದ್ಯ ವಾಗುತ್ತದೆ ಎಂದು ಸಲಹೆಗಳನ್ನು ನೀಡಲಾಗಿದೆ ಆದ್ದರಿಂದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕರು ತಿಳಿಸಿದರು.ಐ.ಎಂ ಯ ಅಸೋಸಿಯೇಶನ್ ಅಧ್ಯಕ್ಷ ಡಾ. ಬಿ ಎನ್ ಪಾಟೀಲ್. ರೇಣುಕಾ ನರ್ಸ್‌ಂಗ್ ಕಾಲೇಜು ಅಧ್ಯಕ್ಷ ಡಾ. ವೀರಭದ್ರ ಗೌಡ ಬಸವರಾಜ ಹಿರೇಗೌಡ. ತಾಲ್ಲೂಕು ಆಸ್ಪತ್ರೆಯ ಮುಖ್ಯ ವೈದ್ಯರಾದ ಸುರೇಶ್ ಗೌಡ. ತಾಯಿ ಮಕ್ಕಳ ಮುಖ್ಯ ಆಡಳಿತಾಧಿಕಾರಿ ಡಾ.ನಾಗರಾಜ ಕಾಟ್ವಾ, ಸಿ.ಎಮ್.ಒ ಸುರೇಶಗೌಡ,ಕ್ಷಯ ರೋಗ ಅಧಿಕಾರಿ ಡಾ.ಶಾಕೀರ್, ಟಿ.ಎಚ್.ಒ ಅಯ್ಯನಗೌಡ, ಡಾ.ಶಂಕುತಲಾ ಪಾಟೀಲ್,ಡಾ. ಕಾವೇರಿ, ಡಾ.ಪುಷ್ಪಲತಾ, ಡಾ.ವಿದ್ಯಾರಾಣಿ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

### ಜಿಲ್ಲಾ ಕೇಂದ್ರದ ಅಧಿಕಾರಿಗಳು ಮೇಲಿಂದ ಮೇಲೆ ವರ್ಗಾವಣೆಯಾಗಿದ್ದು ಕೂಡ ಅಕ್ರಮ ಎಸಗುವವರಿಗೆ ಅನುಕೂಲವಾಗಿದೆ

# ಪಡಿತರ ಅಕ್ಕಿ ಅಕ್ರಮ– ಒಂದೇ ತಿಂಗಳಲ್ಲಿ ಆರು ಪ್ರಕರಣ ದಾಖಲು

• ಉದಯವಾಹಿನಿ ಕೊಪ್ಪಳ

ಗಂಗಾವತಿಯ ಸರ್ಕಾರಿ ಗೋದಾಮಿನಲ್ಲಿಟ್ಟಿದ್ದ ಪಡಿತರ ಅಕ್ಕಿಯನ್ನು ಖಾಸಗಿ ಚೀಲಗಳಿಗೆ ಹೆಚ್ಚುವರಿಯಾಗಿ ತುಂಬಿ ಅಕ್ರಮವಾಗಿ ಸಾಗಣೆ ಮಾಡಲು ಯತ್ನಿಸುತ್ತಿದ್ದ ಆರೋಪದ ಪ್ರಕರಣ ಬೆಳಕಿಗೆ ಬಂದ ಬಳಿಕ ಎಚ್ಚೆತ್ತುಕೊಂಡಿರುವ ಜಿಲ್ಲೆಯ ಅಧಿಕಾರಿಗಳು ನಿರಂತರ ದಾಳಿ ನಡೆಸುತ್ತಿದ್ದಾರೆ.

ಗಂಗಾವತಿ ಪ್ರಕರಣದ ಬಳಿಕ 6 ದೂರುಗಳನ್ನು ದಾಖಲಿಸಿದ್ದು ಮುಂದಿನ ಕಾನೂನು ಪ್ರಕ್ರಿಯೆ ನಡೆಸಿದ್ದಾರೆ. ಮುನಿರಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೆಲವು ದಿನಗಳ ಹಿಂದೆ ಪತ್ತೆಯಾಗಿದ್ದ ಅಕ್ಕಿಯನ್ನು ಆರಂಭದಲ್ಲಿ 11 ಕ್ವಿಂಟಲ್ ಮಾತ್ರ ಎಂದು ಅಧಿಕಾರಿಗಳು ಹೇಳಿದ್ದರು. ಲಾರಿಯಲ್ಲಿ ಅಕ್ಕಿಗಳ ಮೂಟೆಗಳ ಬಗ್ಗೆ ಅನುಮಾನ ವ್ಯಕ್ತವಾಗಿದ್ದರಿಂದ ಮರಳಿ ಪರಿಶೀಲಿಸಲಾಗಿದ್ದು 35 ಕ್ವಿಂಟಲ್ ಅಕ್ಕಿ ಎನ್ನುವುದು ಖಾತ್ರಿಯಾಗಿದೆ. ಈ ಕುರಿತು ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿದೆ.

ಜಿಲ್ಲೆಯಲ್ಲಿ ಮೇಲಿಂದ ಮೇಲೆ ಪಡಿತರ ಅಕ್ಕಿಗಳನ್ನು ಅಕ್ರಮವಾಗಿ ಮಾರಾಟ ಹಾಗೂ ಸಾಗಾಟ ಮಾಡುತ್ತಿರುವ ಪ್ರಕರಣಗಳು ನಡೆಯುತ್ತಲೇ ಇವೆ. ಇತ್ತೀಚೆಗಷ್ಟೇ ಅಳವಂಡಿ ಭಾಗದಲ್ಲಿ ಆಟೊದಲ್ಲಿ ಸಾಗಣೆ ಮಾಡುತ್ತಿದ್ದ 15 ಚೀಲಗಳನ್ನು ವಶಕ್ಕೆ ಪಡೆಯಲಾಗಿದೆ. ಈಗ ಕೊಪ್ಪಳದ ಕುರುಬರ ಓಣಿಯಲ್ಲಿ



ಉದಯವಾಹಿನಿ ಚಿತ್ರ

> **ಅಕ್ಕಿ ಅಕ್ರಮ ಮಾರಾಟದ ದೂರು ಬಂದ ತಕ್ಷಣವೇ ಅಧಿಕಾರಿಗಳನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಲಾಗುತ್ತಿದೆ. ದಾಳಿ ಮಾಡಿದ್ದರಿಂದಲೇ ಒಂದು ತಿಂಗಳಲ್ಲಿ ದೂರುಗಳ ಸಂಖ್ಯೆ ಹೆಚ್ಚಾಗಿದೆ.**
> **-ಸಿದ್ರಾಮೇಶ್ವರ, ಹೆಚ್ಚುವರಿ ಜಿಲ್ಲಾಧಿಕಾರಿ**

ಮಹಿಳೆಯೊಬ್ಬಳು ಪಡಿತರ ಅಂಗಡಿಯ ಪಕ್ಕದಲ್ಲೇ ಅನ್ನಭಾಗ್ಯ ಯೋಜನೆಯ ಫಲಾನಭವಿಗಳಿಂದ ಅಕ್ಕಿಯನ್ನು ಖರೀದಿ ಮಾಡುತ್ತಿದ್ದ ಪ್ರಕರಣವೂ ನಡೆದಿದ್ದು, ರಾತ್ರಿ ರಾತ್ರಿ ಅಧಿಕಾರಿಗಳು ಪರಿಶೀಲನೆ ಮಾಡಿ ದೂರು ದಾಖಲಿಸಿಕೊಂಡಿದ್ದಾರೆ.

ಆಹಾರ ಮತ್ತು ನಾಗರಿಕರ ಸರಬರಾಜು ಇಲಾಖೆಯ ರಾಜ್ಯ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಗೆ 2021–2200 23, 2022–2300 26, 2023–2400 14 2 2024–25ರಲ್ಲಿ ಏಳು ಪ್ರಕರಣಗಳು ದಾಖಲಾಗಿವೆ. ಈ ವರ್ಷದಲ್ಲಿ 10 ಪ್ರಕರಣಗಳು ದಾಖಲಾಗಿದ್ದು, ಹಿಂದಿನ ಒಂದು ತಿಂಗಳ ಅವಧಿಯಲ್ಲಿ 6 ದೂರುಗಳನ್ನು ದಾಖಲಿಸಲಾಗಿದೆ. ಒಟ್ಟು 16 ದೂರುಗಳು ಆಗಿವೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

**ಅಧಿಕಾರಿಗಳ ವೈಫಲ್ಯ:** ಇಲಾಖೆಯ ಅಧಿಕಾರಿಗಳಿಗೆ ಅಕ್ಕಿ ಅಕ್ರಮ ಸಾಗಾಟ ಹಾಗೂ ಮಾರಾಟದ ಕುರುಹು ಸಿಕ್ಕರೂ ನಿರ್ಲಕ್ಷ್ಯ ವಹಿಸಿದ್ದರಿಂದ ದೂರು ದಾಖಲಾದ ಪ್ರಮಾಣಗಳು ಕಡಿಮೆಯಾಗಿವೆ ಎಂದು ಸಂಘಟನೆಗಳ ಮುಖಂಡರು ಆರೋಪಿಸುತ್ತಾರೆ. ಗಂಗಾವತಿ ಪ್ರಕರಣದ ಬಳಿಕ ಕೊಂಚ ಮಾಹಿತಿ ಸಿಕ್ಕರೂ ಪರಿಶೀಲಿಸುವ ಕೆಲಸ ನಡೆಯುತ್ತಿರುವ ಕಾರಣದಿಂದಲೇ ದೂರುಗಳು ದಾಖಲಾಗುತ್ತಿವೆ, ಪ್ರಕರಣಗಳು ಬೆಳಕಿಗೆ ಬರುತ್ತಿವೆ ಎಂದು ಅಧಿಕಾರಿಯೊಬ್ಬರು ಹೇಳಿದರು. ಇಲಾಖೆಯ ಜಿಲ್ಲಾಕೇಂದ್ರದ ಅಧಿಕಾರಿಗಳು ಮೇಲಿಂದ ಮೇಲೆ ವರ್ಗಾವಣೆಯಾಗಿದ್ದು ಕೂಡ ಅಕ್ರಮ ಎಸಗುವವರಿಗೆ ಅನುಕೂಲವಾಗಿದೆ ಎನ್ನುತ್ತವೆ ಮೂಲಗಳು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿ ಸೋಮಶೇಖರ ಅವರನ್ನು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಿಲ್ಲೆಯ ಉಪನಿರ್ದೇಶಕರನ್ನಾಗಿ ಹಿಂದೆ ನೇಮಿಸಲಾಗಿತ್ತು. ಗಂಗಾವತಿ ಪ್ರಕರಣದ ಬಳಿಕ ಅವರನ್ನು ಮಾತೃ ಇಲಾಖೆಗೆ ಕಳಿಸಿ ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಇಲಾಖೆಯ ಜವಾಬ್ದಾರಿ ಹೆಚ್ಚುವರಿಯಾಗಿ ನೀಡಲಾಗಿದೆ.

#### ಸಿಬ್ಬಂದಿ ಎದುರು ಇರಲಿಲ್ಲ; ವರದಿಯಲ್ಲಿ ಉಲ್ಲೇಖ

**ಗಂಗಾವತಿ ಅಕ್ರಮ ಅಕ್ಕಿ ಸಾಗಾಟ ಆರೋಪದ ಪ್ರಕರಣದ ಬಗ್ಗೆ ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ತನಿಖೆ ನಡೆಸಿದ್ದು ಮಾಲೀಕನಿಗೆ ಅಕ್ಕಿ ವಾಪಸ್ ಕೊಡುವಾಗ ಇಲಾಖೆಯ ಅಧಿಕಾರಿಗಳು ಯಾರೂ ಎದುರು ಇರಲಿಲ್ಲ ಎನ್ನುವ ಮಾಹಿತಿ ಗೊತ್ತಾಗಿದೆ. ಸರ್ಕಾರ ಗೋದಾಮಿನ ಅಧೀನದಲ್ಲಿ ಅಕ್ಕಿ ಇರುವಾಗಲೇ ಖಾಸಗಿ ವ್ಯಕ್ತಿ ತಮ್ಮ ಚೀಲದಲ್ಲಿ ಅಕ್ಕಿತುಂಬಿಕೊಳ್ಳುತ್ತಿದ್ದರು. ಆ ಚೀಲದ ಮೇಲೆ ವಿದೇಶದ ಹೆಸರು ಇತ್ತು ಎನ್ನುವ ಅಂಶವನ್ನೂ ಅವರು ಜಿಲ್ಲಾಧಿಕಾರಿಗೆ ಸಲ್ಲಿಸಿರುವ ವರದಿಯಲ್ಲಿದೆ. 'ಈ ಪ್ರಕರಣದಲ್ಲಿ ನೈಜ ಆರೋಪಿಗಳನ್ನು ಮರೆ ಮಾಚಲಾಗಿದೆ ಎನ್ನುವ ಅಂಶವೂ ವಿಚಾರಣೆ ವೇಳೆ ಗೊತ್ತಾಗಿದೆ. ತಪ್ಪಿತಸ್ಥ ಎಲ್ಲರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ತಿಳಿಸಲಾಗಿದೆ. ಈಗ ಪೊಲೀಸರ ವಿಚಾರಣೆ ಬಾಕಿ ಉಳಿದಿದೆ' ಎಂದು ಸಿದ್ರಾಮೇಶ್ವರ ತಿಳಿಸಿದರು.**

#### ಒಂದೂ ಪ್ರಕರಣದಲ್ಲಿ ಸಿಕ್ಕಿಲ್ಲ

**ಗೆಲುವು ಅಕ್ಕಿ ಅಕ್ರಮ ಮಾರಾಟದ ಬಗ್ಗೆ ಇಲಾಖೆಯ ಅಧಿಕಾರಿಗಳು ದೂರುಗಳನ್ನು ದಾಖಲಿಸಿಕೊಂಡು ಪೊಲೀಸರು ಆರೋಪಿಗಳನ್ನು ಬಂಧಿಸುತ್ತಿದ್ದರೂ ಹಿಂದಿನ ಐದು ವರ್ಷಗಳಲ್ಲಿ ನ್ಯಾಯಾಲಯದಲ್ಲಿ ತೀರ್ಮಾನವಾದ ಪ್ರಕರಣಗಳಲ್ಲಿ ಒಂದೂ ಸಾಬೀತಾಗಿಲ್ಲ. 2021ರಿಂದ 2024–25ರ ತನಕದ ಅವಧಿಯಲ್ಲಿ ಒಟ್ಟು 70 ದೂರುಗಳು ಸಲ್ಲಿಕೆಯಾಗಿದ್ದು 53 ಎಫ್ಐಆರ್ ದಾಖಲಾಗಿವೆ. ಇದರಲ್ಲಿ ಮುಕ್ತಾಯಗೊಂಡಿರುವ 6 ಪ್ರಕರಣಗಳಲ್ಲಿ ಸರ್ಕಾರಕ್ಕೆ ಒಂದೂ ಗೆಲುವು ಸಿಕ್ಕಿಲ್ಲ.**

### ಕಳಪೆ ಗುಣಮಟ್ಟದ ಹಮ್ಸ್‌ಗಳ ಅಳವಡಿಕೆ, 8 ಲಕ್ಷ ಪುರಸಭೆ ಅನುದಾನ ವ್ಯರ್ಥ

## ಹೋರಾಟಗಾರರಿಂದ ಹಮ್ಸ್‌ಗಳ ಪುನರ್ ನಿರ್ಮಾಣಕ್ಕೆ ಆಗ್ರಹ

• ಉದಯವಾಹಿನಿ, ಕಾರಟಗಿ

ಕಾರಟಗಿ ಪಟ್ಟಣದ ಮುಖ್ಯ ರಸ್ತೆಗಳ ಮೇಲೆ ಸಾರ್ವಜನಿಕರ ಹಿತಾಸಕ್ತಿಗಾಗಿ ಅಳವಡಿಸಿದ ಹಮ್ಸ್ ಗಳು ಹಾಕಿದ 20 ದಿನಗಳಲ್ಲಿಯೇ ಕಿತ್ತು ಹೋಗಿವೆ. ಇದು ಹಮ್ಸ್ ಅಳವಡಿಸಿದ ಪುರಸಭೆ ಅಧಿಕಾರಿಗಳ ಅಧ್ಯಕ್ಷರ ಕಾರ್ಯಪಾಲನೆಯನ್ನು ಸಾರ್ವಜನಿಕರು ಪ್ರಶ್ನಿಸುವಂತಾಗಿದೆ.

ಪುರಸಭೆಯ ಅನುದಾನದಲ್ಲಿ ಸುಮಾರು 08 ಲಕ್ಷ ವೆಚ್ಚದಲ್ಲಿ ಅಧಿಕಾರಿಗಳು ಹಮ್ಸ್‌ಗಳ ಅಳವಡಿಕೆ ಕಾರ್ಯ ಕೈಗೊಂಡಿದ್ದರು, ಆದರೆ ಹಮ್ಸ್‌ಗಳ ಅಳವಡಿಕೆಯಲ್ಲಿ ಅಧಿಕಾರಿಗಳು ಗುಣಮಟ್ಟ ಕಾಯ್ದುಕೊಂಡಿಲ್ಲ ಎಂದು ಸಾಮಾಜಿಕ ಹೋರಾಟಗಾರ ಸುಂದರರಾಜ್ ಆರೋಪಿಸಿದ್ದಾರೆ.

ಈ ಕುರಿತು ಹಮ್ಸ್‌ಗಳ ಖುದ್ದು ಪರಿಶೀಲಿಸಿ ಮಾತನಾಡಿದ ಅವರು ಎರಡು ವರ್ಷಗಳ ಹಿಂದೆ ಹಳೆಯ ಬಸ್ ನಿಲ್ದಾಣದ ಹತ್ತಿರದಲ್ಲಿ ಬಾಲಕ, ಬಾಲಕಿಯರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದಲ್ಲಿ ಸ್ಪೀಡ್ ಬ್ರೇಕರ್ ಅಳವಡಿಕೆ ಮಾಡಲಾಗಿದೆ 2 ವರ್ಷಗಳಾದರೂ ಹಮ್ಸ್‌ಗಳು ಶಿಥಿಲಗೊಂಡಿಲ್ಲ ಗುಣಮಟ್ಟದ ಹಮ್ಸ್ ಗಳ ಅಳವಡಿಕೆ ಮಾಡಲಾಗಿದೆ.

ಆದರೆ ಈಗಷ್ಟೇ 20 ದಿನಗಳ ಹಿಂದೆ ಪುರಸಭೆ ಅಧಿಕಾರಿಗಳು ಅಳವಡಿಸಿದ ಹಮ್ಸ್‌ಗಳು ಶಿಥಿಲಗೊಂಡಿವೆ ಸೀಳಿವೆ ಹಾಗೂ ಕಿತ್ತುಹೋಗಿವೆ ಇದು ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಹಿಡಿದ ಕನ್ನಡಿಯಾಗಿದೆ, ಕಳಪೆ ಗುಣಮಟ್ಟದ ಹಮ್ಸ್‌ಗಳು ಅಳವಡಿಯಾಗಿದೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಇದರಿಂದಾಗಿ ಹಮ್ಸ್ ಗಳ ಅಳವಡಿಕೆ ಮಾಡಿದರೂ ಪುರಸಭೆಯ 08 ಲಕ್ಷ ರೂಪಾಯಿಗಳು ವ್ಯರ್ಥವಾಗಿವೆ. ಪುರಸಭೆ ಅಧಿಕಾರಿಗಳು ಹಮ್ಸ್‌ಗಳ ಅಳವಡಿಕೆಗೆ ಆಸಕ್ತಿ ತೋರಿದ್ದಾರೆ.

ಆದರೆ ಅವುಗಳ ಗುಣಮಟ್ಟದ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದು ಯಾಕೆ ಎನ್ನುವಂತಾಗಿದೆ. ಕೂಡಲೇ ರಸ್ತೆಯ ಮೇಲೆ ಅಳವಡಿಸಿರುವ ಹಮ್ಸ್ ಗಳ ತೆರವುಗೊಳಿಸಿ ಪುನಃ ಗುಣಮಟ್ಟದ ಹಮ್ಸ್ ಗಳನ್ನು ಅಳವಡಿಸಿ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಬೇಕಾಗಿದೆ ಎಂದು ಒತ್ತಾಯಿಸಿದರು.





ಉದಯವಾಹಿನಿ ಚಿತ್ರ

> **ಹಮ್ಸ್ ಗಳ ಅಳವಡಿಕೆಯಲ್ಲಿ ನಿರ್ಲಕ್ಷ್ಯ ವಹಿಸಿದ ಪುರಸಭೆ ಅಧಿಕಾರಿಗಳ ಹಾಗೂ ಅಧ್ಯಕರ ಕಾರ್ಯ ವೈಖರಿ ಬಗ್ಗೆ ಬೇಸರ ವ್ಯಕ್ತ ಪಡಿಸಿದರು. ಹಮ್ಸ್ ಗಳ ಅಳವಡಿ ಕೆಯಲ್ಲಿ ಜವಾಬ್ದಾರಿ ಮೆರೆಯಬೇಕಾದ ಇವರು ಬೇಜವಾಬ್ದಾರಿ ತೋರಿರುವುದರಿಂದ ಗುಣಮಟ್ಟದ ಹಮ್ಸ್ ಗಳ ಬದಲು ಕಳಪೆ ಹಮ್ಸ್ ಗಳ ಅಳವಡಿಸಿ ಸಾರ್ವಜನಿಕ ತೆರಿಗೆ ಹಣ ದುರುಪಯೋಗ ಪಡಿಸಲಾಗಿದೆ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು. -ಸಂಗನಗೌಡ, ಪುರಸಭೆಯ ಸದಸ್ಯ**

## ಕೊಪ್ಪಳದಲ್ಲಿ ಎಂಎಲ್‌ಎ, ಎಂಪಿ ಕೆಲಸ ಜೀರೋ

• ಉದಯವಾಹಿನಿ, ಕೊಪ್ಪಳ

ಈ 8 ವರ್ಷದಲ್ಲಿ ಏನಾಗಿದೆ ಅಂದ್ರೆ, ಆಗ ಮೊದಲ ಬಾರಿ ಶಾಸಕರಾಗಿದ್ದ ರಾಘವೇಂದ್ರ ಹಿಟ್ನಾಳ ಈಗ ಮೂರನೇ ಬಾರಿಯೂ ಶಾಸಕರು. ಆಗ ಜಿಲ್ಲಾ ಪಂಚಾಯತ ಅಧ್ಯಕ್ಷರಾಗಿದ್ದ ರಾಜಶೇಖರ ಹಿಟ್ನಾಳ ಈಗ ಸಂಸದರು. ಸಮಸ್ಯೆ ಮಾತ್ರ ಸಮಸ್ಯೆ ಆಗಿಯೆ ಉಳಿದಿದೆ. ಅಂದ್ರೆ, ಇಲ್ಲಿ ಸಂಚಾರಕ್ಕೆ ಅವಕಾಶ ಇಲ್ಲದೆ ವಿದ್ಯಾರ್ಥಿಗಳು ಮಹಿಳೆಯರು ವೃದ್ದರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ.

ಮೂವತ್ತು ವರ್ಷಗಳ ಹಿಂದೆ ಊರ ಹೊರಗಿದ್ದ ರೈಲು ಹಳಿ ಊರು ಬೆಳೆದಂತೆ ನಡು ಊರಲ್ಲಿ ಆಗಿದೆ. ಹಳಿ ಡಬ್ಲಿಂಗ್ ಆಗಿದೆ. ಗೇಟ್‌ಗಳ ಜಾಗದಲ್ಲಿ ಕೆಳ ಮತ್ತು ಮೇಲ್ಸೇತುವೆ ಆಗಿವೆ. ಆದರೆ ಸ್ವಾಮಿ ವಿವೇಕಾನಂದ ಶಾಲೆ ಹತ್ತಿರದ ಗೇಟ್ ಕ್ಯಾನ್ಸಲ್ ಆದ ಮೇಲೆ ಅಲ್ಲಿ ಕೆಳ ಅಥವಾ ಮೇಲ್ಸೇತುವೆ ಆಗಲಿಲ್ಲ.

ರೈಲು ಹಳಿಯ ಉತ್ತರ ಭಾಗ ಮತ್ತು ಭಾಗ್ಯನಗರ ಬೆಳೆದಂತೆ ಇಲ್ಲಿ ಸಂಚಾರ ದುಸ್ತರ ಆದಾಗ ಸೇತುವೆಗಾಗಿ ಜನ ಹೋರಾಟ ಆರಂಭಿಸಿ ಈಗ ಕೇವಲ 8 ವರ್ಷ ಕಳೆಯಿತು , ವಿಚಿತ್ರ ಅಂದ್ರೆ, ಗಣೇಶ ನಗರಕ್ಕೆ ಹೋಗುವಲ್ಲಿ ಅಂಡರ್ ಪಾಸ್ ಆಗಿ 20 ತಿಂಗಳು ಆಗಿದೆ. ರಾಜಶೇಖರ ಹಿಟ್ನಾಳ ಸಂಸದರಾಗಿ 15 ತಿಂಗಳು ಆಗಿದೆ. ಅಲ್ಲಿ ಸಂಚಾರ ಸೌಲಭ್ಯ ಮಾತ್ರ ಜೀರೋ ಇದೆ.

ಇದರಿಂದ ಅನೇಕ ಬಾರಿ ಹೋರಾಟ ಸಮಿತಿ ಒತ್ತಾಯಿಸಿದರೂ ಜನಪ್ರತಿನಿಧಿಗಳು ಕ್ಯಾರೆ ಅಂದಿಲ್ಲ. ಈ ಸಲ ಪುರುಷರ ಜೊತೆ ಮಹಿಳೆಯರೂ ರೊಚ್ಚಿಗೆದ್ದರು. ಹಾಗಾಗಿ ಪಟ್ಟಣದ ಸ್ವಾಮಿ ವಿವೇಕಾನಂದ ಶಾಲೆಯಿಂದ 3 ಕಿ.ಮೀ ನಡೆದು ಹೋದ ನೂರಾರು ಜನ ಕ್ಷೇತ್ರದ ಶಾಸಕರ ಮನೆ ಮುಂದೆ ಸೇರಿ ಶಾಸಕರು ಸಂಸದರಿಗೆ ಧಿಕ್ಕಾರ ಕೂಗಿದರು. ಅಂಡರ್ ಪಾಸ್ ಲಿಂಕ್ ರಸ್ತೆ ಮಾಡಿಸಲು ಒತ್ತಾಯಿಸಿದ ಜನ ಎಷ್ಟು ದಿನ, ಎಷ್ಟು ತಿಂಗಳಲ್ಲಿ ಈ ಕೆಲಸ ಮಾಡ್ತೀರಿ ಹೇಳಿ. ಆಗದಿದ್ದರೆ ನಮ್ಮ ಜೊತೆ ಹೋರಾಟಕ್ಕೆ ಬನ್ನಿ ಎಂದು ಸಂಸದರಿಗೆ ಕ್ಲಿಯರ್ ಆಗಿ ಹೇಳಿದರು. ಸಂಸದರು– ಹೀಗೆ ವಿಳಂಬವಾಗಲು ಎಲ್ಲಾ ತಪ್ಪು ರೈಲ್ವೆ ಇಲಾಖೆ ಮೇಲೆ ಹೊರಿಸಿ, ಅಂಡರ್ ಪಾಸ್‌ಗೆ ರಸ್ತೆ ಲಿಂಕ್ ಮಾಡಲು ಭೂಸ್ವಾಧೀನಕ್ಕಾಗಿ ಹೊಸದಾಗಿ ಯೋಜನೆ ಮಾಡಲಾಗುತ್ತಿದೆ ಎಂದು ಸಮಾಧಾನ ಹೇಳಿದರು.

ಸೌಲಭ್ಯಕ್ಕಾಗಿ ಜನ ಪದೇ ಪದೇ ಬೀದಿಗೆ ಇಳಿಯುವಂತೆ ಮಾಡುವುದು ಜನಪ್ರತಿನಿಧಿಯ ಲಕ್ಷಣ ಅಲ್ಲ. ಆದರೆ ಇದು ಅಣ್ಣ ತಮ್ಮ ಇಬ್ಬರಿಗೂ ಅರ್ಥ ಆಗಲ್ಲ ಅದೆ ದೊಡ್ಡ ಸಮಸ್ಯೆ.

## ಜಿಲ್ಲೆಯಲ್ಲಿ ರಿನ್ಯೂ ಪವರ್ ಕಂಪನಿಯಿಂದ ರೈತರ ಮೇಲೆ ದಬ್ಬಾಳಿಕೆ, ಜಿಲ್ಲಾಡಳಿತ ಕಣ್ಮುಚ್ಚಿ ಕುಳಿತಿದೆ

• ಉದಯವಾಹಿನಿ, ಕೊಪ್ಪಳ

ಜಿಲ್ಲೆಯಲ್ಲಿ ರಿನ್ಯೂ ಪವರ್ ಕಂಪನಿ ಜಿಲ್ಲಾಡಳಿತದ ನೆರವಿನಿಂದ ರೈತರನ್ನು ಶೋಷಣೆ ಮಾಡುತ್ತಿದೆ. ಒಂದೆಡೆ ಮನಬಂದಂತೆ ರೈತರ ಹೊಲಗಳಲ್ಲಿ ಮರಗಳನ್ನು ಕತ್ತರಿಸುತ್ತಿದ್ದರೆ, ಇನ್ನೊಂದೆಡೆ ಯಲಬುರ್ಗಾ ತಾಲ್ಲೂಕ ಮತ್ತು ಕುಷ್ಟಗಿ ತಾಲ್ಲೂಕಿನ 19 ಗ್ರಾಮಗಳಲ್ಲಿ ತಂತಿಗಳನ್ನು ಹಾಕಲಾಗಿದೆ. ರಿನ್ಯೂ ಪವರ್ ಮತ್ತು ಅದರ ಉಪ ಕಂಪನಿಗಳಿಂದ ಕೆಲಸ ಮಾಡಿಸಲಾಗುತ್ತಿದೆ. ಸರ್ಕಾರದ ಕಡದಲ್ಲಿ ಇರದ ನಕಲಿ ದಾಖಲೆಗಳನ್ನು ಸೃಷ್ಟಿಸಿ ರೈತರನ್ನು ವಂಚಿ–ಸಲಾಗುತ್ತಿದೆ' ಎಂದು ಆಪಾದಿಸಿದರು.

ಸರ್ಕಾರದ ಕಡತದಲ್ಲಿರದ ನಕಲಿ ದಾಖಲೆ ಸೃಷ್ಟಿಸಿದ್ದಾರೆ. ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅವರಿಗೆ ಬೆಂಗಾವಲಾಗಿ ನಿಂತಿದೆ. ನನ್ನ ಕಣ್ಣೆದುರೇ ರೈತರಿಗೆ ವಂಚನೆ ಮಾಡುತ್ತಿದ್ದರೂ ಜಿಲ್ಲಾಡಳಿತ, ಪೊಲೀಸ್ ಇಲಾಖೆ ತಡೆಯುತ್ತಿಲ್ಲ. ನನ್ನ ಜಮೀನಿನಲ್ಲಿ 35 ಮರಗಳನ್ನು ಯಾವುದೇ ಅನುಮತಿ ಇಲ್ಲದೇ ಕಡಿದು ಹಾಕಿದ್ದಾರೆ. ಇಂತಹ ಕಂಪನಿಯ ಪ್ರತಿನಿಧಿಗಳು ಎಂದು ಹೇಳಿಕೊಳ್ಳುವವರ ಬಳಿ ಕಂಪನಿಯ ಗುರುತಿನ ಚೀಟಿಯೇ ಇಲ್ಲ. ಪರಿಹಾರ ದರ ನಿಗದಿಪಡಿಸಿದ ದಾಖಲೆಗಳು ಕೂಡ ಇಲ್ಲ. ಪೊಲೀಸರು ಕೂಡ ಪ್ರಕರಣ ದಾಖಲಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ ಎಂದು ರೈತರ ಮೇಲೆ ದೌರ್ಜನ್ಯ ಎಸಗಿ ಕೆಲಸ ಮಾಡುತ್ತಿದ್ದಾರೆ ಎಂದರು. ನಾನು ಪರಿಶಿಷ್ಟ ಪಂಗಡಕ್ಕೆ ಸೇರಿದ್ದೇನೆ. ಈ ಸಂಬಂಧ ಹಲವು ದೂರು ಸಲ್ಲಿಸಿದರೂ, ಪ್ರಯೋಜನವಾಗಿಲ್ಲ. ಪೊಲೀಸರು ಪ್ರಕರಣ ದಾಖಲಸಿಕೊಳ್ಳಲು ಸಿದ್ಧರಿಲ್ಲ. ಈ ಬಗ್ಗೆ ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವೆ. ಎನ್ ಸಿಎಸ್‌ಟಿಗೆ ದೂರು ಸಲ್ಲಿಸಿರುವೆ. ವಿಚಾರಣೆ ನಡೆಯುತ್ತಿದೆ ಎಂದು ತಿಳಿಸಿದರು. ಸಂಗಮ, ಪಾಂಡುರಂಗ, ಭರತ್ ಮುಗದೂರು, ಟಿ.ರತ್ನಾಕರ, ಶರಣಪ್ಪ ಗುಂಗಾಡಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.





ಉದಯವಾಹಿನಿ ಚಿತ್ರ

## ರಸಗೊಬ್ಬರ ಕೊರತೆಯಾಗದಂತೆ ಕ್ರಮ: ಶಾಸಕ ಶಾಂತನಗೌಡ

• ಉದಯವಾಹಿನಿ ಹೊನ್ನಾಳಿ

ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವಾಣಿಜ್ಯ ಮಳಿಗೆಗಳಿಂದ ಬರುವ ಬಾಡಿಗೆ, ರಸಗೊಬ್ಬರ ಮತ್ತು ಕೀಟನಾಶಕಗಳ ಮಾರಾಟದಿಂದ ನಮ್ಮ ಸಂಘವು ಲಾಭದಲ್ಲಿ ಮುನ್ನಡೆಯುತ್ತಿದೆ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ತಾಲ್ಲೂಕಿನ ಗೊಲ್ಲರಹಳ್ಳಿ ತರಳಬಾಳು ಸಮುದಾಯ ಭವನದ ಆವರಣದಲ್ಲಿ ಹಮ್ಮಿಕೊಂಡಿದ್ದ ಸಂಘದ ವಾರ್ಷಿಕ ಸಭೆ ಹಾಗೂ ವಜ್ರಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಸ್ತುತ ವರ್ಷದಲ್ಲಿ ಅವಧಿಗೆ ಮುನ್ನ ಮಳೆ ಬಂದಿದ್ದರಿಂದ ರಸಗೊಬ್ಬರದ ಕೊರತೆ ಉಂಟಾಯಿತು. ಮುಂದಿನ ವರ್ಷ ಈ ರೀತಿ ಅಭಾವ ಆಗದಂತೆ ನೋಡಿಕೊಳ್ಳಲಾಗುವುದು. ರಸಗೊಬ್ಬರ ಹಾಗೂ ಕೀಟನಾಶಕ ಮತ್ತು ಬಿತ್ತನೆ ಬೀಜಗಳನ್ನು ಫೆಡರೇಶನ್ ವತಿಯಿಂದ ದಾಸ್ತಾನು ಮಾಡಿ ರೈತರಿಗೆ ವಿತರಿಸಲಾಗುವುದು ಎಂದು ಭರವಸೆ ನೀಡಿದರು. ನೂತನ ವಾಣಿಜ್ಯ ಸಂಕೀರ್ಣ ನಿರ್ಮಾಣ ವಿಳಂಬ ಕುರಿತು ಷೇರುದಾರರ ಪ್ರಶ್ನೆಗೆ ಉತ್ತರಿಸಿದ ಶಾಸಕರು, ನಮ್ಮ ಸಂಘದ ಜಾಗವನ್ನು ರಸ್ತೆ ವಿಸ್ತರಣೆಗೆ ಬಳಸಿಕೊಂಡಿರುವುದರಿಂದ ಅದಕ್ಕೆ ಭೂಸ್ವಾಧೀನ ಪರಿಹಾರ ಎಂದು 33 ಲಕ್ಷ ಬಂದಿದೆ. ನಮ್ಮ ಸಂಘದ ಲಾಭಾಂಶ 7 ಲಕ್ಷ ಸೇರಿ ಒಟ್ಟು 40 ಲಕ್ಷ ಲಭ್ಯವಿದೆ. 1 ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಯೋಜನೆ ತಯಾರಿಸಲಾಗಿದ್ದು, ತಾಂತ್ರಿಕ ದೋಷದ ಕಾರಣ ಕಟ್ಟಡ ನಿರ್ಮಾಣ ವಿಳಂಬವಾಗುತ್ತಿದರು.

ಶೀಘ್ರದಲ್ಲಿಯೇ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಗುವುದು. ಇದೀಗ ತಾಲ್ಲೂಕಿನಲ್ಲಿ ಹೊಸದಾಗಿ ಟಿಎಪಿಸಿಎಂಎಸ್ ಸ್ಥಾಪನೆಯಾಗಿದ್ದು, ನ್ಯಾಮತಿ ತಾಲ್ಲೂಕಿನ ಮತದಾರರ ಪಟ್ಟಿಯನ್ನು ಹೊನ್ನಾಳಿ ತಾಲ್ಲೂಕಿನಿಂದ ಕೈಬಿಡಲಾಗುವುದು' ಎಂದರು. ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಒಂದು ಸಂಸ್ಥೆ 75 ವರ್ಷ ಕಳೆದಿದೆ ಎಂದರೆ ಆ ಸಂಘದ ಪಾರದರ್ಶಕ ಆಡಳಿತ, ನಿಷ್ಠೆ, ಪ್ರಾಮಾಣಿಕತೆ ಕಾರಣ. ಈ ಸಂಘವು ಶತಮಾನವನ್ನು ಪೂರೈಸಲಿ' ಎಂದು ಶುಭ ಹಾರೈಸಿದರು.

ಸಂಘದ ಕಾರ್ಯದರ್ಶಿ ಮುರುಗೇಶ್, ಆಡಳಿತ ಮಂಡಳಿಯ ವರದಿ ಓದಿದರು. 2023–24ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸಿ ಷೇರುದಾರರಿಂದ ಒಪ್ಪಿಗೆ ಪಡೆದುಕೊಂಡರು. ಸಂಘದ ಮಾಜಿ ಅಧ್ಯಕ್ಷರು, ಕಾರ್ಯದರ್ಶಿಗಳನ್ನು ಸನ್ಮಾನಿಸಲಾಯಿತು.



ಉದಯವಾಹಿನಿ ಚಿತ್ರ

> **ನಾನು ವಜ್ರಮಹೋತ್ಸವ ಸಮಾರಂಭಕ್ಕೆಂದು ಬಂದು ವಾರ್ಷಿಕ ಮಹಾಸಭೆಯಲ್ಲಿ ಕುಳಿತುಕೊಳ್ಳುವಂತಾಗಿದೆ. ಇದರಿಂದ ಇಲ್ಲಿನ ರೈತರು ಪ್ರಶ್ನೆ ಮಾಡುವ ಗುಣ ಬೆಳೆಸಿಕೊಂಡಿರುವುದು ತಿಳಿಯಿತು. ಹೀಗಾಗಿ ಈ ಭಾಗದ ಸಂಘಗಳು ಆರೋಗ್ಯಕರವಾಗಿ ಬೆಳೆಯುತ್ತಿವೆ. ನಮ್ಮ ಭಾಗದ ರೈತರು, ಷೇರುದಾರರು ಪ್ರಶ್ನಿಸುವ ಗುಣ ವಿರಳ. -ಲತಾ , ಹರಪನಹಳ್ಳಿ ಶಾಸಕಿ**

# ಅಪೌಷ್ಟಿಕ ಮಕ್ಕಳು ತ್ವರಿತ ಪತ್ತೆ, ಚಿಕಿತ್ಸೆ ಮೂಲಕ ಅವರ ಆಯುಷ್ಯ ಹೆಚ್ಚಿಸುತ್ತದೆ

### ಈ ಆರೋಗ್ಯ ತಪಾಸಣೆ ಜನನದ ದೋಷ ,ರೋಗ,ಕೊರತೆ ಮತ್ತು ವಿಕಾಸನ ವಿಳಂಬಗಳನ್ನು ತ್ವರಿತವಾಗಿ ಗುರುತಿಸುತ್ತದೆ: ಟಿಹೆಚ್‌ಓ

• ಉದಯವಾಹಿನಿ, ಚಿಂಚೋಳಿ

ಮಕ್ಕಳ ಆರೋಗ್ಯವನ್ನು ಸುಧಾರಿಸಿ,ತ್ವರಿತ ಪತ್ತೆ ಮತ್ತು ಚಿಕಿತ್ಸೆ ಮೂಲಕ ಅವರ ಆಯುಷ್ಯ ಗುಣಮಟ್ಟವನ್ನು ಹೆಚ್ಚಿಸುವದು, ಮಕ್ಕಳನ್ನು ವರ್ಷಕ್ಕೆ ಎರಡು ಬಾರಿ ಅಂಗನವಾಡಿಗಳಲ್ಲಿ ಮತ್ತು ಸರ್ಕಾರಿ ಶಾಲೆಗಳಲ್ಲಿ ಆರೋಗ್ಯ ತಪಾಸಣೆ ಮಾಡಲಾಗುತ್ತೆ, ತಪಾಸಣೆಯಲ್ಲಿ ಮೊದಲು ಗುರುತಿಸಿದ ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಿ ಎಲ್ಲಾ 4ಜ ಡಿಫೆಕ್ಟ್ ಗಳ ಮಕ್ಕಳನ್ನು ಗುರುತಿಸಿ ಚಿಕಿತ್ಸೆ ನೀಡಿ ಎಂದು ಟಿಹೆಚ್‌ಓ ಡಾ.ಮಹ್ಮದ್ ಗಫಾರ್ ಹೇಳಿದರು.

**ರಾಷ್ಟ್ರೀಯ ಬಾಲ ಸ್ವಸ್ತ್ಯ ತಪಾಸಣೆ ಶಿಬಿರ**

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಸಭಾಂಗಣದಲ್ಲಿ ಹಮ್ಮಿಕೊಂಡ ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಜಿಲ್ಲಾ ಆರ್.ಸಿ.ಹೆಚ್ ಕಾರ್ಯಾಲಯ ಹಾಗೂ ರಾಷ್ಟ್ರೀಯ ಬಾಲಸ್ವಸ್ತ್ಯ ಕಾರ್ಯಾಲಯ, ಆರೋಗ್ಯಾಧಿಕಾರಿಗಳ ಕಾರ್ಯಾಲಯ, ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಇಲಾಖೆಯವರ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಬಾಲ ಸ್ವಸ್ತ್ಯ ತಪಾಸಣೆ ಶಿಬಿರ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಷ್ಟ್ರೀಯ ಬಾಲಸ್ವಸ್ತ್ಯ ಕಾರ್ಯಕ್ರಮ ಜನನದಿಂದ ಹಿಡಿದು 18ವರ್ಷ ವಯಸ್ಸಿನ ಮಕ್ಕಳನ್ನು 4ಆ ( ಜನನದ ದೋಷಗಳು,ರೋಗಗಳು, ಕೊರತೆಗಳು , ವಿಕಸನ ವಿಳಂಬಗಳು ಸೇರಿದಂತೆ ಅಂಗವಿಕಲತೆ) ಅನ್ನು ತ್ವರಿತವಾಗಿ ಗುರುತಿಸಿ ಚಿಕಿತ್ಸೆ ನೀಡಲು ಮತ್ತು ಅವರ ಸಮಗ್ರ ಆರೈಕೆಗಾಗಿ ಭಾರತದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಜಾರಿಯಾಗಿರುವ ಕಾರ್ಯಕ್ರಮವಾಗಿದೆ. ಈ ಆರೋಗ್ಯ ತಪಾಸಣೆ ಜನನದ ದೋಷ,ರೋಗ,ಕೊರತೆ ಮತ್ತು ವಿಕಾಸನ ವಿಳಂಬಗಳನ್ನು ತ್ವರಿತವಾಗಿ ಗುರುತಿಸುತ್ತದೆ.

ಉಚಿತ ಶಸ್ತ್ರಚಿಕಿತ್ಸೆ ಸೇರಿದಂತೆ ಚಿಕಿತ್ಸೆ ನೀಡುತ್ತದೆ,ಮಕ್ಕಳ ಸಾಧಾರಣ ಆರೋಗ್ಯದ ಸುಧಾರಣೆಯ ಉದ್ದೇಶವನ್ನು ಹೊಂದಿದೆ ಈ ಕಾರ್ಯಕ್ರಮ ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಆರೋಗ್ಯ ಇಲಾಖೆಯ ಜಂಟಿ ಪ್ರಕ್ರಿಯೆಯಲ್ಲಿ ಜಾರಿಯಾಗಿದ್ದು,ಮಕ್ಕಳ ಆರೋಗ್ಯ ಕಾಯ್ದುಕೊಳ್ಳಲು ಅತ್ಯಂತ ಮಹತ್ವದ ಯೋಜನೆಯಾಗಿದೆ.

ಗ್ರಾಮೀಣ ಜನರು ದೂರದ ಊರಿಗೆ ಹೋಗುವ ಮುಂಚೆ ನಮ್ಮ ನಮ್ಮ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಮುಂಚೆ ತಪಾಸಣೆಗೆ ಒಳಗಾಗಬೇಕು. ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮಕ್ಕಳ ತಜ್ಞರು ಡಾ.ರಾಜೇಶ್ ,ಡಾ.ಮಜಸಿರ್,ಡಾ.ಈಶ್ವರ್,ಡಾ.ಉಮಾಶಂಕರ, ಆರ್.ಬಿ.ಎಸ್.ಕೆ ತಂಡದ ವೈದ್ಯಾಧಿಕರಿಗಳಾದ ಡಾ.ಪ್ರಕಾಶ್,ಡಾ.ಅಭಿಷೇಕ್,ಡಾ.ಫೈಯೋಜ್ ಮತ್ತು ನೇತ್ರ ಸಹಾಯಕರಾದ ಯಂಕೋಬಾ,ಮೊಹಮದ್ ಆಸೀಫ್,ಆರ್ ಕೆ ಎಸ್ ಕೆ.ಸಮಾಲೋಚಕರಾದ ಮೊಗಲಪ್ಪ,ಶ್ರೀಶೈಲ್ ಹಿರೇಮಠ, ಶಿಕ್ಷಣ ಇಲಾಖೆಯ ಬಿಐಈಆರ್.ಟಿ ನಿಸಾರ್ ಅಹ್ಮದ್,ಭಾರತಿ,ಶಿವರಾಂ ರಾಥೋಡ್,ಮಶಕ್ ಅನೇಕರಿದ್ದರು.



ಉದಯವಾಹಿನಿ ಚಿತ್ರ

> **ಅಂಗನವಾಡಿ ಕೇಂದ್ರದ ಮಕ್ಕಳಿಗೆ ಮತ್ತು ಶಾಲೆ ಮಕ್ಕಳಿಗೆ ತಾಲ್ಲೂಕು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರ್ ಬಿ ಎಸ್ ಕೆ ತಂಡದವರು ಗುರುತಿಸಿದ ಮಕ್ಕಳಿಗೆ ತಾಲ್ಲೂಕಿನಲ್ಲಿ ಉಚಿತ ಆರೋಗ್ಯ ತಪಾಸಣೆ ಮಾಡಲು ಉದ್ದೇಶಸಲಾಗಿದ್ದು ಅದರಂತೆ. ಈಗಾಗಲೇ ಆರ್.ಬಿ.ಎಸ್.ಕೆ ಕಾರ್ಯಕ್ರಮದಲ್ಲಿ ಉಚಿತವಾಗಿ ಸೀಳು ತುಟಿ ಮತ್ತು ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗೆ ಆಪರೇಷನ್ ಮಾಡಿಸಿ ಕೊಡಲಾಗುತ್ತಿದೆ,ಆರ್‌ಬಿಎಸ್‌ಕೆ ತಂಡದವರು ಡಿಈಐಸಿ ವ್ಯವಸ್ಥಾಪಕರು ಇರುತ್ತಾರೆ, ಮಕ್ಕಳಲ್ಲಿ ಯಾವುದೇ ನ್ಯೂನ್ಯತೆಗಳು ಇದ್ದರೂ ಹೆದರಬೇಕಾಗಿಲ್ಲ ಮತ್ತು ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿ ಕೊಡುತ್ತೇವೆ.**
> **-ಕೃಷ್ಣ ಎಸ್.ವಗ್ಗೆ , ಜಿಲ್ಲಾ ಡಿ.ಈ.ಐ.ಸಿ ವ್ಯವಸ್ಥಾಪಕ**

ಉದಯ ವಾಹಿನಿ
ಪ್ರಾದೇಶಿಕ
ಶನಿವಾರ 27 ಸೆಪ್ಟೆಂಬರ್ 2025 | 05

## ಮಿನಿ ನ್ಯೂಸ್

### ವಿಕಲಚೇತನರಿಗೆ ಬೈಕ್ ವಿತರಣೆ



• ಉದಯವಾಹಿನಿ ಮುದ್ದೇಬಿಹಾಳ

ತಾಲ್ಲೂಕಿನ ವಿಕಲಚೇತನರ ಜೀವನ ಸುಗಮಗೊಳಿಸುವ ಉದ್ದೇಶದಿಂದ ಶಾಸಕ ಅನುದಾನ ಹಾಗೂ ತಾಲ್ಲೂಕ ಪಂಚಾಯತಿ ಅನುದಾನದಡಿ ಇಂದನ ಚಾಲಿತ ತ್ರಿಚಕ್ರವಾಹನಗಳನ್ನು ವಿತರಿಸಲಾಯಿತು. ತಾಲ್ಲೂಕ ಆಡಳಿತ ಸೌಧದ ಆವರಣದಲ್ಲಿ ಶಾಸಕ, ಕೆಎಸ್ಡಿ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ ಅಪ್ಪಾಜಿ ಅವರಿಂದ ಒಟ್ಟು 34 ತ್ರಿಚಕ್ರವಾಹನಗಳು ಫಲಾನುಭವಿಗಳಿಗೆ ಹಸ್ತಾಂತರಿಸಲ್ಪಟ್ಟವು. ಇದರಲ್ಲಿ ಶಾಸಕರ ಅನುದಾನದಿಂದ 29 ಹಾಗೂ ತಾಲ್ಲೂಕ ಪಂಚಾಯತಿ ಅನುದಾನದಿಂದ 5 ವಾಹನಗಳು ಸೇರಿವೆ.

ತಹಶೀಲ್ದಾರ ಕೀರ್ತಿ ಚಾಲಕ, ತಾಪಂ ಇಒ ವೆಂಕಟೇಶ ವಂದಾಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ತಾಪಂ ಎಂಆರ್‌ಡಬ್ಲ್ಯುಎಸ್ ಅಧಿಕಾರಿ ಎಸ್.ಕೆ. ಘಾಟಿ, ಪಂಚಾಯತ್ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕ ಅಧ್ಯಕ್ಷ ಶಿವಶಂಕರಗೌಡ ಹಿರೇಗೌಡರ, ಸತೀಶ ಓಸ್ವಾಲ್, ಗಣೇಶ ಅನ್ನಗೌನಿ, ಜಿಟಿಸಿ ಸಂಗನಗೌಡ ಬಿರಾದಾರ, ಯಲ್ಲಪ್ಪ ಚಲವಾದಿ, ಶ್ರೀನಿವಾಸ ವಡ್ಡರ, ನಾಗೇಶ ಭಜಂತ್ರಿ, ತಿಪ್ಪಣ್ಣ ದೊಡಮನಿ, ಲಕ್ಷ್ಮಣ ಲಮಾಣಿ, ನಾಗೇಶ ತಂಗಡಗಿ ಸೇರಿದಂತೆ ಅನೇಕ ಗಣ್ಯರು, ಪಕ್ಷದ ಮುಖಂಡರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ವಿಕಲಚೇತನರು ಸಂತೋಷ ವ್ಯಕ್ತಪಡಿಸಿ ತಮ್ಮ ದೈನಂದಿನ ಜೀವನ ನಡೆಸಲು ವಾಹನಗಳು ಸಹಕಾರಿಯಾಗಲಿವೆ ಎಂದು ಹೇಳಿದರು.

### 15 ವರ್ಷದ ಬಾಲಕಿಗೆ ಲೈಂಗಿಕ ದೌರ್ಜನ್ಯ ಯುವಕನಿಗೆ 20 ವರ್ಷ ಜೈಲು

• ಉದಯವಾಹಿನಿ ಶಿವಮೊಗ್ಗ

15 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಭದ್ರಾವತಿ ತಾಲ್ಲೂಕಿನ 19 ವರ್ಷದ ಯುವಕನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 20 ವರ್ಷ ಜೈಲು ಶಿಕ್ಷೆ 80 ಸಾವಿರ ದಂಡ ವಿಧಿಸಿ ಆದೇಶಿಸಿದೆ. 2022ರಲ್ಲಿ ಬಾಲಕಿಯ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪಿ ನಂತರ ಆಕೆಯನ್ನು ಮದುವೆಯಾಗಿದ್ದ. ಈ ಬಗ್ಗೆ ನೊಂದ ಬಾಲಕಿ ನೀಡಿದ ದೂರಿನ ಮೇರೆಗೆ ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಮತ್ತು ಪಿಸಿಎಂ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.

ಪ್ರಕರಣದ ತನಿಖಾಧಿಕಾರಿ ಇನ್ಸ್‌ಪೆಕ್ಟರ್ ಅಭಯಪ್ರಕಾಶ್ ಸೋಮನಾಳ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. ಆರೋಪಿಯಿಂದ 80 ಸಾವಿರ ದಂಡದ ಮೊತ್ತ ಪಡೆದು ನೊಂದ ಬಾಲಕಿಗೆ ನೀಡುವಂತೆ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಸಂತ್ರಸ್ತ ಬಾಲಕಿಗೆ 4 ಲಕ್ಷ ಪರಿಹಾರ ನೀಡುವಂತೆ ನ್ಯಾಯಾಧೀಶರಾದ ನಿಂಗನಗೌಡ ಪಾಟೀಲ ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

### ಬಾಲಕಿ ಮೇಲೆ ಅತ್ಯಾಚಾರ, ಕೊಲೆ: ಗಲ್ಲು ಶಿಕ್ಷೆ

• ಉದಯವಾಹಿನಿ ಬೆಳಗಾವಿ

ರಾಯಬಾಗ ತಾಲ್ಲೂಕಿನ ಗ್ರಾಮವೊಂದರಲ್ಲಿ ಎಂಟು ವರ್ಷದ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಕೊಲೆ ಮಾಡಿದ ಭರತೇಶ ರಾವಸಾಬ್ ಮಿರ್ಜೆ(28) ಎಂಬಾತನಿಗೆ ಇಲ್ಲಿನ ಜಿಲ್ಲಾ ಪೋಕ್ಸೋ ನ್ಯಾಯಾಲಯ ಗಲ್ಲು ಶಿಕ್ಷೆ ಮತ್ತು 45 ಸಾವಿರ ದಂಡ ವಿಧಿಸಿ ಶುಕ್ರವಾರ ತೀರ್ಪು ನೀಡಿದೆ. ಬಾಲಕಿಯ ಪಾಲಕರಿಗೆ 10 ಲಕ್ಷ ಪರಿಹಾರ ಘೋಷಿಸಿದೆ.

2019ರ ಅಕ್ಟೋಬರ್ 15ರಂದು ಬಾಲಕಿ ಮನೆಯಿಂದ ಚಾಕೊಲೇಟ್ ತರಲು ಅಂಗಡಿಗೆ ಹೋಗಿದ್ದಳು. ಮರಳುವಾಗ ಭರತೇಶ ತನ್ನ ಮನೆಗೆ ಕರೆದೊಯ್ದು ಅತ್ಯಾಚಾರವೆಸಗಿದ್ದ. ಅವಳು ಕಿರುಚಾಡಿದಾಗ ಕುತ್ತಿಗೆ ಹಿಸುಕಿ ಸಾಯಿಸಿದ್ದ. ಸಾಕ್ಷ್ಯ ನಾಶಪಡಿಸಲು 20 ಕೆಜಿ ತೂಕದ ಕಲ್ಲನ್ನು ಬಾಲಕಿ ದೇಹಕ್ಕೆ ಕಟ್ಟಿ, ತನ್ನ ಮನೆ ಬಳಿಯ ತೆರೆದ ಬಾವಿಗೆ ಎಸೆದಿದ್ದ. ಬಾಲಕಿ ಕಾಣೆಯಾದ ಬಗ್ಗೆ ಪಾಲಕರು ದೂರು ದಾಖಲಿಸಿದ್ದರು.


ತನಿಖೆ ನಡೆಸಿದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಜೆ.ಎಸ್.ಉಪ್ಪಾರ, ಬೆಳಗಾವಿಯಿಂದ ಶ್ವಾನದಳ ಕರೆಯಿಸಿ ಬಾಲಕಿ ಚಲನ–ವಲನ ಪತ್ತೆ ಮಾಡಿದ್ದರು. ಮನೆಯಲ್ಲಿನ ಆಕೆ ಬಟ್ಟೆಗಳ ವಾಸನೆ ಗ್ರಹಿಸಿದ ಶ್ವಾನಗಳು, ತೆರೆದಬಾವಿ ಬಳಿ ಬಂದವು. ಕೊಳವೆಬಾವಿ ದುರಸ್ತಿಗೆ ಬಳಸುತ್ತಿದ್ದ ಕ್ಯಾಮೆರಾ ಬಾವಿಗೆ ಇಳಿಸಿದಾಗ ಬಾಲಕಿಯ ಬೆರಳು ಕಾಣಿಸಿದ್ದವು. ನೀರು ಖಾಲಿ ಮಾಡಿ, ಬಾಲಕಿ ದೇಹ ತೆಗೆಯಲಾಗಿತ್ತು. ಬಾಲಕಿ ಸೊಂಟಕ್ಕೆ ಸೀರೆಯಿಂದ ಕಲ್ಲು ಕಟ್ಟಿ ಬಾವಿಗೆ ಎಸೆದಿದ್ದು ಗೊತ್ತಾಗಿತ್ತು.

ಡಾ.ಕೆ.ಎಸ್.ಗುರುದತ್ ಮರಣೋತ್ತರ ಪರೀಕ್ಷೆ ವರದಿ ಸಲ್ಲಿಸಿದರು. ಮುಂದಿನ ತನಿಖಾಧಿಕಾರಿಗಳಾದ ಎನ್.ಮಹೇಶ ಮತ್ತು ಕೆ.ಎಸ್.ಹಟ್ಟಿ ಅವರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಸಿ.ಎಂ.ಪುಷ್ಪಲತಾ ತೀರ್ಪು ಪ್ರಕಟಿಸಿದ್ದಾರೆ.

### ಅನ್ಯ ಜಾತಿ ಸೇರ್ಪಡೆಗೆ ವಿರೋಧ

• ಉದಯವಾಹಿನಿ ಲಕ್ಷ್ಮೇಶ್ವರ

ಪರಿಶಿಷ್ಟ ಪಂಗಡಕ್ಕೆ ಅನ್ಯ ಜಾತಿ ಸೇರಿಸಬಾರದು ಎಂದು ಆಗ್ರಹಿಸಿ ತಾಲ್ಲೂಕು ಮಹರ್ಷಿ ವಾಲ್ಮೀಕಿ ನಾಯಕ ವಿವಿದೋದ್ದೇಶಗಳ ಸಂಘದ ಅಧ್ಯಕ್ಷ ಭೀಮಣ್ಣ ಯಂಗಾಡಿ ಅವರ ನೇತೃತ್ವದಲ್ಲಿ ತಹಶೀಲ್ದಾರ್ ಎಂ. ಧನಂಜಯ ಅವರಿಗೆ ಮನವಿ ಸಲ್ಲಿಸಲಾಯಿತು. ಸಂಘದ ಮುಖಂಡ ಪ್ರಕಾಶ ಬೆಂತೂರ ಮಾತನಾಡಿ, ಈಗಾಗಲೇ ಪರಿಶಿಷ್ಟ ಪಂಗಡದಲ್ಲಿ ಸರ್ಕಾರ ಅನೇಕ ಜಾತಿಗಳನ್ನು ಸೇರಿಸಿ ಎಸ್‌ಟಿ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ. ಕಾರಣ ಅನ್ಯ ಜಾತಿಯವರು ಪಡೆದುಕೊಂಡಿರುವ ನಕಲಿ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವವನ್ನು ರದ್ದುಪಡಿಸಬೇಕು. ಅನ್ಯ ಜಾತಿಯನ್ನು ಎಸ್‌ಟಿ ಪಟ್ಟಿಗೆ ಸೇರಿಸಬಾರದು. ಒಂದು ವೇಳೆ ಸರ್ಕಾರ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳದಿದ್ದರೆ ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದರು.



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ದೇಹದ ನೋವು ಮತ್ತು ಒತ್ತಡ ಸಂಬಂಧಿತ ಸಮಸ್ಯೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

**ವೃಷಭ** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಆನಂದಿಸಬಹುದು. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**ಮಿಥುನ** ನಿಮ್ಮ ಕೆಲವು ಕೆಲಸಗಳಿಗೆ ಸಂಗಾತಿಯ ಹಾಳಾದ ಆರೋಗ್ಯದಿಂದಾಗಿ ಅಡ್ಡಿಯಾಗಬಹುದು. ಆರೋಗ್ಯದ ದೃಷ್ಟಿಯಿಂದ, ಓದುವುದು ನಿಮಗೆ ಪ್ರಯೋಜನಕಾರಿಯಾಗಿರುತ್ತದೆ.

**ಕರ್ಕಾಟಕ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಲೋನ್ ತೆಗೆದುಕೊಂಡಿರುವ ಜನರಿಗೆ ಲೋನ್‌ನ ಮೊತ್ತವನ್ನು ಮರುಪಾವತಿಸುವಲ್ಲಿ ತೊಂದರೆಗಳು ಉಂಟಾಗಬಹುದು.

**ಸಿಂಹ** ವೈವಾಹಿಕ ಜೀವನವನ್ನು ಉತ್ತಮವಾಗಿಸುವ ನಿಮ್ಮ ಪ್ರಯತ್ನಗಳು ನಿರೀಕ್ಷೆಗೂ ಮೀರಿ ಫಲ ನೀಡುತ್ತವೆ. ಟಿವಿಯಲ್ಲಿ ಚಲನಚಿತ್ರ ನೋಡುವುದು ಮತ್ತು ತಮ್ಮ ಹತ್ತಿರವಿರುವ ಜನರೊಂದಿಗೆ ಗಾಸಿಪ್ ಮಾಡುವುದು.

**ಕನ್ಯಾ** ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ, ನೀವು ಆ ಹೆಚ್ಚುವರಿ ಚೈತನ್ಯವನ್ನು ಹೊಂದಿರುತ್ತೀರಿ ಹಾಗೂ ಇದು ನಿಮ್ಮನ್ನು ನಿಮ್ಮ ಗುಂಪಿಗಾಗಿ ಸಮಾರಂಭವನ್ನು ಸಂಯೋಜಿಸುವಂತೆ ಮಾಡುತ್ತದೆ.

**ತುಲಾ** ಇಂದು ನೀವು ಪ್ರಮುಖ ನಿರ್ಧಾರ ಕೈಗೊಳ್ಳಬೇಕು, ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ.

**ವೃಶ್ಚಿಕ** ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು.

**ಧನಸ್ಸು** ಅದೃಷ್ಟವನ್ನು ಅವಲಂಬಿಸಬೇಡಿ, ನಿಮ್ಮ ಆರೋಗ್ಯ ಸುಧಾರಿಸಲು ಪ್ರಯತ್ನಿಸಿ ಏಕೆಂದರೆ ಅದೃಷ್ಟವು ಒಂದು ಸೋಮಾರಿ ದೇವತೆಯಾಗಿದೆ. ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡಬೇಡಿ.

**ಮಕರ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ.

**ಕುಂಭ** ಹಳೆಯ ಸ್ನೇಹಿತರ ಜೊತೆಗಿನ ಒಂದು ಪುನರ್ಮಿಲನ ನಿಮ್ಮನ್ನು ಚೇತೋಹಾರಿಯಾಗಿರಿಸುತ್ತದೆ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ.

**ಮೀನ** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

### • ಸುಳ್ಳು ಜಾತಿ ಪ್ರಮಾಣ ಪತ್ರದಿಂದ ಸಾಮಾಜಿಕ ಶೈಕ್ಷಣಿಕ ಆರ್ಥಿಕ ಶೋಷಣೆಯ ಖಂಡನೆ

# ವಾಲ್ಮೀಕಿ ಮಹಾ ಸಭಾ ವತಿಯಿಂದ ಬೃಹತ್ ಪ್ರತಿಭಟನೆ

• ಉದಯವಾಹಿನಿ ಕಾರಟಗಿ

ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ನಾಯಕ ತಳವಾರ ಹೆಸರಿನಲ್ಲಿ ಪ್ರವರ್ಗ-1 ರಲ್ಲಿರುವ ಬೇರೆ ಸಮುದಾಯದವರು ಅಕ್ರಮವಾಗಿ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣ ಪತ್ರಗಳನ್ನು ಪಡೆದು ವಂಚಿಸುತ್ತಿರುವ ಅನ್ಯ ಸಮುದಾಯದವರನ್ನು ಎಸ್.ಟಿ ಪಟ್ಟಿಗೆ ಸೇರಿಸುತ್ತಿರುವುದನ್ನು ವಿರೋಧಿಸಿ ಅಖಿಲ ಕರ್ನಾಟಕ ವಾಲ್ಮೀಕಿ-ನಾಯಕ ಮಹಾ ಸಭಾ ಕಾರಟಗಿ ತಾಲ್ಲೂಕು ಘಟಕ ವತಿಯಿಂದ ಬೃಹತ್ ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 7 ದಶಕಗಳು ಕಳೆಯುತ್ತಾ ಬಂದರೂ ಪರಿಶಿಷ್ಟ ಪಂಗಡದವರ ಮೇಲೆ ನಿರಂತರ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳು ಮತ್ತು ಮೀಸಲಾತಿಯ ವಂಚನೆಯ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಪ್ರಧಾನ ಕಾರ್ಯದರ್ಶಿ ಸೋಮನಾಥ್ ಹೆಬ್ಬಡದ ಕಳವಳ ವ್ಯಕ್ತ ಪಡಿಸಿದರು.

ಈ ಕುರಿತು ಅವರು ಮಾತನಾಡಿ ನಾಯಕ ತಳವಾರ ಹೆಸರಿನಲ್ಲಿ 02 ಲಕ್ಷಕ್ಕೂ ಹೆಚ್ಚಿಗೆ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಪಡೆದು ಸರ್ಕಾರಿ ಸೌಲಭ್ಯಗಳನ್ನು ವಾಮ ಮಾರ್ಗದಲ್ಲಿ ಪಡೆದು ವಂಚಿಸುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದರೂ ಸಹ ಈ ಹಗಲು ದರೋಡೆಗೆ ಸರ್ಕಾರ ಕಡಿವಾಣ ಹಾಕದಿರುವುದು ವಿಷಾದನೀಯ. ಈ ವಂಚನೆಯ ಹಾವಳಿಯಿಂದ ನೈಜ ನಾಯಕ ತಳವಾರ ಜಾತಿಯವರಿಗೆ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಕ್ರಮ ಸರ್ಕಾರದ ಅಸಹಾಯಕತೆಗೆ ಬೇಸರ ವ್ಯಕ್ತಪಡಿಸಿದರು.

**ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು:-** ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-1 ರಲ್ಲಿರುವ ಬೆಸ್ತ, ಅಂಬಿಗ, ಕಬ್ಬಲಿಗ, ಕಬ್ಬೇರ, ಕೋಲಿ ಮುಂತಾದಜಾತಿಯವರಿಗೆ ನಾಯಕ ತಳವಾರರ ಹೆಸರಿನಲ್ಲಿ ಪರಿಶಿಷ್ಟ ಪಂಗಡದ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡುವುದನ್ನು ಕೂಡಲೆ ನಿಲ್ಲಿಸುವುದು. ನಾಯಕ ತಳವಾರ ಜಾತಿಗೆ ಸೇರಿಲ್ಲದವರು ವಾಮ ಮಾರ್ಗದಲ್ಲಿ ಪರಿಶಿಷ್ಟ ಪಂಗಡದ ನಕಲಿ 2328 ಪ್ರಮಾಣ ಪತ್ರಗಳನ್ನು ಪಡೆದಿದ್ದಲ್ಲಿ ಕರ್ನಾಟಕ ಉಚ್ಚ ನ್ಯಾಯಲಯದ ಆದೇಶದಂತೆ ಕ್ರಮ ಜರುಗಿಸಬೇಕು. ಕರ್ನಾಟಕರಾಜ್ಯದಲ್ಲಿ ಬುಡಕಟ್ಟು ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿ ಸಂಶೋಧನ ವಿದ್ಯಾರ್ಥಿಗಳಿಗೆ ಅನುಕೂಲಮಾಡಿಕೊಡಬೇಕು.

ರಾಜ್ಯದಲ್ಲಿ ವಾಲ್ಮೀಕಿ ನಾಯಕ ಜನಾಂಗದ ಮೇಲೆ ನಿರಂತರ ದೌರ್ಜನ್ಯ, ಕೊಲೆ, ಅತ್ಯಾಚಾರ ಮುಂತಾದ ಘಟನೆಗಳು ಹೆಚ್ಚಾಗುತ್ತಿದ್ದು ಇಂತಹ ಪ್ರಕರಣಗಳನ್ನು ತಡೆಗಟ್ಟಲ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಪಡೆಯುತ್ತಿರುವುದನ್ನು ವಿರೋಧಿಸಿ ಹೋರಟ ಮಾಡುತ್ತಿರುವ ಹೋರಾಟಗಾರರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಕೂಡಲೆ ಹಿಂಪಡೆದು ಅವರಿಗೆ ಸೂಕ್ತ ಭದ್ರತೆ ಒದಗಿಸುವುದು.

ಗಿರಿಜನ ಉಪಯೋಜನೆಯಡಿ ನಿಗದಿಯಾಗಿರುವ ಅನುದಾನವನ್ನು ಪರಿಶಿಷ್ಟರಲ್ಲದವರ ಉಪಯೋಗಕ್ಕೆ ಬಳಸಬಾರದು. ಅಂತಹ ಪ್ರಕರಣಗಳಲ್ಲಿ ದುರ್ಬಳಕೆ ಮಾಡಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಪರಿಶಿಷ್ಟ ವರ್ಗದ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿದ್ದರು ಇಲಾಖೆಗಳಲ್ಲಿ ಪದೋನ್ನತಿ ನೀಡುವಾಗ ವಿಳಂಬ ಧೋರಣೆ ಅನುಸರಿತ್ತಿರುವುದು ಗಮನಿಸಿದ್ದು ವಿಳಂಬ ಮಾಡದೆ ಪ್ರಮೋಷನ್ ನೀಡುವುದು ಹಾಗೂ ಮೀಸಲಾತಿಯನುಸಾರ ಪದೋನ್ನತಿ ನೀಡಬೇಕು. ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಬೇರೆ ಬೇರೆ ಸಮುದಾಯಗಳಿಂದ ಒತ್ತಡಗಳು ಬರುತ್ತಿರುವುದು, ಆ ಒತ್ತಡಗಳಿಗೆ ಸರ್ಕಾರ ಸ್ಪಂದಿಸುತ್ತಿರುವುದನ್ನು ಪತ್ರಿಕೆಗಳ ಮುಖೇನ ಗಮನಿಸಲಾಗುತ್ತಿದೆ. ಇದು ಸಂವಿಧಾನ ಆಶಯಗಳಿಗೆ ವಿರುದ್ಧವಾಗಿರುವುದರಿಂದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರವ ನಾವುಗಳು ಸರ್ಕಾರದಕ್ರಮವನ್ನು ವಿರೋಧಿಸುತ್ತೇವೆ ಎಂದು ಕಾರಟಗಿ ತಹಶೀಲ್ದಾರರ ಅನುಪಸ್ಥಿತಿಯಲ್ಲಿ ಅಧಿಕಾರಿಯಾದ ಉಮಾಮಹೇಶ್ವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.



ಉದಯವಾಹಿನಿ ಚಿತ್ರ

**ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ**

**ಈ ಸಂಬಂಧವಾಗಿ ಸಂಘಟನೆಗಳು ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿಯನ್ನು (13777/23) ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದು ಘನ ಉಚ್ಚನ್ಯಾಯಾಲಯವು ದಿನಾಂಕ:22.3.2024 ನಕಲಿ ಜಾತಿ ಪತ್ರಗಳನ್ನು ತೆಗೆದುಕೊಂಡವರ ಮೇಲೆ ಕಾಲಂ ನಂ.4 ಎಫ್ ರಡಿ ಕ್ರಮ ಕೈಗೊಳ್ಳುವಂತೆ ಆದೇಶ ನೀಡಿದೆ.ಆದರೆ ರಾಜ್ಯಾದ್ಯಂತ ಇರುವ ಜಿಲ್ಲಾಧಿಕಾರಿಗಳು ನಕಲಿ ಜಾತಿ ಪ್ರಮಾಣ ಪತ್ರತೆಗೆದುಕೊಂಡವರ ಮೇಲೆ ಮತ್ತು ಪ್ರಮಾಣ ಪತ್ರಗಳನ್ನು ನೀಡಿದವರ ಮೇಲೆ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂದು ವಾಲ್ಮೀಕಿ ಮಹಾ ಸಭಾ ತೀವ್ರವಾಗಿ ಖಂಡಿಸಿತು.**

**ವಂಚನೆಯ ಪ್ರಕರಣಗಳು ಹೆಚ್ಚಾಗುತ್ತಿವೆ**

## ಪಠ್ಯದಲ್ಲಿ ಎಸ್.ಎಲ್. ಭೈರಪ್ಪ ಜೀವನ ಚರಿತ್ರೆ ಸೇರಬೇಕು: ಅಪ್ಪಾಜಿ ನಾಡಗೌಡ

• ಉದಯವಾಹಿನಿ ಮುದ್ದೇಬಿಹಾಳ

ಅಗಲಿದ ಅಕ್ಷರ ಮಾಂತ್ರಿಕ ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ಜೀವನಚರಿತ್ರೆಯನ್ನು ಪಠ್ಯದಲ್ಲಿ ಸೇರಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡುವುದಾಗಿ ಕೆಎಸ್ಡಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್. (ಅಪ್ಪಾಜಿ) ನಾಡಗೌಡ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ಎಸ್.ಎಲ್. ಭೈರಪ್ಪ ನುಡಿ ನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಭೈರಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಭೈರಪ್ಪ ಅವರ ಕಷ್ಟಸಾಧ್ಯ ಜೀವನದಿಂದ ಹೊರಹೊಮ್ಮಿದ ಕಾದಂಬರಿಗಳು ಯುವಕರಿಗೆ ಮಾದರಿಯಾಗಿವೆ. ಅವರ ಕಾದಂಬರಿಗಳು ಕಲ್ಪನೆಯಲ್ಲ, ನೈಜತೆಯನ್ನು ಒಳಗೊಂಡಿದ್ದವು ಎಂದು ಶಾಸಕರು ನೆನಪಿಸಿದರು. ತಾವು ಭೈರಪ್ಪನವರೊಂದಿಗೆ ಹೊಂದಿದ್ದ ಒಡನಾಟದ ನೆನಪುಗಳನ್ನು ಹಂಚಿಕೊಂಡ ಅವರು, ಪಟ್ಟಣದಲ್ಲಿ ಸಾಹಿತ್ಯ ಚಟುವಟಿಕೆಗಳಿಗೆ ನಿರ್ಮಿಸಲಾಗುತ್ತಿರುವ ಗುರುಭವನಕ್ಕೆ ಎಸ್.ಎಲ್. ಭೈರಪ್ಪ ಭವನ ಎಂದು ನಾಮಕರಣ ಮಾಡುವ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ, ಸಾಹಿತಿಗಳಾದ ಆರ್.ಜಿ. ಕಿತ್ತೂರ, ವೈ. ಹೆಚ್. ವಿಜಯಕರ, ಎಂ.ಎಂ. ಬೆಳಗಲ್, ಎಂ.ಹೆಚ್. ಹಾಲ್ಯಾಳ, ಶಿವಪುತ್ರ ಅಜಮನಿ, ಸುರೇಶ್ ಹರನಾಳ, ಪ್ರಕಾಶ ನರಗುಂದ ಸೇರಿದಂತೆ ಅನೇಕರು ಮಾತನಾಡಿ ಭೈರಪ್ಪನವರಂಥ ಕಾದಂಬರಿಕಾರ ಮತ್ತೆ ಹುಟ್ಟಿಬರಲು ಸಾಧ್ಯವಿಲ್ಲ. ಆದರೆ ಅವರ ಬರಹ, ನಡೆ-ನುಡಿಗಳ ಮೂಲಕ ಅವರು ಸದಾ ಅಮರರಾಗಿದ್ದಾರೆ ಎಂದು ನುಡಿ ನಮನ ಸಲ್ಲಿಸಿದರು. ಭೈರಪ್ಪನವರ ಸಾಹಿತ್ಯವು ಕನ್ನಡ ಓದುಗರಷ್ಟೇ ಅಲ್ಲದೆ, ಮರಾಠಿ, ಹಿಂದಿ, ಇಂಗ್ಲಿಷ್ ಸೇರಿದಂತೆ ಇತರ ಭಾಷೆಯ ಓದುಗರಿಗೂ ಮೆಚ್ಚುಗೆ ಪಡೆದಿದೆ ಎಂದು ಅವರು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು, ಸ್ಥಳೀಯ ಸಾಹಿತಿಗಳು, ಓದುಗರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು. ಸಿದ್ದನಗೌಡ ಬಿಜ್ಜೂರ ನಿರೂಪಿಸಿ ವಂದಿಸಿದರು.



ಉದಯವಾಹಿನಿ ಚಿತ್ರ

**ಭೈರಪ್ಪ ನಿಷ್ಠುರವಾದಿಯಾಗಿದ್ದರು. ಅವರನ್ನು ಬಲ-ಎಡಪಂಥಿಯರೆಂದು ಬಿಂಬಿಸಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ಸಿಗದಂತೆ ಮಾಡಿದರು, ಅವರ ಪ್ರಾಮಾಣಿಕ ಬರಹಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ ಎಂದರು. ಅಶೋಕ ಮಣಿ ಅವರು, ''ಭೈರಪ್ಪ ಅವರಿಗೆ ಮರಣೋತ್ತರವಾಗಿಯಾದರೂ ಜ್ಞಾನಪೀಠ ಪ್ರಶಸ್ತಿ ನೀಡಬೇಕು.**

**-ಬಿ.ಎಂ. ಹಿರೇಮಠ, ಅಶೋಕ ಮಣಿ, ಸಿ.ಬಿ. ಇಟಗಿ, ಹಿರಿಯ ಸಾಹಿತಿ**

## ಮಕ್ಕಳ ಸಮಗ್ರ ಬೆಳವಣಿಗೆಗೆ ತಜ್ಞರಿಂದ ಉಪನ್ಯಾಸ

• ಉದಯವಾಹಿನಿ ಹಾಸನ

ನಗರದ ಮಹಾವೀರ ಭವನದಲ್ಲಿ ಸೆಪ್ಟೆಂಬರ್ 27ರಂದು ಸಂಜೆ 5 ಗಂಟೆಗೆ ರೋಟರಿ ಕ್ಲಬ್ ಆಫ್ ಟೈಗರ್ಸ್ ವತಿಯಿಂದ ಮಕ್ಕಳ ಸಮಗ್ರ ಬೆಳವಣಿಗೆಗೆ ಸಂಬಂಧಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ಡಾ. ಗುರುತೇಜ್ (ಕೋ .ಫೌಂಡರ್ ಮತ್ತು ಸಿ.ಇ.ಓ., ವಿಸ್ಡಂ ಇಡಿ) ಹಾಗೂ ಡಾ. ರೆಬೆಲ್ಲೋ (ಫೌಂಡರ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್, ವಿಸ್ಡಂ ,ಇಡಿ) ಪ್ರಮುಖ ಭಾಷಣಗಾರರಾಗಿ ಪಾಲ್ಗೊಳ್ಳುತ್ತಿದ್ದಾರೆ. ಮಕ್ಕಳಲ್ಲಿ ನೆನಪಿನ ಶಕ್ತಿ ವೃದ್ಧಿ, ಸರ್ವತೋಮುಖ ವ್ಯಕ್ತಿತ್ವ ವಿಕಾಸ ಹಾಗೂ ಜಾಗತಿಕ ಅಧ್ಯಯನ ಕುರಿತಂತೆ ತಜ್ಞರು ಆಳವಾದ ಮಾರ್ಗದರ್ಶನ ನೀಡಲಿದ್ದಾರೆ.

ವಿದ್ಯಾರ್ಥಿಗಳ ಅಧ್ಯಯನದಲ್ಲಿ ಏಕಾಗ್ರತೆ ಬೆಳೆಸುವುದು, ಜೀವನ ಶೈಲಿಯಲ್ಲಿ ಆರೋಗ್ಯಕರ ಬದಲಾವಣೆ ತರಿಸುವುದು ಮತ್ತು ಪೋಷಕರು ಮಕ್ಕಳಿಗೆ ನೀಡಬೇಕಾದ ಮಾನಸಿಕ ಶೈಕ್ಷಣಿಕ ಬೆಂಬಲದ ಕುರಿತಂತೆ ಉಪಯುಕ್ತ ಸಲಹೆಗಳು ಈ ಉಪನ್ಯಾಸದಲ್ಲಿ ಲಭ್ಯವಾಗಲಿವೆ. ಕಾರ್ಯಕ್ರಮವು ವಿದ್ಯಾರ್ಥಿಗಳು ಮತ್ತು ಪೋಷಕರಿಬ್ಬರಿಗೂ ಪ್ರೇರಣಾದಾಯಕವಾಗಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ರೋಟರಿ ಕ್ಲಬ್ ಆಫ್ ಟೈಗರ್ಸ್ ವತಿಯಿಂದ ಉಚಿತವಾಗಿ ಏರ್ಪಡಿಸಿರುವ ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ಆಯೋಜಕರು ಕೋರಿದ್ದಾರೆ. ಈ ವಿಶೇಷ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.




ಉದಯವಾಹಿನಿ ಚಿತ್ರ

## ರಾಜಕಾರಣಿಗಳು ಕೇವಲ ಮೊಸಳೆ ಕಣ್ಣೀರು ಸುರಿಸಬಾರದು: ಕೆಲ್ಲೂರ

• ಉದಯವಾಹಿನಿ ಕೆಂಭಾವಿ

ರೈತ ದೇಶದ ಆಸ್ತಿ. ಹಣ ಎಷ್ಟೆ ಇದ್ದರೂ ರೈತ ಬೆಳೆದ ಬೆಳೆಯೆ ಎಲ್ಲರೂ ತಿನ್ನಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ (ಕೋಡಿಹಳ್ಳಿ ಬಣ) ರಾಜ್ಯ ಉಪಾಧ್ಯಕ್ಷೆ ಮಹಾದೇವಿ ಬೇವಿನಾಳಮಠ ಹೇಳಿದರು. ಪಟ್ಟಣದ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಕೋಡಿಹಳ್ಳಿ ಬಣ) ಜಿಲ್ಲಾ ಘಟಕದ ಹಮ್ಮಿಕೊಂಡಿದ್ದ ವತಿಯಿಂದ ಕಾರ್ಯಕ್ರಮದಲ್ಲಿ ನೂತನ ಮಹಿಳಾ ಹೋಬಳಿ ಘಟಕ ಹಾಗೂ ಪುರುಷ ಘಟಕದ ನೂತನ ಅಧ್ಯಕ್ಷರ ನೇಮಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಮಹಿಪಾಲರೆಡ್ಡಿ ಡಿಗ್ಗಾವಿ ಮಾತನಾಡಿ ರೈತ ಸಂಘಟನೆಗಳಿಂದ ಉತ್ತಮ ರೈತ ಹೋರಾಟಗಳು ನಡೆಯುತ್ತಿರಲಿ. ನಾವು ಯಾವಾಗಲೂ ರೈತರಿಗೆ ಬೆಂಗಾವಲಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಮಲ್ಲನಗೌಡ ಕೆಲ್ಲೂರ ಮಾತನಾಡಿ, ಸರಕಾರಗಳು ರೈತರು ಬೆಳೆದ ಬೆಳೆಗೆ ಗರಿಷ್ಠ ಬೆಂಬಲ ಬೆಲೆ ನೀಡಬೇಕು. ರಾಜಕಾರಣಿಗಳು ಕೇವಲ ಮೊಸಳೆ ಕಣ್ಣೀರು ಸುರಿಸಬಾರದು. ರೈತರಿಗೆ ನಿಜವಾದ ರೂಪದಲ್ಲಿ ಸಹಾಯ ಮಾಡಬೇಕು ಎಂದು ಹೇಳಿದರು.ಜಿಲ್ಲಾಧ್ಯಕ್ಷ ಎಚ್.ಆರ್.ಬಡಿಗೇರ ಪ್ರಾಸ್ತಾವಿಕ ಮಾತನಾಡಿದರು. ಹುಣಸಗಿ ತಾಲ್ಲೂಕಾಧ್ಯಕ್ಷ ಮಲ್ಲಣ್ಣ ಕೊಡೆಕಲ್ ಹಾಗೂ ಶಹಾಪುರ ತಾಲ್ಲೂಕಾಧ್ಯಕ್ಷ ಭೀಮನಗೌಡ ಹುಲಕಲ ಮಾತನಾಡಿದರು. ಷ.ಬ್ರ.ಚನ್ನಬಸವ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು. ಮುಖಂಡರಾದ ಮಡಿವಾಳಪ್ಪಗೌಡ ಪೊಲೀಸಪಾಟೀಲ, ರಾಮನಗೌಡ ಪೋಪಾಟೀಲ, ಯಂಕೋಬ ದೊರೆ, ದೇವಮ್ಮ, ಸುರೇಖಾ ಪಡಶೆಟ್ಟಿ, ರಾಮನಗೌಡ ಯಾಳಗಿ, ರಾಚಯ್ಯಸ್ವಾಮಿ ಮುದನೂರ, ಯಮನಪ್ಪ ಕುಂಬಾರ, ಸಾಹೇಬಗೌಡ ಇದ್ದರು. ಡಿಸಿ ಪಾಟೀಲ್ ನಿರೂಪಿಸಿದರು.

**ನೂತನ ಹೋಬಳಿ ಘಟಕ:** ರವಿಕಾಂತ ಡಿಗ್ಗಾವಿ (ಗೌರವಾಧ್ಯಕ್ಷ), ತಿರುಪತಿ.ಎಸ್.ಮ್ಯಾಗೇರಿ (ಅಧ್ಯಕ್ಷರು), ಸಂಗನಬಸಪ್ಪ ಪತ್ತೇಪುರ (ಉಪಾಧ್ಯಕ್ಷ), ಮಲ್ಲು ತುಂಬಗಿ (ಉಪಾಧ್ಯಕ್ಷ), ಸಚಿನ ದೊರೆ (ಪ್ರಧಾನ ಕಾರ್ಯದರ್ಶಿ), ಮಹಿಬೂಬ ದಫೇದಾರ (ಕಾರ್ಯಾಧ್ಯಕ್ಷ).

**ಮಹಿಳಾ ಘಟಕ :** ಲಕ್ಷ್ಮೀಬಾಯಿ ಶಹಾಪುರ (ಗೌರವಾಧ್ಯಕ್ಷೆ), ಬೋರಮ್ಮ ಹಿರೇಮಠ (ಅಧ್ಯಕ್ಷರು), ಮಹಾದೇವಿ ಮೋಪಗಾರ (ಉಪಾಧ್ಯಕ್ಷೆ), ಶೋಭಾ ಅವಟಿ (ಉಪಾಧ್ಯಕ್ಷೆ), ಪಾರ್ವತಿ ಹೂಗಾರ (ಪ್ರಧಾನ ಕಾರ್ಯದರ್ಶಿ), ಮಹಾದೇವಿ ಟಣಕೆದಾರ (ಕಾರ್ಯಾಧ್ಯಕ್ಷೆ).



ಉದಯವಾಹಿನಿ ಚಿತ್ರ

**ಹೆಣ್ಣು ಕೇವಲ ಅಡುಗೆ ಮನೆಗೆ ಮಾತ್ರ ಸೀಮಿತವಾಗದೆ ಸಮಾಜ ಸೇವೆಯಲ್ಲೂ ಮುಂಚೂಣಿಯಲ್ಲಿ ಇರಬೇಕು. ದೇಶ ಎಂದು ಬಂದಾಗ ಹೇಗೆ ಕಿತ್ತೂರು ರಾಣಿ ಚನ್ನಮ್ಮಾ, ಒನಕೆ ಓಬವ್ವ ಹೋರಾಡಿದರೋ ಹಾಗೆಯೆ ರೈತನ ಕಷ್ಟ ಅಂತಾ ಬಂದಾಗ ನಾವೆಲ್ಲ ಮಹಿಳೆಯರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ನೆರೆದಿದ್ದ ಮಹಿಳೆಯರಿಗೆ ಹುರಿದುಂಬಿಸಿದರು.**

**-ಮಹಾದೇವಿ ಬೇವಿನಾಳಮಠ, ರಾಜ್ಯ ಉಪಾಧ್ಯಕ್ಷೆ**

## ಹೊರ ಗುತ್ತಿಗೆಯನ್ನು ರದ್ದುಗೊಳಿಸಲು ಆಗ್ರಹಿಸಿ ಧರಣಿ

• ಉದಯವಾಹಿನಿ ಬಳ್ಳಾರಿ

ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ, ವಿಮ್ಸ್ ಗುತ್ತಿಗೆ ನೌಕರರ ಸಂಘ, ಕೆಪಿಟಿಸಿಎಲ್ ವಿದ್ಯುತ್ ವಿತರಣಾ ಕಾರ್ಮಿಕರ ಸಂಘ, ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಗಳ ಗುತ್ತಿಗೆ ನೌಕರರ ಸಂಘ ಹಾಗೂ ಸ್ಪಾಂಜ್ ಐರನ್ ಕಾರ್ಮಿಕರ ಸಂಘಗಳಿಂದ ಜಿಲ್ಲಾಧಿಕಾರಿ ಕಛೇರಿ ಮುಂದೆ ಹೊರ ಗುತ್ತಿಗೆಯನ್ನು ರದ್ದುಗೊಳಿಸಿ, ಖಾಯಂ ನೇಮಕಾತಿ ಮಾಡಬೇಕು, ಈಗಾಗಲೇ ನಿರ್ಧರಿಸಿದಂತೆ ವಿವಿದೋದ್ದೇಶ ಕಾರ್ಮಿಕರ ಸಹಕಾರಿ ಸಂಘ ರಚಿಸಲು ಕ್ರಮ ಕೈಗೊಳ್ಳಬೇಕು. ಪರಿಷ್ಕೃತ ಕನಿಷ್ಠ ವೇತನ ಹೆಚ್ಚಳ ಜಾರಿಗೆ ತರಬೇಕು, ಬಳ್ಳಾರಿಯಲ್ಲಿ ಇಎಸ್ಐ ಆಸ್ಪತ್ರೆ ಪ್ರಾರಂಭಿಸಬೇಕು ಎಂದು ಧರಣಿ ಹಮ್ಮಿಕೊಳ್ಳಲಾಗಿತ್ತು.

ಎಐಯುಟಿಯುಸಿ ರಾಜ್ಯ ಅಧ್ಯಕ್ಷ ಕಾ.ಕೆ. ಸೋಮಶೇಖರ್ ಮಾತನಾಡಿ ಗುತ್ತಿಗೆ ಕಾರ್ಮಿಕರದು ಅತ್ಯಂತ ಸಂಕಷ್ಟದ ಬದುಕಾಗಿದೆ. ಬಹುತೇಕ ಸರ್ಕಾರಿ ಇಲಾಖೆಗಳು, ಕಾರ್ಖಾನೆಗಳು ಗುತ್ತಿಗೆ ಕಾರ್ಮಿಕರ ಶ್ರಮದ ಮೇಲೆಯೇ ಅವಲಂಬಿತವಾಗಿವೆ. ಆದರೂ ಗುತ್ತಿಗೆ ಕಾರ್ಮಿಕರ ಶ್ರಮಕ್ಕೆ ಕವಡೆ ಕಾಸಿನ ಬೆಲೆಯಿಲ್ಲ. ಬಿಜೆಪಿ ತಂದಿರುವ 4 ಲೇಬರ್ ಕೋಡ್ ಗಳು ಕಾರ್ಮಿಕರನ್ನು ಸಂಪೂರ್ಣವಾಗಿ ಗುಲಾಮರನ್ನಾಗಿಸುತ್ತದೆ. ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆ ಹೊರಗುತ್ತಿಗೆ ಪದ್ಧತಿ ಅಂತೂ ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಹೊರಗುತ್ತಿಗೆ ಕಾರ್ಮಿಕರು ಹೆಚ್ಚೆಚ್ಚು ಸಂಘಟಿತರಾಗಬೇಕು, ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಧ್ವನಿಯೆತ್ತಬೇಕು. ಮಾಲೀಕರ ಹಾಗೂ ಸರ್ಕಾರದ ಶೋಷಣೆಯನ್ನು ಕೊನೆಗಾಣಿಸಬೇಕು ಎಂದರು. ಜಿಲ್ಲಾ ಅಧ್ಯಕ್ಷ ಎ.ದೇವದಾಸ್, ಜಿಲ್ಲಾ ಕಾರ್ಯದರ್ಶಿ ಡಾ.ಪ್ರಮೋದ್, ಉಪಾಧ್ಯಕ್ಷರಾದ ಆರ್ ಸೋಮಶೇಖರ್ ಗೌಡ, ಎ.ಶಾಂತಾ, ಜಂಟಿ ಕಾರ್ಯದರ್ಶಿ ಸುರೇಶ್ ,ವಿವಿಧ ಯುನಿಯನ್ ಮುಖಂಡರುಗಳು ಮಾತನಾಡಿದರು.



ಉದಯವಾಹಿನಿ ಚಿತ್ರ

## ಮೊಬೈಲ್ ಟವರ್ ಬ್ಯಾಟರಿ ಕಳ್ಳತನ: ಮೂವರ ಬಂಧನ

• ಉದಯವಾಹಿನಿ ಬಳ್ಳಾರಿ

ಏರ್‌ಟೆಲ್ ಮತ್ತು ಜಿಯೋ ಟೆಲಿ ಕಮ್ಯೂನಿಕೇಷನ್ ನ ಮೊಬೈಲ್ ಟವರ್‌ಗಳ ಬ್ಯಾಟರಿ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಕಳುವು ಮಾಡಿದ ಉತ್ತರಪ್ರದೇಶ ಮೂಲದ ಮೂವರು ಆರೋಪಿಗಳನ್ನು ಬಳ್ಳಾರಿ ಗ್ರಾಮೀಣ ಪೊಲೀಸರು ಬಂಧಿಸಿ 30.49 ಲಕ್ಷ ರೂ.ಗಳ ಮೌಲ್ಯದ ಬ್ಯಾಟರಿ, ಎಲೆಕ್ಟ್ರಾನಿಕ್ ಉಪಕರಣಗಳನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ ಆಟೋವನ್ನು ವಶಪಡಿಸಿಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಹಾಗೂ ನೆರೆಯ ಆಂಧ್ರಪ್ರದೇಶದಲ್ಲಿ ಇತ್ತಿಚೆಗೆ ಮೊಬೈಲ್ಟವರ್‌ಗಳ ಬ್ಯಾಟರಿ, ಎಲೆಕ್ಟ್ರಾನಿಕ್ ಉಪಕರಣಗಳು ಕಳ್ಳತನ ನಡೆದಿತ್ತು. ಈ ನಗ್ಗೆ ದೂರು ದಾಖಲಿಸಿಕೊಂಡು. ತನಿಖೆ ನಡೆಸಿದ ಪೊಲೀಸರು ಮೂವರು ಆರೋಪಿಗಳಾದ ಉತ್ತರ ಪ್ರದೇಶ ಅನಾಸ್ (25), ಇಕ್ರಾರ್ ದಿಲ್ ನವಾಜ್ (22), ಅನಾಸ್ (19) ಬಂಧಿಸಿದ್ದಾರೆ. ಬಂಧಿತರಿಂದ 30.49,000 ರೂ. ಗಳ ಮೌಲ್ಯದ 26 ಬ್ಯಾಟರಿ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಹಾಗೂ 5 ಲಕ್ಷ ರೂ. ಮೌಲ್ಯದ ಲಗೇಜ್ ಆಟೋ ಮತ್ತು ಕೃತ್ಯಕ್ಕೆ ಬಳಸುತ್ತಿದ್ದ ಸಲಕರಣೆಗಳನ್ನು ಜಪ್ತಿ ಮಾಡಿದ್ದಾರೆ ಎಂದು ಎಸ್‌ಪಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಟಕಾ, ಜೂಜಾಟ: 7 ಜನರ ಬಂಧನ

• ಉದಯವಾಹಿನಿ ಕಲಬುರಗಿ

ನಗರದ ಕೇಂದ್ರ ಬಸ್ ನಿಲ್ದಾಣ ಹತ್ತಿರದ ಜಿಡಿಎ ಲೇಔಟ್ ಬಳಿ ಜೂಜಾಡುತ್ತಿದ್ದ 6 ಜನರನ್ನು ಮತ್ತು ನಗರದ ಹಳೇ ಜೇವರ್ಗಿ ರಸ್ತೆಯ ಹತ್ತಿರ ಮಟಕಾ ನಂಬರ್ ಬರೆದುಕೊಳ್ಳುತ್ತಿದ್ದ ಓರ್ವನನ್ನು ಪೊಲೀಸರು ಬಂಧಿಸಿದ್ದಾರೆ. ಕೇಂದ್ರ ಬಸ್ ನಿಲ್ದಾಣ ಹತ್ತಿರದ ಜಿಡಿಎ ಲೇಔಟ್ ಹತ್ತಿರ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಅಶೋಕ ನಗರ ಪೊಲೀಸ್ ಠಾಣೆ ಪಿಎಸ್ಐ ಶೈಲಜಾ ಮತ್ತು ಅಪರಾಧ ವಿಭಾಗದ ಸಿಬ್ಬಂದಿಗಳಾದ ವೈಜನಾಥ, ನೀಲಕಂಠರಾಯ ಪಾಟೀಲ, ಮುಜಾಹಿದ್ ಕೊತ್ವಾಲ್ ಅವರು ದಾಳಿ ನಡೆಸಿ ವಜೀರ್ ಮಿಣಜಗಿ, ನಜೀರ್ ಪಟೇಲ್, ಅಮೀನ್ ಪಟೇಲ್, ದಸ್ತಗಿರಿ ಪಟೇಲ್, ತಾಜುದ್ದೀನ್ ಬಾಬಾ, ಅಬ್ದುಲ್ ಅಜೀಜ್ ಎಂಬುವವರನ್ನು ಬಂಧಿಸಿ 5,400 ರೂ.ನಗದು ಮತ್ತು 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ.

## ಶುದ್ಧ ನೀರು ಪೂರೈಕೆಗೆ ಆಗ್ರಹಿಸಿ ಪ್ರತಿಭಟನೆ

• ಉದಯವಾಹಿನಿ ನವಲಗುಂದ

ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿನ ಕೆರೆಯಲ್ಲಿನ ನೀರು ಕುಡಿಯಲು ಯೋಗ್ಯವಾಗಿಲ್ಲ ಕಾರಣ ಕೂಡಲೆ ಕೆರೆಯಲ್ಲಿನ ಮಲೀನ ನೀರನ್ನು ಹೊರಹಾಕಿ ಹೊಸದಾಗಿ ನೀರು ತುಂಬಿಸುಂತೆ ಆಗ್ರಹಿಸಿ ಗ್ರಾಪಂ ಕಾರ್ಯಾಲಯಕ್ಕೆ ಬೀಗ ಜಡಿದು ಗ್ರಾಮಸ್ಥರು ಕೆರೆಯಲ್ಲಿಳಿದು ಪ್ರತಿಭಟನೆ ಮಾಡಿದರು.

ಗ್ರಾಮದ ಕೆರೆಗೆ ಈ ಹಿಂದೆ ಮಲಪ್ರಭಾ ಕಾಲುವೆಯಿಂದ ನೀರು ತುಂಬಿಸಿಕೊಳ್ಳುವ ಸಂಧರ್ಭದಲ್ಲಿ ಕೆರೆಯಲ್ಲಿ ಮೊದಲಿದ್ದ ಕಲುಷಿತ ನೀರನ್ನು ಹೊರ ಹಾಕದೆ ಇರುವುದರಿಂದ ಪ್ರಸ್ತುತ ಕರೆಯ ನೀರು ಮತ್ತಷ್ಟು ಕಲುಷಿತಗೊಂಡಿದ್ದು. ಈ ಕುರಿತಾಗಿ ಗ್ರಾಪಂ ಅಧಿಕಾರಿಗಳಿಗೆ ಹಲವಾರು ಬಾರಿ ಹೇಳಿದರೂ ಏನೂ ಪ್ರಯೋಜನವಾಗದಿರುವುದರಿಂದ ಬೇಸತ್ತು ಗ್ರಾಪಂ ಕಾರ್ಯಾಲಯಕ್ಕೆ ಬೀಗ ಹಾಕಲಾಗಿದ್ದು ಸಂಬಂಧಿಸಿದ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ. ಕೆರೆಯ ನೀರನ್ನು ಹೊರ ಹಾಕಿ ಹೊಸದಾಗಿ ನೀರು ತುಂಬಿಸುವವರೆಗೂ ಹೋರಾಟ ನಡೆಸಲಾಗುವುದೆಂದು ಗ್ರಾಮಸ್ಥರು ಪಟ್ಟು ಹಿಡಿದರು.

## ಲೊಕೇಷನ್ ಆ್ಯಪ್ ಗೊಂದಲ: ಕುರಿ ಶೆಡ್, ಹೊಲದ ದಾರಿ ತೋರಿಸಿದ ಆ್ಯಪ್

• ಉದಯವಾಹಿನಿ ಸಿರುಗುಪ್ಪ

ಲೊಕೇಷನ್ ಆ್ಯಪ್ ತೋರಿಸಿದ ಪ್ರಕಾರ ಶಿಕ್ಷಕರು ಸಮೀಕ್ಷೆಯನ್ನು ಮನೆಗಳಿಗೆ ತೆರಳಿ ಮಾಡಬೇಕು, ಆದರೆ ನೆಟ್‌ವರ್ಕ್ ಬರುತ್ತಿಲ್ಲವೆಂದು ಬೀದರ್ ಜಿಲ್ಲೆಯಲ್ಲಿ ಶಿಕ್ಷಕರೊಬ್ಬರು ಮರವನ್ನು ಹತ್ತಿದ್ದರು.

ಸಿರುಗುಪ್ಪ ತಾಲ್ಲೂಕಿನಲ್ಲಿ ಲೊಕೇಷನ್ ಆ್ಯಪ್ ತೋರಿಸಿದ ಪ್ರಕಾರ ಶಿಕ್ಷಕ ಮಂಜುನಾಥ ಮನೆಗಳನ್ನು ಸಮೀಕ್ಷೆ ಮಾಡಲು ತೆರಳಿದಾಗ ಹೊಲದಲ್ಲಿರುವ ಖಾಲಿ ಕುರಿ ಶೆಡ್ ತೋರಿಸಿದ್ದು, ಗೊಂದಲ ಉಂಟಾಗಿದೆ. ತಾಲ್ಲೂಕಿನ ತೆಕ್ಕಲಕೋಟೆ ಪಟ್ಟಣದ ವ್ಯಾಪ್ತಿಗೆ ಬರುವ ದೇವಿನಗರದ ಸಮೀಪವಿರುವ ರೇವಣ ಸಿದ್ದಪ್ಪನ ಬಡಾವಣೆಯಲ್ಲಿ 52 ಮನೆಗಳಿದ್ದು, ಇಲ್ಲಿಂದ ಮುಂದೆ ಹೊಲಕ್ಕೆ ಹೋಗುವ ಹಾದಿಯಲ್ಲಿ ಕುರಿ ಶೆಡ್ ಇದ್ದು, ಸರ್ಕಾರದ ಆರ್ಥಿಕ ಮತು ಸಾಮಾಜಿ, ಶೈಕ್ಷಣಿಕ ಸಮೀಕ್ಷೆ ಮಾಡುತ್ತಿರುವ ಸಮೀಕ್ಷೆದಾರ ಮಂಜುನಾಥ ಎನ್ನುವ ಶಿಕ್ಷಕರು ಸರ್ಕಾರ ನೀಡಿದ ಮನೆಗಳ ಸಮೀಕ್ಷೆ ಲೊಕೇಷನ್ ಆ್ಯಪ್ ಓಪನ್ ಮಾಡಿದಾಗ ಹೊಲದಲ್ಲಿರುವ ಯಾರು ವಾಸಮಾಡದ ಕುರಿ ಶೆಡ್ ಆ್ಯಪ್‌ನಲ್ಲಿ ತೋರಿಸಿದೆ. ಇದರಿಂದಾಗಿ ಗೊಂದಲಕ್ಕೆ ಒಳಗಾದ ಸಮೀಕ್ಷೆದಾರ ಶಿಕ್ಷಕ ಮಂಜುನಾಥ ಕಕ್ಕಾಬಿಕ್ಕಿಯಾಗಿದ್ದು, ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ.





ಉದಯವಾಹಿನಿ ಚಿತ್ರ

# ನಿರುದ್ಯೋಗ ತಾಂಡವವಾಡುತ್ತಿದೆ, ನಮ್ಮ ರಾಜ್ಯ ಮತ್ತೊಂದು ನೇಪಾಳ ಆಗಲಿದೆ

## ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹಾಳಾಗಿದೆ, ಮುಂಬರುವ ಚುನಾವಣೆಯಲ್ಲಿ ಇದಕ್ಕೆ ತಕ್ಕ ಉತ್ತರ ಸಿಗಲಿದೆ: ಯತ್ನಾಳ

• ಉದಯವಾಹಿನಿ ದಾವಣಗೆರೆ

ರಾಜ್ಯದಲ್ಲಿ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದ್ದು, ನಿರುದ್ಯೋಗ ತಾಂಡವವಾಡುತ್ತಿದೆ. ಹಿಂದೂಗಳ ಮೇಲೆ ದೌರ್ಜನ್ಯ ವ್ಯಾಪಕವಾಗಿ ನಡೆಯುತ್ತಿದೆ. ಕರ್ನಾಟಕ ಮತ್ತೊಂದು ನೇಪಾಳವಾಗುವ ಕಾಲ ದೂರವಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಳವಳ ವ್ಯಕ್ತಪಡಿಸಿದರು.

ಇಲ್ಲಿನ ನಿಟುವಳ್ಳಿಯ ಸಿದ್ದೇಶ್ವರ ಮಿಲ್ ಆವರಣದಲ್ಲಿ ಜೋಡಿ ಬನ್ನಿ ಮಹಾಂಕಾಳಿ ದುರ್ಗಾಪರಮೇಶ್ವರಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಏರ್ಪಡಿಸಿದ್ದ ದೇವನಗರಿ ದಸರಾ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಪಸಂಖ್ಯಾತರ ತುಷ್ಟಿಕರಣ ಮಾಡುತ್ತಿದ್ದಾರೆ. ಅವರ ಜಾತ್ಯತೀತ ನಿಲುವಿಗೆ ತಕರಾರು ಇಲ್ಲ. ಆದರೆ, ಒಂದು ಧರ್ಮದ ಜನರನ್ನು ಓಲೈಕೆ ಮಾಡುವುದಕ್ಕೆ ಆಕ್ಷೇಪವಿದೆ. ಗಣಪತಿ ಮೆರವಣಿಗೆಯ ಮೇಲೆ ಕಲ್ಲು ಬೀಳುತ್ತಿದ್ದರೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹಾಳಾಗಿದೆ. ಮುಂಬರುವ ಚುನಾವಣೆಯಲ್ಲಿ ಇದಕ್ಕೆ ತಕ್ಕ ಉತ್ತರ ಸಿಗಲಿದೆ' ಎಂದು ಹೇಳಿದರು.

'ಗಣಪತಿ ಉತ್ಸವಕ್ಕೆ ನೂರೆಂಟು ನಿರ್ಬಂಧ ವಿಧಿಸಲಾಗುತ್ತಿದೆ. ಹಿಂದೂ ಧರ್ಮದ ಹುಡುಗರು ನೃತ್ಯ ಮಾಡಲು ಅವಕಾಶ ಇರುವುದು ಗಣಪತಿ ಹಬ್ಬದಲ್ಲಿ ಮಾತ್ರ. ಈ ಹಬ್ಬಕ್ಕೆ ಡಿ.ಜೆ ನಿಷೇಧ ಹೇರುವುದು ಅಕ್ಷಮ್ಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇವರಿಗೆ ಐ ಲವ್' ಅಂತ ಹೇಳುವುದು ನಮ್ಮ ಧರ್ಮವಲ್ಲ. ದೇವರಿಗೆ ಇಂತಹ ಪದಗಳನ್ನು ಬಳಸುವುದು ಅಶಾಂತಿ ಸೃಷ್ಟಿಸುವ ಹುನ್ನಾರ. ಇಂತಹವರ ವಿರುದ್ಧ ರಾಜ್ಯ ಸರ್ಕಾರ ಕಾನೂನು ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಕಿಡಿಕಾರಿದರು. ಪಂಚಮಸಾಲಿ ಸಮುದಾಯದ ಮುಖಂಡ ಅಶೋಕ್ ಗೋಪನಾಳ್, ಬಿಜೆಪಿ ಮುಖಂಡರಾದ ಯಶವಂತರಾವ್ ಜಾಧವ್, ಚಿಂದೋಡಿ ಚಂದ್ರಧರ, ಜಗದೀಶ್, ಎಸ್.ಟಿ. ವೀರೇಶ್, ಹನಗವಾಡಿ ವೀರೇಶ್, ಶ್ರೀನಿವಾಸ್ ದಾಸ್ ಕರಿಯಪ್ಪ, ಗುಂಡಿ ಪುಷ್ಪಾ ಸಿದ್ದೇಶ್ ಹಾಜರಿದ್ದರು.

**ವೇದಿಕೆ ಹಂಚಿಕೊಂಡ ನಾಯಕರು:** ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರೊಂದಿಗೆ ಪಕ್ಷದ ನಾಯಕರು ವೇದಿಕೆ ಹಂಚಿಕೊಂಡರು. ಪ್ರತಿಯೊಬ್ಬರು ಭಾಷಣದಲ್ಲಿ ಯತ್ನಾಳ ಅವರ ಗುಣಗಾನ ಮಾಡಿದರು. ಹಿಂದೂ ಹುಲಿ ಯತ್ನಾಳ್‌ಜಿ ಎಂಬ ಘೋಷಣೆ ಕೂಗಿದ ಶಾಸಕ ಬಿ.ಪಿ. ಹರೀಶ್ 'ಸಮಸ್ತ ಕರ್ನಾಟಕ ಅವರೊಂದಿಗೆ ಇದೆ' ಎಂದು ಹೇಳಿದರು.

**ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ**



ಉದಯವಾಹಿನಿ ಚಿತ್ರ

**ಬಸನಗೌಡ ಪಾಟೀಲ ಯತ್ನಾಳ ಬೇರೆ ರೀತಿಯ ರಾಜಕಾರಣಿ ಅಲ್ಲ. ಅವರ ನೇರ ನಿಷ್ಠೂರ ವ್ಯಕ್ತಿತ್ವವನ್ನು ಜನರು ಒಪ್ಪಿದ್ದಾರೆ. ಭವಿಷ್ಯದಲ್ಲಿ ರಾಜ್ಯ ಮುನ್ನಡೆಸುವ ಶಕ್ತಿ ಅವರಿಗಿದೆ.**

**-ಜಯಮೃತ್ಯುಂಜಯ ಸ್ವಾಮೀಜಿ**

**ಅಧಿಕಾರಿಗಳನ್ನು ಬಿಟ್ಟು ಬೆದರಿಸುವ ಜಿಲ್ಲಾ ಉಸ್ತುವಾರಿ ಸಚಿವರ ವರ್ತನೆಯಿಂದ ಯಾರೊಬ್ಬರೂ ಹೆದರಿಲ್ಲ. ಮುಂದಿನ ದಿನಗಳಲ್ಲಿ ಹಿಂದೂ ವಿರೋಧಿಗಳನ್ನು ಮನೆಗೆ ಕಳುಹಿಸುತ್ತೇವೆ.**

**-ಬಿ.ಪಿ.ಹರೀಶ್, ಶಾಸಕ ಹರಿಹರ**


ಇಸ್ರೇಲಿನಿಂದ ವಿಶ್ವಸಂಸ್ಥೆಗೆ ಪ್ರಯಾಣಿಸುವಾಗ ಅಂಗೈಯ್ಯಲ್ಲಿ ಜೀವಹಿಡಿದುಕೊಂಡು ಸಾಗಿದ ನೆತನ್ಯಾಹು!

# ವಿಮಾನದಲ್ಲಿ ಹಾದು ಹೋಗುವುದು ಸಹ ನೆತನ್ಯಾಹು ಪಾಲಿಗೆ ಅಪಾಯವೇ ಸರಿ

ಪ್ರಶ್ನೆಗೆ ಉತ್ತರ ಇಲ್ಲ

**ವಿಶ್ವಸಂಸ್ಥೆ:** ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆ ನಡೆಯುತ್ತಿದೆ. ಅದರಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ವಿಶ್ವದ ನಾನಾ ಗಣ್ಯರು ಭಾಗವಹಿಸಿದ್ದಾರೆ. ಈ ಸಭೆಯಲ್ಲಿ ಭಾರತದ ಪರವಾಗಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಭಾಗವಹಿಸಿದ್ದಾರೆ.

ಇದರ ನಡುವೆಯೇ ಒಂದು ಕುತೂಹಲಕಾರಿ ವಿದ್ಯಮಾನವೊಂದು ನಡೆದಿದೆ. ಇಸ್ರೇಲ್ ದೇಶದ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಇದೇ ಸಮ್ಮೇಳನಕ್ಕಾಗಿ ಪ್ರಯಾಣಿಸಿದ್ದು ಅವರಿಗಾಗಿ ಮೀಸಲಿರುವ ಇಸ್ರೇಲ್ ಸರ್ಕಾರದ ವಿಮಾನ, ‘ವಿಂಗ್ಸ್ ಆಫ್ ಝಿಯೋನ್’, ಯೂರೋಪ್‌ನ ಕೆಲವು ರಾಷ್ಟ್ರಗಳ ಮೂಲಕ ಹಾದುಹೋಗಿ ನ್ಯೂಯಾರ್ಕ್ ತಲುಪಬೇಕಿತ್ತು. ಆದರೆ, ಅವರ ವಿಮಾನ ನೇರವಾಗಿ ಆ ಮಾರ್ಗದಲ್ಲಿ ಸಾಗಲಿಲ್ಲ. ಇಸ್ರೇಲ್ ಸರ್ಕಾರದ ಸೂಚನೆಯ ಪ್ರಕಾರ, ಐರ್ಲೆಂಡ್, ಇಟಲಿಯ ವಾಯುಮಂಡಲವನ್ನು ಪ್ರವೇಶಿಸುವುದನ್ನು ತಪ್ಪಿಸಿದ ಆ ಪೈಲಟ್‌ಗಳು ಗ್ರೀಸ್ ಮತ್ತು ಇಟಲಿಯ ನಡುವಿನ ಹಾದಿಯಲ್ಲಿ ಮೆಡಿಟರೇನಿಯನ್ ಸಮುದ್ರವನ್ನು ದಾಟಿ ನ್ಯೂಯಾರ್ಕ್ ಕಡೆಗೆ ಪ್ರಯಾಣ ಬೆಳೆಸಿತು. ಆ ಮೂಲಕ, ಯೂರೋಪ್‌ನ ದೇಶಗಳಾದ ಐರ್ಲೆಂಡ್, ಸ್ಪೇನ್ ಸೇರಿದಂತೆ ಇನ್ನೂ ಕೆಲವು ದೇಶಗಳ ವಾಯುಮಂಡಲವನ್ನು ಅದು ಪ್ರವೇಶಿಸಲಿಲ್ಲ.



ಈ ಮಾರ್ಗವು ಬಳಸು ಮಾರ್ಗವಾಗಿದ್ದರಿಂದ ಸಾಮಾನ್ಯವಾಗಿ ನೆತನ್ಯಾಹು ಅವರ ವಿಮಾನವು ಸುಮಾರು 330 ಕಿ.ಮೀ. ಹೆಚ್ಚು ಸುತ್ತಾಟವಾಗಿ ಕಡೆಗೆ ನ್ಯೂಯಾರ್ಕ್ ಗೆ ಬಂದಿಳಿಯಿತು. ಇದಕ್ಕೆ ಕಾರಣ ಅವರಿಗೆ ಇರುವ ಬಂಧನ ಭೀತಿ. ಆ ಭೀತಿಯಿಂದಾಗಿ ಹೀಗೆ ಸುತ್ತಿಬಳಸಿ ಅವರು ನ್ಯೂಯಾರ್ಕ್ ತಲುಪಬೇಕಾಯಿತು. ಇದಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು ಕೆಳಗಿವೆ.

**ಅಷ್ಟಕ್ಕೂ ನೆತನ್ಯಾಹುಗೆ ಬಂಧನ ಭೀತಿಯೇಕೆ?:** ಪ್ಯಾಲೆಸ್ತೀನ್ ಮೇಲೆ ನಡೆಸಲಾಗಿರುವ ದಾಳಿಗಳಿಗೆ ಸಂಬಂಧಿಸಿದಂತೆ, 2024ರಲ್ಲಿ ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಲಯ, ನೆತನ್ಯಾಹು, ಇಸ್ರೇಲಿನ ಮಾಜಿ ರಕ್ಷಣಾ ಸಚಿವ ಯೊವಾವ್ ಗ್ಯಾಲಟ್ ಅವರನ್ನು ಬಂಧಿಸುವಂತೆ ಆದೇಶಿಸಿತ್ತು. ಐಸಿಸಿಯ ಸದಸ್ಯ ರಾಷ್ಟ್ರಗಳ ಪಟ್ಟಿಯಲ್ಲಿ 125 ರಾಷ್ಟ್ರಗಳಿವೆ. ಅವುಗಳಲ್ಲಿ ಕೆಲವು ಐರೋಪ್ಯ ರಾಷ್ಟ್ರಗಳೂ ಸೇರಿವೆ. ಹಾಗಾಗಿ, ಐರ್ಲೆಂಡ್, ಸ್ಪೇನ್, ಫ್ರಾನ್ಸ್ ಸೇರಿದಂತೆ 45 ಯೂರೋಪ್ ದೇಶಗಳು ಐಸಿಸಿ ಸದಸ್ಯ ರಾಷ್ಟ್ರಗಳಾಗಿವೆ. ಹಾಗಾಗಿ, ಆ ರಾಷ್ಟ್ರಗಳ ಭೂಗಡಿ, ಜಲಗಡಿ, ವಾಯುಗಡಿಯನ್ನು ನೆತನ್ಯಾಹು ಪ್ರವೇಶಿಸಿದರೆ ಸಾಕು ಅವರನ್ನು ಆ ದೇಶಗಳು ಬಂಧಿಸಬಹುದು ಅಥವಾ ವಶಕ್ಕೆ ಪಡೆಯಬಹುದು. ಹಾಗಾಗಿ, ಆ ದೇಶಗಳ ವಿಮಾನದಲ್ಲಿ ಹಾದು ಹೋಗುವುದು ಸಹ ನೆತನ್ಯಾಹು ಪಾಲಿಗೆ ಅಪಾಯವೇ ಸರಿ. ಹಾಗಾಗಿ, ಈ ದೇಶಗಳ ಮೇಲೆ ಪ್ರಯಾಣ ಮಾಡಿಲ್ಲ.

**ಅವರನ್ನು ಇಸ್ರೇಲ್ ನಲ್ಲೇ ಏಕೆ ಅರೆಸ್ಟ್ ಮಾಡಲಾಗದು?:** ನೆತನ್ಯಾಹು ಅವರನ್ನು ಬಂಧಿಸಲು ಅಂತಾರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯ ಆದೇಶಿಸಿದ್ದರೂ ಅವರನ್ನು ಅವರ ದೇಶವಾದ ಇಸ್ರೇಲ್ ನೊಳಗೇ ಹೋಗಿ ಬಂಧಿಸಲು ಆಗದು. ಏಕೆಂದರೆ, ಐಸಿಸಿ ನ್ಯಾಯಾಲದ ಆದೇಶ ಕೇವಲ ಐಸಿಸಿ ಸದಸ್ಯ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವಂಥದ್ದು. ಅತ್ತ, ಇಸ್ರೇಲ್ ದೇಶ ಐಸಿಸಿಯ ಸದಸ್ಯ ರಾಷ್ಟ್ರವಲ್ಲ. ಹಾಗಾಗಿ, ಅವರ ದೇಶದೊಳಕ್ಕೆ ಹೋಗಿ ಅವರನ್ನು ಬಂಧಿಸಲು ಸಾಧ್ಯವಾಗದು.

**ಅವರೀಗ ಇಸ್ರೇಲ್ ನಿಂದ ಹೊರಬಂದಿದ್ದಾರೆ, ಈಗ ಬಂಧಿಸಬಹುದೇ?** ಇಲ್ಲ, ಸಾಧ್ಯವಿಲ್ಲ. ಏಕೆಂದರೆ, ಅವರು ತೆರಳಿರುವುದು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆಯುತ್ತಿರುವ 80ನೇ ಸಾಮಾನ್ಯ ವಾರ್ಷಿಕ ಸಭೆಗೆ. ಅದು ನಡೆಯುತ್ತಿರುವುದು ನ್ಯೂಯಾರ್ಕ್ ನ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ. ಅಂದರೆ, ಅಮೆರಿಕದಲ್ಲಿ. ಅಮೆರಿಕವು ಐಸಿಸಿ ಸದಸ್ಯ ರಾಷ್ಟ್ರವಲ್ಲ. ಹಾಗಾಗಿ, ಐಸಿಸಿ ಆದೇಶ ಅಮೆರಿಕಕ್ಕೆ ಗಡಿಯೊಳಗೆ ಅನ್ವಯಿಸುವುದಿಲ್ಲ. ಹಾಗಾಗಿ, ಬೆಂಜಮಿನ್ ನೆತನ್ಯಾಹು ಅವರು ಅಲ್ಲಿ ಸೇಫ್.

**ಆಕ್ಷೇಪಣೆಗಳ ಹೊರತಾಗಿಯೂ ಬಂದೂಕು ಹೆಗಲೇರಿಸಿಕೊಂಡ ಇಸ್ರೇಲ್ ಸೇನೆ:** ಇಸ್ರೇಲ್ ಹಾಗೂ ಹಮಾಸ್ ನಡುವಿನ ನಿತ್ಯಕಾಲದ ಯುದ್ಧ ಮಧ್ಯಪ್ರಾಚ್ಯದ ಶಾಶ್ವತ ಅಶಾಂತಿ ಉಂಟುಮಾಡಿದೆ.

ಪ್ಯಾಲೆಸ್ಟೈನ್‌ನ ಗಾಜಾ ಪ್ರದೇಶವನ್ನು ಸಂಪೂರ್ಣಗೊಳ್ಳಲು ಪ್ರತಿಬದ್ಧವಾಗಿರುವ ಇಸ್ರೇಲ್ ಪ್ರಧಾನಿ ಬಿಜಮಿನ್ ನೆತನ್ಯಾಹು, ತಮ್ಮ ಗಾಜಾ ಯೋಜನೆ ಅನ್ನು ಜಾರಿಗೊಳಿಸಲು ಪ್ರಸ್ತುತ ಸಜ್ಜಾಗಿದ್ದಾರೆ.

ಆದರೆ ಈ ಯೋಜನೆ ಬಗ್ಗೆ ಇಸ್ರೇಲ್ ಸೇನೆಯೊಳಗಿನ ವಿಭಿನ್ನ ಅಭಿಪ್ರಾಯಗಳು ಕೂಡಿವೆ ಮತ್ತು ಪರ್ಯಾಯ ಯೋಜನೆಗಳನ್ನು ಪರಿಗಣಿಸಲು ಮನವಿ ಮಾಡಲಾಗಿದೆ.

### ಭಾರತಕ್ಕೆ ಬಂದರೆ ಅವರನ್ನು ಬಂಧಿಸಬಹುದೇ?

**ನಮ್ಮ ಪ್ರಧಾನಿ ನರೇಂದ್ರ ಮೋದಿ ಹಾಗೂ ಬೆಂಜಮಿನ್ ನೆತನ್ಯಾಹು ಅವರು ಆಪ್ತಮಿತ್ರರು. ಮುಂದೆ ಯಾವಾಗಲೊಮ್ಮೆಯಾದರೂ ಅವರು ಭಾರತಕ್ಕೆ ಬಂದರೆ ಅವರನ್ನು ಐಸಿಸಿ ಆದೇಶದನ್ವಯ ಬಂಧಿಸಬಹುದೇ? ಈ ಪ್ರಶ್ನೆಗೆ ಉತ್ತರ - ಇಲ್ಲ. ಏಕೆಂದರೆ, ಭಾರತವೂ ಐಸಿಸಿಯ ಸದಸ್ಯ ರಾಷ್ಟ್ರವಲ್ಲ. ಹಾಗಾಗಿ, ಅವರು ಮೋದಿ ಅಥವಾ ಭಾರತ ಸರ್ಕಾರದ ಆಮಂತ್ರಣದ ಮೇರೆಗೆ ಭಾರತಕ್ಕೆ ಬಂದರೂ ಅವರನ್ನು ಬಂಧಿಸಲು ಆಗದು.**

## ಮನಮೋಹನ್ ಸಿಂಗ್ ಜನ್ಮದಿನ ಗೌರವ ಸಲ್ಲಿಸಿದ ಪಿಎಂ ಮೋದಿ



**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಪ್ರಧಾನಿ ದಿ.ಮನಮೋಹನ್ ಸಿಂಗ್ ಅವರ ಜನದಿನದಂದು ಅವರಿಗೆ ಗೌರವ ಸಲ್ಲಿಸಿ, ವಿವಿಧ ಕ್ಷೇತ್ರಗಳಲ್ಲಿ ದೇಶಕ್ಕೆ ಅವರು ನೀಡಿದ ಕೊಡುಗೆಯನ್ನು ಸರಿಸಿದ್ದಾರೆ. ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಜಿ ಅವರಿಗೆ ಅವರ ಜನ ವಾರ್ಷಿಕೋತ್ಸವದಂದು ನಮನಗಳು. ಅವರ ಸುದೀರ್ಘ ವರ್ಷಗಳ ಸಾರ್ವಜನಿಕ ಜೀವನದಲ್ಲಿ ಅವರು ನಮ ದೇಶಕ್ಕೆ ನೀಡಿದ ಕೊಡುಗೆಗಳನ್ನು ನಾವು ನೆನಪಿಸಿಕೊಳ್ಳುತ್ತೇವೆ ಎಂದು ಮೋದಿ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಡಾ. ಮನಮೋಹನ್ ಸಿಂಗ್ ಅವರು 2004, 2014ರ ನಡುವೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ನೇತೃತ್ವ ವಹಿಸಿದ್ದರು ಮತ್ತು 1991 ಮತ್ತು 1996 ರ ನಡುವೆ ಪಿ ವಿ ನರಸಿಂಹ ರಾವ್ ನೇತೃತ್ವದ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಅವರ ಅಧಿಕಾರಾವಧಿಯನ್ನು ಭಾರತವು ಮಾರುಕಟ್ಟೆ ಸುಧಾರಣೆಗಳನ್ನು ಪ್ರಾರಂಭಿಸಿದ ಮತ್ತು ಆರ್ಥಿಕತೆಯ ರಾಜ್ಯ ನಿಯಂತ್ರಣವನ್ನು ಸಡಿಲಗೊಳಿಸಿದ ಕಾರಣ ಯುಗಕಾಲ ಎಂದು ಪರಿಗಣಿಸಲಾಗಿದೆ.

ಈಗ ಪಾಕಿಸ್ತಾನದಲ್ಲಿರುವ ಪಂಜಾಬ್‌ನ ಒಂದು ಭಾಗದಲ್ಲಿ 1932ರಲ್ಲಿ ಜನಿಸಿದ ಸಿಂಗ್, ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರಾಗಿದ್ದರು. ನಂತರ ಸಾರ್ವಜನಿಕ ಜೀವನವನ್ನು ಪ್ರವೇಶ ಮಾಡಿದ್ದರು. ಕಳೆದ ವರ್ಷ ಡಿಸೆಂಬರ್‌ನಲ್ಲಿ ನಿಧನರಾಗಿದ್ದರು.

## ಆಭರಣದ ಅಂಗಡಿಗೆ ನುಗ್ಗಿ 30 ಜನರಿಂದ ದರೋಡೆ

### ಚಿನ್ನದಂಗಡಿಗೆ ನುಗ್ಗಿದ 30 ಮಾಸ್ಕ್‌ಮ್ಯಾನ್‌ಗಳು: ಕ್ಷಣಾರ್ಧದಲ್ಲಿ 8.2 ಕೋಟಿರೂ. ಚಿನ್ನ ಲೂಟಿ

**ಕ್ಯಾಲಿಫೋರ್ನಿಯಾ:** ಸ್ಯಾನ್ ರಾಮೋನ್‌ನಲ್ಲಿ ಮಾಸ್ಕ್ ಧರಿಸಿದ್ದ ಸುಮಾರು 30 ಜನರಿದ್ದ ಗುಂಪೊಂದು ಆಭರಣದ ಅಂಗಡಿಗೆ ನುಗ್ಗಿ 1 ಮಿಲಿಯನ್ ಮೌಲ್ಯದ, ಭಾರತೀಯ ರೂಪಾಯಿಗಳ ಪ್ರಕಾರ 8.2 ಕೋಟಿ ಚಿನ್ನವನ್ನು ದೋಚಿದೆ. ಈ ಘಟನೆ ಸೋಮವಾರ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ಕ್ಯಾಲಿಫೋರ್ನಿಯಾದ ಪೊಲೀಸರು ಬಿಡುಗಡೆ ಮಾಡಿರುವ ಸಿಸಿಟಿವಿ ದೃಶ್ಯಾವಳಿಗಳ ಪ್ರಕಾರ, ಬೃಹತ್ ಚಿನ್ನದಂಗಡಿಗೆ 30 ಜನ ಮಾಸ್ಕ್ ಧರಿಸಿರುವ ದರೋಡೆಕೋರು ದನಗಳಂತೆ ಅಂಗಡಿಗೆ ನುಗ್ಗಿದ್ದಾರೆ. ನಂತರ ದರೋಡೆಕೋರರು ಕಬ್ಬಿಣದ ಸಲಾಕೆ ಮತ್ತು ಕೊಡಲಿ ಬಳಸಿ ಗಾಜುಗಳನ್ನು ಹೊಡೆದು ಪ್ರದರ್ಶನಕ್ಕಿಟ್ಟಿದ್ದ ಚಿನ್ನವನ್ನು ದೋಚುತ್ತಿರುವುದು ಕಂಡುಬಂದಿದೆ. ಬೆಳಕಿರುವಾಗಲೇ ಈ ರೀತಿಯ ಘಟನೆ ನಡೆದಿದ್ದು, ಜನರು ಪ್ರಾಣಪಾಯದ ಬಗ್ಗೆ ಭಯಭೀತರಾಗಿದ್ದಾರೆ.

ಆಟೋ ಮೆಟಿಕ್ ಭದ್ರತಾ ಬಾಗಿಲು ಅವರನ್ನು ಒಳಗೆ ಲಾಕ್ ಮಾಡಿತ್ತು. ಹೊರಗೆ ಬರಲು ತಡಕಾಡಿದ ಅವರು ಬಾಗಿಲಿಗೆ ಗುಂಡು ಹಾರಿಸಿ ಹೊರಗೆ ಹೋದರು. ಈ ಪ್ರಕರಣ ಸಂಬಂಧ ಪೊಲೀಸರು ಸದ್ಯ ಏಳು ಜನರನ್ನು ಬಂಧಿಸಲಾಗಿದೆ.

**ಭದ್ರತಾ ಲಾಕ್ ಇದ್ರು ಪ್ರಯೋಜನವಾಗಲಿಲ್ಲ:** ಸ್ಯಾನ್ ರಾಮೋನ್ ಪಿಡಿಯ ಲೆಫ್ಟಿನೆಂಟ್ ಮೈಕ್ ಪಿಸ್ಟೆಲ್ಲೊ ಮಾತನಾಡಿ, ದರೋಡೆಕೋರರು ಒಳಗೆ ಹೋಗಿ ಅಂಗಡಿ ಸುತ್ತುವರೆದರು. ಎಲ್ಲಾ ಆಭರಣಗಳನ್ನು ತೆಗೆದುಕೊಂಡರು. 2023 ರಲ್ಲಿ ನಡೆದ ದರೋಡೆ ಬಳಿಕ ಭದ್ರತಾ ಬಾಗಿಲನ್ನು ನವೀಕರಿಸಲಾಗಿತ್ತು.

ಈ ದರೋಡೆಯನ್ನು ಹಲವು ದಿನಗಳ ಮುಂಚೆಯೇ ಯೋಜಿಸಲಾಗಿತ್ತು. ದರೋಡೆಕೋರರು ಆರು ವಾಹನಗಳಲ್ಲಿ ಬಂದು ಅಂಗಡಿಯಿಂದ ಸುಮಾರು 100 ಅಡಿ ದೂರದಲ್ಲಿರುವ ವಾಲೆಟ್ ಪ್ರದೇಶದಲ್ಲಿ ನಿಲುಗಡೆ ಮಾಡಿದ್ದರು. 20ಕ್ಕೂ ಹೆಚ್ಚು ಜನರು ಈ ದರೋಡೆಯಲ್ಲಿ ಭಾಗಿಯಾಗಿದ್ದರು. ಆದರೆ ಪ್ರತ್ಯಕ್ಷದರ್ಶಿಗಳು ಸುಮಾರು 30 ಜನರಿದ್ದರು ಎಂದು ಹೇಳಿತ್ತಿದ್ದಾರೆಂದು ಮಾಹಿತಿ ನೀಡಿದರು.



- ಕಬ್ಬಿಣದ ಸಲಾಕೆ ಬಳಸಿಕೊಂಡು ಗಾಜು ಹೊಡೆದು ಚಿನ್ನ ಕಳುವು
- ಡ್ರೋನ್ ಕ್ಯಾಮೆರಾ ಬಳಸಿ ಏಳು ಜನರನ್ನು ಬಂಧಿಸಿದ ಪೊಲೀಸರು

**ಕಳ್ಳರ ಪತ್ತೆ ಹಚ್ಚುತ್ತಿರುವುದು ಹೇಗೆ?:** 2023 ರ ಸಂಘಟಿತ ರಿಟೇಲ್ ಕಳ್ಳತನ ಅನುದಾನದಿಂದ ಪಡೆದ ಡ್ರೋನ್ ಕ್ಯಾಮೆರಾ ಬಳಸಿ ದರೋಡೆಕೋರರು ಸ್ಥಳದಿಂದ ಪರಾರಿಯಾಗುವ ದೃಶ್ಯಗಳನ್ನು ಸೆರೆಹಿಡಿಯಲಾಗಿದೆ. ಜೊತೆಗೆ ಶಂಕಿತರು ತಮ್ಮ ಕಾರುಗಳನ್ನು ಬಿಟ್ಟು ಹೋಗುವುದು, ಕಾರು ಹತ್ತುವುದನ್ನು ತೋರಿಸುತ್ತದೆ ಈ ಡ್ರೋನ್ ಸೆರೆ ಹಿಡಿದಿದೆ ಎಂದು ಲೆಫ್ಟಿನೆಂಟ್ ಪಿಸ್ಟೆಲ್ಲೊ ಹೇಳಿದ್ದಾರೆ.

ಇಲ್ಲಿಯವರೆಗೆ, ಓಕ್ಲ್ಯಾಂಡ್ ಮತ್ತು ಹತ್ತಿರದ ಡಬ್ಲಿನ್, ಕ್ಯಾಲಿಫೋರ್ನಿಯಾದಲ್ಲಿ ನಡೆದ ಎರಡು ದಾಳಿಗಳಲ್ಲಿ ಏಳು ಶಂಕಿತರನ್ನು ಬಂಧಿಸಲಾಗಿದೆ. ಬಂಧಿತರೆಲ್ಲರೂ ಓಕ್ಲ್ಯಾಂಡ್‌ನವರು. ಅವರ ವಯಸ್ಸು 17 ರಿಂದ 31 ವರ್ಷಗಳ ನಡುವೆ ಇದೆ. ಇವರು ಬೇ ಏರಿಯಾದಲ್ಲಿ ಇದೇ ರೀತಿಯ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ. ಎರಡು ಬಂದೂಕುಗಳು ಮತ್ತು ಕೆಲವು ಕದ್ದ ಆಭರಣಗಳನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ.

ಕಳವು ಮಾಡಿರುವ ವಾಹನಗಳಿಂದಲೇ ಚಿನ್ನಭಾರಣ ದೋಚಲು ಬಳಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಇಂತಹ ಕೃತ್ಯಗಳು ಇದೇ ಮೊದಲೇನಲ್ಲ, ಆದರೆ, ಸ್ಯಾನ್ ರಾಮೋನ್‌ನಲ್ಲಿ ಇಂತಹ ಪ್ರಕರಣ ಜರುವಗುವುದು ಕಡಿಮೆ. ಸಾಧ್ಯವಾದಷ್ಟು ಬೇಗನೆ ಆರೋಪಿಗಳನ್ನು ಪತ್ತೆ ಹಚ್ಚುತ್ತೇವೆ ಎಂದು ಪೊಲೀಸರು ಹೇಳಿದ್ದಾರೆ.

ಕ್ಯಾಲಿಫೋರ್ನಿಯಾದ ಸ್ಯಾನ್ ರಾಮೋನ್‌ನಲ್ಲಿರುವ ಹೆಲ್ಲರ್ ಜ್ಯುವೆಲರ್ಸ್ ಅಂಗಡಿಯಿಂದ ಸುಮಾರು 1 ಮಿಲಿಯನ್ ಡಾಲರ್ ಮೌಲ್ಯದ ಆಭರಣಗಳನ್ನು ಇಪ್ಪತ್ತಕ್ಕೂ ಹೆಚ್ಚು ಮುಖವಾಡಧಾರಿ ದರೋಡೆಕೋರರು ದೋಚಿದ್ದಾರೆ. ದರೋಡೆಕೋರರು ತಪ್ಪಾಗಿ ಅಂಗಡಿಯೊಳಗೆ ಸಿಕ್ಕಿಹಾಕಿಕೊಂಡರು. ನಂತರ ಗಾಜಿನ ಬಾಗಿಲಿಗೆ ಗುಂಡು ಹಾರಿಸಿ ಪರಾರಿಯಾದರು. ಪೊಲೀಸರು ಏಳು ಜನರನ್ನು ಬಂಧಿಸಿದ್ದಾರೆ. ಅವರೆಲ್ಲರೂ ಓಕ್ಲ್ಯಾಂಡ್‌ನವರು ಎಂದು ಕಾಲಿನ್ ರಾಗ್ ಟ್ವೀಟ್ ಮಾಡಿದ್ದಾರೆ.

## ಮತ್ತೊಂದು ಶಾಕ್ ಕೊಟ್ಟ ಸುಂಕಾಸುರ ಡೊನಾಲ್ಡ್ ಟ್ರಂಪ್

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕ ಹೇರಿಕೆಯನ್ನು ಘೋಷಿಸಿದ್ದಾರೆ. ಅ.1 ರಿಂದ ಬ್ರ್ಯಾಂಡೆಡ್ ಮತ್ತು ಪೇಟೆಂಟ್ ಪಡೆದ ಔಷಧಗಳ ಆಮದಿನ ಮೇಲೆ ಶೇ. 100ರಷ್ಟು ಸುಂಕ ವಿಧಿಸಲಾಗುವುದು ಎಂದು ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಔಷಧಗಳ ಆಮದಿನ ಮೇಲೆ ಶೇ. 100ರಷ್ಟು ಸುಂಕ ವಿಧಿಸುವ ಕಾರ್ಯಕಾರಿ ಆದೇಶಕ್ಕೆ, ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಟ್ರಂಪ್ ಅವರ ಈ ನಿರ್ಧಾರದಿಂದಾಗಿ ಭಾರತದ ಔಷಧ ವಲಯದ ಮೇಲೆ ಗಂಭೀರ ಪರಿಣಾಮಗಳು ಬೀರಬಹುದು ಎಂಬ ಆತಂಕ ಎದುರಾಗಿದೆ. ಆದರೆ ಭಾರತದ ಔಷಧ ವಲಯ ಪರ್ಯಾಯ ಮಾರ್ಗವನ್ನು ಶೋಧಿಸುವ ಕಾರ್ಯ ಈಗಾಗಲೇ ಆರಂಭಿಸಿದೆ.

ಅಡುಗೆಮನೆ ಕಿಚನ್ ಕ್ಯಾಬಿನ್‌ಗಳು, ಸ್ನಾನಗೃಹದ ವ್ಯಾನಿಟಿಗಳ ಮೇಲೆ ಶೇಕಡಾ 50, ಅಪ್ಹೋಲ್ಸ್ಟರ್ಡ್ ಪೀಠೋಪಕರಣಗಳ ಮೇಲೆ ಶೇಕಡಾ 30 ಮತ್ತು ಭಾರೀ ಟ್ರಕ್‌ಗಳ ಮೇಲೆ ಶೇಕಡಾ 25ರಷ್ಟು ಆಮದು ತೆರಿಗೆಯನ್ನು ವಿಧಿಸುವುದಾಗಿ ಅಧ್ಯಕ್ಷ ಡೊನಾಲ್?ಡ ಟ್ರಂಪ್ ಹೇಳಿದ್ದಾರೆ. ಟ್ರೂತ್ ಸೋಶಿಯಲ್‌ನಲ್ಲಿ ಟ್ರಂಪ್, ಅಮೆರಿಕದಲ್ಲಿ ಉತ್ಪಾದನಾ ಘಟಕಗಳನ್ನು ನಿರ್ಮಿಸುತ್ತಿರುವ ಕಂಪನಿಗಳಿಗೆ ಔಷಧ ಸುಂಕಗಳು ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ.




ಇದನ್ನು ಅವರು ಅಭಿವೃದ್ಧಿಶೀಲ ಅಥವಾ ನಿರ್ಮಾಣ ಹಂತ ಎಂದು ವ್ಯಾಖ್ಯಾನಿಸಿದರು. ಅಮೆರಿಕದಲ್ಲಿ ಈಗಾಗಲೇ ಕಾರ್ಖಾನೆಗಳನ್ನು ಹೊಂದಿರುವ ಕಂಪನಿಗಳಿಗೆ ಸುಂಕಗಳು ಹೇಗೆ ಅನ್ವಯಿಸುತ್ತವೆ ಎಂಬುದು ಸ್ಪಷ್ಟವಾಗಿಲ್ಲ. 2024ರಲ್ಲಿ, ಜನಗಣತಿ ಬ್ಯೂರೋ ಪ್ರಕಾರ, ಅಮೆರಿಕ ಸುಮಾರು 233 ಬಿಲಿಯನ್ ಡಾಲರ್ ಔಷಧ ಮತ್ತು ಔಷಧೀಯ ಉತ್ಪನ್ನಗಳನ್ನು ಆಮದು ಮಾಡಿಕೊಂಡಿತು. ಆಗಸ್ಟ್‌ನಲ್ಲಿ ಪ್ರಾರಂಭಿಸಲಾದ ವ್ಯಾಪಾರ ಚೌಕಟ್ಟುಗಳು ಮತ್ತು ಆಮದು ತೆರಿಗೆಗಳೊಂದಿಗೆ ಟ್ರಂಪ್ ಅವರ ಸುಂಕಗಳ ಮೇಲಿನ ಬದ್ಧತೆ ಕೊನೆಗೊಂಡಿಲ್ಲ ಎಂದು ಅವರ ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು ಹೇಳುತ್ತವೆ, ಇದು ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವಾಗ ಸರ್ಕಾರದ ಬಜೆಟ್ ಕೊರತೆಯನ್ನು ಕಡಿಮೆ ಮಾಡಲು ತೆರಿಗೆಗಳು ಸಹಾಯ ಮಾಡುತ್ತವೆ ಎಂಬುದು ಅವರ ನಂಬಿಕೆಯಾಗಿದೆ. ಟ್ರಂಪ್ ಅವರು ಸುಂಕಗಳಿಗೆ ಕಾನೂನು ಸಮರ್ಥನೆಯನ್ನು ಒದಗಿಸದಿದ್ದರೂ, ಆಮದು ಮಾಡಿಕೊಂಡ ಅಡುಗೆಮನೆ ಕ್ಯಾಬಿನ್‌ಗಳು ಮತ್ತು ಸೋಫಾಗಳ ಮೇಲಿನ ತೆರಿಗೆಗಳು ರಾಷ್ಟ್ರೀಯ ಭದ್ರತೆ ಮತ್ತು ಇತರ ಕಾರಣಗಳಿಗಾಗಿ ಅಗತ್ಯವಿದೆ ಎಂದು ಟ್ರೂತ್ ಸೋಷಿಯಲ್ ಮೀಡಿಯಾದಲ್ಲಿ ಟ್ರಂಪ್ ಅವರು ಹೇಳುವ ಮೂಲಕ ಅವರು ಕಮಾಂಡರ್-ಇನ್-ಚೀಫ್ ಪಾತ್ರದ ಮಿತಿಗಳನ್ನು ವಿಸ್ತರಿಸಿದಂತೆ ಕಂಡುಬಂದಿದೆ.

**ಸುಂಕ ನಿಯಮ ಏನು? :** ಔಷಧಗಳ ಆಮದು ಮೇಲೆ ಶೇ. 100ರಷ್ಟು ಸುಂಕ ವಿಧಿಸಿರುವ ಡೊನಾಲ್ಡ್ ಟ್ರಂಪ್, ಕೆಲವು ವಿನಾಯಿತಿಗಳನ್ನೂ ಘೋಷಿಸಿದ್ದಾರೆ. ಅದರಲ್ಲಿ ಅತ್ಯಂತ ಪ್ರಮುಖವಾಗಿ ಒಂದು ವೇಳೆ ವಿದೇಶಿ ಕಂಪನಿಗಳು ಅಮೆರಿಕದಲ್ಲಿ ತಮ್ಮ ಔಷಧ ತಯಾರಿಕಾ ಘಟಕಗಳನ್ನು ಸ್ಥಾಪಿಸಿದರೆ, ಅವುಗಳಿಗೆ ಸುಂಕದಿಂದ ಸಂಪೂರ್ಣವಾಗಿ ವಿನಾಯತಿ ನೀಡಲಾಗುವುದು. ಔಷಧ ತಯಾರಿಕಾ ಕಂಪನಿಗಳು, ವಿದೇಶದಲ್ಲಿ ಕಾರ್ಖಾನೆಗಳನ್ನು ನಡೆಸುವ ಬದಲು, ಅಮೆರಿಕದಲ್ಲೇ ತಮ್ಮ ಕಾರ್ಯಚರಣೆ ಆರಂಭಿಸುವಂತೆ ಡೊನಾಲ್ಡ್ ಟ್ರಂಪ್ ಒತ್ತಡ ಹೇರುತ್ತಿರುವುದು ಸ್ಪಷ್ಟವಾಗಿದೆ. ಏಕೆಂದರೆ ಅಮೆರಿಕದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುವುದರಿಂದ, ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿಗೆ ಸಹಾಯವಾಗುತ್ತದೆ ಎಂಬುದು ಟ್ರಂಪ್ ಅವರ ಆಶಾಭಾವನೆಯಾಗಿದೆ.

## ವ್ಯಾಟಿಕನ್ ಸಿಟಿ ಥೀಮ್‌ನಲ್ಲಿ ದುರ್ಗಾ ಪೂಜೆಗೆ ವಿಎಚ್‌ಪಿ ಆಕ್ರೋಶ

**ರಾಂಚಿ:** ರಾಂಚಿಯಲ್ಲಿ ವ್ಯಾಟಿಕನ್ ನಗರ ಎಂಬ ಥೀಮ್‌ನೊಂದಿಗೆ ನಡೆದ ದುರ್ಗಾ ಪೂಜಾ ಪೆಂಡಾಲ್, ವಿಶ್ವ ಹಿಂದೂ ಪರಿಷತ್ ಯನ್ನು ಕೆರಳಿಸಿದೆ. ಇದು ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವುಂಟುಮಾಡಲು ಮತಾಂತರವನ್ನು ಪ್ರೋತ್ಸಾಹಿಸಲು ಮಾಡಲಾಗಿದೆ ಎಂದು ಆರೋಪಿಸಿದೆ. ಆದರೆ ಆಯೋಜಕರು ಇದನ್ನು ತಿರಸ್ಕರಿಸಿದ್ದಾರೆ.

ಯುರೋಪ್‌ನಲ್ಲಿರುವ ವ್ಯಾಟಿಕನ್ ನಗರವು ವಿಶ್ವದ ಅತ್ಯಂತ ಚಿಕ್ಕ ಸಾರ್ವಭೌಮ ರಾಜ್ಯ, ರೋಮನ್ ಕ್ಯಾಥೋಲಿಕ್ ಚರ್ಚ್‌ನ ಕೇಂದ್ರವಾಗಿದೆ. ವಿಎಚ್‌ಪಿ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್ ಅವರು ವ್ಯಾಟಿಕನ್ ನಗರ ಎಂಬ ಥೀಮ್‌ನಲ್ಲಿರುವ ದುರ್ಗಾ ಪೂಜೆ ಬಗ್ಗೆ ತಮ್ಮ ವಿರೋಧವನ್ನು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ. ಹಿಂದೂಗಳ ಧಾರ್ಮಿಕ ಭಾವನೆಗಳನ್ನು ನೋಯಿಸುವ ಉದ್ದೇಶದಿಂದ ಮತ್ತು ಧಾರ್ಮಿಕ ಮತಾಂತರವನ್ನು ಉತ್ತೇಜಿಸುವ ಗುರಿಯೊಂದಿಗೆ ಇದನ್ನು ಮಾಡಲಾಗಿದೆ.




ಈ ದುರ್ಗಾ ಪೂಜಾ ಪೆಂಡಾಲ್‌ನ ಆಯೋಜನಾ ಸಮಿತಿಯು ಜಾತ್ಯತೀತತೆಯಲ್ಲಿ ಅಷ್ಟೊಂದು ಆಸಕ್ತಿ ಹೊಂದಿದ್ದರೆ, ಚರ್ಚ್ ಅಥವಾ ರಾಂಚಿಯ ಮದರಸಾಗಳಲ್ಲಿ ಆಯೋಜಿಸುವ ಯಾವುದೇ ಕಾರ್ಯಕ್ರಮದಲ್ಲಿ ಹಿಂದೂ ದೇವರು ಅಥವಾ ದೇವತೆಯ ಛಾಯಾಚಿತ್ರವನ್ನು ಪ್ರದರ್ಶಿಸಲು ನಾನು ಅವರನ್ನು ಕೇಳುತ್ತೇನೆ ಎಂದು ಬನ್ಸಾಲ್ ಪಿಟಿಐಗೆ ತಿಳಿಸಿದರು. ವಿಎಚ್‌ಪಿ ಜಾರ್ಖಂಡ್ ಘಟಕವು ಶೀಘ್ರದಲ್ಲೇ ಈ ಬಗ್ಗೆ ಬಲವಾದ ನಿರ್ಧಾರ ತೆಗೆದುಕೊಳ್ಳಲಿದೆ. ಧಾರ್ಮಿಕ ಭಾವನೆಗಳನ್ನು ಗೌರವಿಸುವಂತೆ, ಪಂಗಡದಿಂದ ಕ್ರಿಶ್ಚಿಯನ್ ಚಿಹ್ನೆಗಳು, ಛಾಯಾಚಿತ್ರಗಳನ್ನು ತೆಗೆದುಹಾಕುವಂತೆ ನಾವು ಸಂಘಟಕರಿಗೆ ಮನವಿ ಮಾಡಲು ಬಯಸುತ್ತೇವೆ ಎಂದು ಬನ್ಸಾಲ್ ಹೇಳಿದರು.

**ಪೂಜಾ ಮಂಟಪದ ಪ್ರವೇಶದ್ವಾರದಲ್ಲಿ ಕ್ರಿಶ್ಚಿಯನ್ ಧರ್ಮದ ಧಾರ್ಮಿಕ ಚಿಹ್ನೆಗಳನ್ನು ಇರಿಸಲಾಗಿದೆ ಮತ್ತು ಅದರೊಳಗೆ ಮೇರಿ ಮಾತೆ, ಇತರ ಕ್ರಿಶ್ಚಿಯನ್ ಪಾತ್ರಗಳ ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದೆ ಎಂದರು.**

## ಮತದಾರರ ಖರೀದಿಗೆ ಎನ್‌ಡಿಎ ಯತ್ನ: ಪ್ರಿಯಾಂಕಾ ಆರೋಪ

**ಪಟ್ನಾ:** ಬಿಜೆಪಿ ನೇತೃತ್ವದ ಎನ್‌ಡಿಎ ನೀಡುತ್ತಿರುವ ಕೊಡುಗೆಗಳಿಗೆ ಮರುಳಾಗಬೇಡಿ, ಅವರಿಗೆ ನಿಮ್ಮ ಮತದ ಮೇಲಷ್ಟೇ ಆಸಕ್ತಿಯಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಶುಕ್ರವಾರ ಆರೋಪಿಸಿದರು. ಬಿಹಾರ ಕಾಂಗ್ರೆಸ್ ಸಮಿತಿಯ ಕೇಂದ್ರ ಕಚೇರಿಯಲ್ಲಿ ನಡೆದ ಮಹಿಳಾ ಸಂವಾದದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಿಜವಾದ ಉದ್ದೇಶಗಳನ್ನು ಅರ್ಥಮಾಡಿಕೊಂಡು, ಜಾಗೃತರಾಗಿರಿ ಎಂದು ಕರೆ ನೀಡಿದರು.

ಚುನಾವಣೆ ಸಂದರ್ಭದಲ್ಲಿ ಕೊಡುಗೆಗಳನ್ನು ನೀಡುವ ಮೂಲಕ ನಿಮ್ಮನ್ನು ವಂಚಿಸಲು ಎನ್‌ಡಿಎ ಯತ್ನಿಸುತ್ತಿದೆ. ಆದರೆ ಕಾಂಗ್ರೆಸ್ ಪಕ್ಷ ಮಹಿಳೆಯರಿಗೆ ಸದಾ ಗೌರವ ನೀಡುತ್ತಾ ಬಂದಿದೆ ಎಂದು ಅವರು ತಿಳಿಸಿದರು. ಮುಖ್ಯಮಂತ್ರಿ ಮಹಿಳಾ ರೋಜ್‌ಗಾರ್ ಯೋಜನೆಯಡಿ ಪ್ರಧಾನಿ ನರೇಂದ್ರ ಮೋದಿ ಅವರು 75 ಲಕ್ಷ ಮಹಿಳೆಯರಿಗೆ ತಲಾ 10,000ದಂತೆ 7,500 ಕೋಟಿ ವರ್ಗಾಯಿಸಿದ್ದನ್ನು ಉಲ್ಲೇಖಿಸಿದ ಪ್ರಿಯಾಂಕಾ, 'ಚುನಾವಣೆ ಬಂತೆಂದು ಅವರು ಇಷ್ಟೆಲ್ಲ ಕೊಡುಗೆಗಳನ್ನು ನೀಡುತ್ತಿದ್ದಾರೆ. ಆದರೆ ಪ್ರತಿ ತಿಂಗಳು ಈ ದೇಣಿಗೆ ಮುಂದುವರಿಯುತ್ತದೆ ಎಂಬ ಭರವಸೆಯನ್ನು ಅವರು ನೀಡಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ ಎಂದರು.

ಚುನಾವಣೆ ಸಮೀಪಿಸುತ್ತಿರುವಾಗ ಹಣ ನೀಡುತ್ತಿದ್ದಾರೆ ಅಂದರೆ ಅವರ ಕಣ್ಣು ನಿಮ್ಮ ಮತಗಳ ಮೇಲಷ್ಟೇ ಇದೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಅವರಿಗೆ ನಿಮ್ಮ ಗೌರವ, ಸುರಕ್ಷತೆಗಿಂತೆ ಮತವೇ ಮುಖ್ಯ. 10 ವರ್ಷಗಳಲ್ಲಿ ಬಿಹಾರದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿರುವುದೇ ಅದಕ್ಕೆ ನಿದರ್ಶನ' ಎಂದು ದೂರಿದರು.

ಕಾಂಗ್ರೆಸ್ ಪಕ್ಷವು ಮಹಿಳೆಯ ಗೌರವ ಮತ್ತು ಹಿತವನ್ನು ಬಯಸುತ್ತದೆ. ಭೂರಹಿತ ಕುಟುಂಬಗಳಿಗೆ ಜಮೀನು ನೀಡುವ ಭರವಸೆಯನ್ನು ನಾವು ನೀಡಿದ್ದೇವೆ. ಅಂತಹ ಜಮೀನನ್ನು ಕುಟುಂಬದ ಮಹಿಳಾ ಸದಸ್ಯರ ಹೆಸರಿನಲ್ಲಿ ನೋಂದಾಯಿಸಬೇಕು ಎಂದು ನಾನು ಪ್ರಸ್ತಾಪಿಸುತ್ತೇನೆ ಎಂದು ಅವರು ವಿವರಿಸಿದರು.


## ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರ ಅಂತೆ-ಕಂತೆ

### ನರೇಂದ್ರ ಮೋದಿ-ವ್ಲಾಡಿಮಿರ್ ಪುಟಿನ್ ನಿತ್ಯವೂ ಫೋನ್‌ನಲ್ಲಿ ಮಾತಾಡ್ತಾರೆ; ಟ್ರಂಪ್ ಭಯ ಕಾಡುತ್ತಿದೆ ಎಂದ ನ್ಯಾಟೋ ಮುಖ್ಯಸ್ಥ!

**ವಾಷಿಂಗ್ಟನ್ ಡಿಸಿ:** ರಷ್ಯಾದ ತೈಲ ಖರೀದಿಗಾಗಿ ಭಾರತದ ಮೇಲೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಸುಂಕಗಳು, ಮಾಸ್ಕೋದ ಮೇಲೆ ದೊಡ್ಡ ಪರಿಣಾಮ ಬೀರುತ್ತಿವೆ ಎಂದು ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ಇದೇ ವಿಚಾರವಾಗಿ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪದೇ ಪದೇ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಕರೆ ಮಾಡಿ, ಮುಂದಿನ ರಣತಂತ್ರದ ಕುರಿತು ಪ್ರಶ್ನೆ ಕೇಳುತ್ತಿದ್ದಾರೆ ಎಂದೂ ಮಾರ್ಕ್ ರುಟ್ಟೆ ಪ್ರತಿಪಾದಿಸಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ಘೋಷಣೆ ಮಾಡಿದ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅವರು ವ್ಲಾಡಿಮಿರ್ ಪುಟಿನ್ ಅವರಿಗೆ ಉಕ್ರೇನ್ ಕುರಿತ ಕಾರ್ಯತಂತ್ರವನ್ನು ವಿವರಿಸಲು ಒತ್ತಾಯ ಮಾಡುತ್ತಿದ್ದಾರೆ. ಅಂದರೆ ಟ್ರಂಪ್ ಅವರ ಸುಂಕಗಳು ಕೆಲಸ ಮಾಡಿವೆ ಎಂದರ್ಥ ಎಂದು ನ್ಯಾಟೋ ಮುಖ್ಯಸ್ಥ ಹೇಳಿದ್ದಾರೆ.

ಭಾರತದ ಮೇಲಿನ ಅಮೆರಿಕದ ಸುಂಕಗಳು ರಷ್ಯಾದ ಮೇಲೆ ಪರಿಣಾಮ ಬೀರುತ್ತಿವೆ. ಏಕೆಂದರೆ ನವದೆಹಲಿಯು ನಿರಂತರವಾಗಿ ಮಾಸ್ಕೋ ಜೊತೆ ದೂರವಾಣಿಯಲ್ಲಿ ಮಾತನಾಡುತ್ತಿದ್ದು, ಉಕ್ರೇನ್ ಕಾರ್ಯತಂತ್ರದ ಕುರಿತು ಸ್ಪಷ್ಟನೆ ನೀಡುವಂತೆ ಒತ್ತಡ ಹೇರುತ್ತಿದೆ. ಹೀಗಾಗಿ ಡೊನಾಲ್ಡ್ ಟ್ರಂಪ್ ಅವರ ಊಹೆ ಸರಿಯಾಗಿದೆ ಎಂದು ಮಾರ್ಕ್ ರುಟ್ಟೆ ಅಮೆರಿಕದ ಅಧ್ಯಕ್ಷರನ್ನು ಕೊಂಡಾಡಿದ್ದಾರೆ.



**ಹೀಗಂತಾರೆ ನ್ಯಾಟೋ ಮುಖ್ಯಸ್ಥರು:** ಸಿಎನ್‌ಎನ್ ನ್ಯೂಸ್ ಜೊತೆ ಮಾತನಾಡಿರವ ನ್ಯಾಟೋ ಮುಖ್ಯಸ್ಥರು, ಉಕ್ರೇನ್ ಯುದ್ಧವನ್ನು ನಿಲ್ಲಿಸುವಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಾಮಾಣಿಕ ಪ್ರಯತ್ನಗಳು ಖಂಡಿತವಾಗಿಯೂ ಯಶಸ್ವಿಯಾಗುತ್ತವೆ. ಭಾರತದ ಮೇಲಿನ ಸುಂಕಗಳು ಈ ವಿಷಯದಲ್ಲಿ ಟ್ರಂಪ್ ಸರಿಯಾಗಿದ್ದಾರೆ ಎಂಬದನ್ನು ಸಾಬೀತುಪಡಿಸಿವೆ ಎಂದು ಹೇಳಿದರು.

**ನ್ಯಾಟೋ ರಾಷ್ಟ್ರಗಳ ಮೇಲೆ ಟ್ರಂಪ್ ಒತ್ತಡ**

**ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವನ್ನು ತಡೆಗಟ್ಟಲು ಭಾರತ-ಚೀನಾ ಮೇಲೆ ಹೆಚ್ಚುವರಿ ಸುಂಕ ವಿಧಿಸುವಂತೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ್ಯಾಟೋ ಸದಸ್ಯ ರಾಷ್ಟ್ರಗಳ ಮೇಲೆ ಒತ್ತಡ ಹೇರಿದ್ದಾರೆ. ಉಕ್ರೇನ್ ಯುದ್ಧ ನಿಲ್ಲಿಸಲು ನಮಗಿರುವುದು ಇದೊಂದೇ ಮಾರ್ಗ ಎಂದು ಅಮೆರಿಕ ಅಧ್ಯಕ್ಷರು ಹೇಳಿದ್ದರು. ಒಟ್ಟಿನಲ್ಲಿ, ಭಾರತ-ರಷ್ಯಾ ಕಚ್ಚಾತೈಲ ಸಂಬಂಧಕ್ಕೆ ಸಂಬಂಧಿಸಿದಂತೆ ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅನಗತ್ಯ ಹೇಳಿಕೆ ನೀಡಿದ್ದು, ಈ ಕುರಿತು ನವದೆಹಲಿ ಮತ್ತು ಮಾಸ್ಕೋದ ತೀಕ್ಷ್ಣ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಲಾಗುತ್ತಿದೆ.**

ಸುಂಕ ಸಮರದ ಭಾಗವಾಗಿ ಭಾರತದ ಸರಕುಗಳ ಮೇಲೆ ಶೇ. 25ರಷ್ಟು ಸುಂಕ ಹೇರಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದೊಂದಿಗೆ ಕಚ್ಚಾತೈಲ ವ್ಯಾಪಾರ ಮಾಡುತ್ತಿರುವ ಕಾರಣಕ್ಕೆ ಶೇ. 25ರಷ್ಟು ಹೆಚ್ಚುವರಿ ದಂಡನಾತ್ಮಕ ಸುಂಕವನ್ನೂ ವಿಧಿಸಿದ್ದಾರೆ. ಅಂದರೆ ಈಗ ಒಟ್ಟು ಶೇ. 50ರಷ್ಟು ಸುಂಕದೊಂದಿಗೆ ಅಮೆರಿಕದೊಂದಿಗೆ ವ್ಯಾಪಾರ ಮಾಡುತ್ತಿದೆ.

ಆದರೆ ದಂಡನಾತ್ಮಕ ಸುಂಕದ ಹೊರತಾಗಿಯೂ ಭಾರತವು ರಷ್ಯಾದೊಂದಿಗಿನ ತೈಲ ಸಂಬಂಧವನ್ನು ಮುರಿದುಕೊಳ್ಳುವುದಿಲ್ಲ ಎಂದು ಅಮೆರಿಕಕ್ಕೆ ಸ್ಪಷ್ಟಪಡಿಸಿದೆ. ಭಾರತವು ಅಮೆರಿಕ ಹೇರಿರುವ ಸುಂಕ ಸಮರವನ್ನು ಅತ್ಯಂತ ದಿಟ್ಟವಾಗಿ ಎದುರಿಸುತ್ತಿದೆ. ಅಲ್ಲದೇ ಈ ಸುಂಕ ಸಮರವು ಭಾರತ, ರಷ್ಯಾ, ಚೀನಾವನ್ನು ಒಟ್ಟಗೂಡಿಸುತ್ತಿದೆ.

**ಮೋದಿ-ಪುಟಿನ್ ಮಾತುಕತೆ:** ಕಳೆದ ಸೆ.17ರಂದು 75ನೇ ಜನ್ಮದಿನ ಆಚರಿಸಿಕೊಂಡ ಪ್ರಧಾನಿ ಮೋದಿ ಅವರಿಗೆ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ದೂರವಾಣಿ ಕರೆ ಮಾಡಿ ಶುಭಾಶಯ ತಿಳಿಸಿದ್ದರು. ಇದು ಪ್ರಧಾನಿ ಮೋದಿ ಮತ್ತು ಪುಟಿನ್ ಅವರ ನಡುವಿನ ಕೊನೆಯ ದೂರವಾಣಿ ಸಂಭಾಷಣೆಯಾಗಿದೆ. ಈ ವೇಳೆ ಪ್ರಧಾನಿ ಮೋದಿ ಅವರು ಪುಟಿನ್ ಅವರಿಗೆ ಉಕ್ರೇನ್ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಹಿಡಿಯುವ ಪ್ರಯತ್ನಗಳಿಗೆ ಭಾರತದ ಬಲವಾದ ಬೆಂಬಲವನ್ನು ಪುನರುಚ್ಚಿಸಿದರು.

ಇದಕ್ಕೂ ಮೊದಲು ಅಂದರೆ ಸೆ.1ರಂದು ಚೀನಾದ ಟಿಯಾಂಜಿನ್ ನಗರದಲ್ಲಿ ನಡೆದ ಶಾಂಘೈ ಸಹಕಾರ ಒಕ್ಕೂಟ (ಎಸ್‌ಸಿಒ)ದ ಶೃಂಗಸಭೆಯಲ್ಲಿ, ಪ್ರಧಾನಿ ಮೋದಿ, ವ್ಲಾಡಿಮಿರ್ ಪುಟಿನ್ ದ್ವಿಪಕ್ಷೀಯ ಸಭೆ ನಡೆಸಿದ್ದರು. ಅಲ್ಲದೇ ಒಂದೇ ಕಾರಿನಲ್ಲಿ ಸುಮಾರು ಒಂದು ಗಂಟೆಗಳ ಕಾಲ ಪ್ರಯಾಣ ಮಾಡಿ ರಹಸ್ಯ ಮಾತುಕತೆಯನ್ನೂ ನಡೆಸಿದ್ದರು. ಎಸ್‌ಸಿಒ ಸಭೆ ಭಾರತ, ರಷ್ಯಾ ಮತ್ತು ಚೀನಾವನ್ನು ಹತ್ತಿರಕ್ಕೆ ತಂದಿದ್ದನ್ನು ಇಡೀ ಜಗತ್ತೇ ಗಮನಿಸಿದೆ. ಆದರೆ ನ್ಯಾಟೋ ಮುಖ್ಯಸ್ಥರು ಈ ದೇಶಗಳ ಒಗ್ಗಟ್ಟನ್ನು ಡೊನಾಲ್ಡ್ ಟ್ರಂಪ್ ಅವರ ಸುಂಕ ಬೆದರಿಕೆಗಳೊಂದಿಗೆ ಜೋಡಿಸುತ್ತಿರುವುದು ಹಾಸ್ಯಾಸ್ಪದ ಆಗಿದೆ. ಮಾರ್ಕ್ ರುಟ್ಟೆ ಅವರು ಈ ಹಿಂದೆ, ರಷ್ಯಾದಿಂದ ಕಚ್ಚತೈಲ ಖರೀದಿಸುವ ಭಾರತ, ಚೀನಾ ಮತ್ತು ಬ್ರೆಜಿಲ್‌ಗೆ ಸಂಕಷ್ಟ ಕಾದಿದೆ ಎಂದು ಎಚ್ಚರಿಸಿದ್ದರು.

## ಮಿನಿ ನ್ಯೂಸ್

### ಐ ಲವ್ ಮಹಮ್ಮದ್ ಜಾಥಾಗೆ ಸಿಗದ ಅನುಮತಿ | ಹಿಂಸಾಚಾರ: ಹಲವರ ಬಂಧನ

**ಬರೇಲಿ:** ಐ ಲವ್ ಮಹಮದ್ ಪ್ರದರ್ಶನ ಜಾಥಾವನ್ನು ಕೊನೆ ಕ್ಷಣದಲ್ಲಿ ಮುಂದೂಡಿದ್ದರಿಂದ ಬರೇಲಿಯಲ್ಲಿ ಶುಕ್ರವಾರ ಹಿಂಸಾಚಾರ ಭುಗಿಲೆದ್ದಿತು. ನಗರದ ಹೃದಯ ಭಾಗದಲ್ಲಿರುವ ಮಸೀದಿಯ ಬಳಿ ಜಾಥಾಗಾಗಿ ಜಮಾಯಿಸಿದ್ದ ಅಸಂಖ್ಯಾತ ಜನರು ಆಕ್ರೋಶಿತರಾಗಿ ಪೊಲೀಸರ ಮೇಲೆ ಕಲ್ಲು ತೂರಿದರು. ಕೆಲವು ಅಂಗಡಿಗಳನ್ನು ಧ್ವಂಸಗೊಳಿಸಿದರು. ಕಾಲ್ತುಳಿತದಂತಹ ಪರಿಸ್ಥಿತಿಯೂ ನಿರ್ಮಾಣಗೊಂಡಿತ್ತು. ಉದ್ರಿಕ್ತ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಬೀಸಿದರು. ಹಿಂಸಾಚಾರದಲ್ಲಿ ಗಾಯಗೊಂಡವರ ಸಂಖ್ಯೆ ಗೊತ್ತಾಗಿಲ್ಲ. ಗಲಭೆಯ ನಂತರ ನಗರದ ಬಹುತೇಕ ಕಡೆ ಅಂಗಡಿಗಳನ್ನು ವರ್ತಕರು ಸ್ವಯಂಪ್ರೇರಿತರಾಗಿ ಮುಚ್ಚಿದರು ಎಂದು ಸ್ಥಳೀಯರು ತಿಳಿಸಿದ್ದಾರೆ.

ಏಕಾಏಕಿ ಬ್ಯಾನರ್‌ಗಳೊಂದಿಗೆ ಜನಸಮೂಹ ರಸ್ತೆಯಲ್ಲಿ ಮುನ್ನುಗ್ಗಿ ಬಂದಿತು. ತಡೆಯಲು ಮುಂದಾದ ಪೊಲೀಸರ ಮೇಲೆ ಉದ್ರಿಕ್ತರು ಕಲ್ಲು ತೂರಿದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ ಪೂರ್ವಯೋಜಿತ ಕೃತ್ಯ ಎಂಬುದು ಗೊತ್ತಾಗುತ್ತಿದೆ. ಘಟನೆಯ ವಿಡಿಯೊ, ಚಿತ್ರ ಬಳಸಿ ದುಷ್ಕೃತ್ಯದಲ್ಲಿ ಭಾಗಿಯಾದವರನ್ನು ಗುರುತಿಸಿ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಡಿಐಜಿ ಅಜಯ್ ಕುಮಾರ್ ಸಾಗ್ನಿ ತಿಳಿಸಿದರು.

**ಪ್ರದರ್ಶನಕ್ಕೆ ಕರೆ ನೀಡಿದ್ದ ತೌಕೀರ್:** ಸ್ಥಳೀಯ ಧರ್ಮಗುರು ಹಾಗೂ ಇತ್ತೇಹಾದ್-ಎ-ಮಿಲತ್ ಕೌನ್ಸಿಲ್‌ನ ಮುಖ್ಯಸ್ಥ ಮೌಲಾನಾ ತೌಕೀರ್ ರಜಾ ಖಾನ್ ಅವರು 'ಐ ಲವ್ ಮಹಮ್ಮದ್' ಅಭಿಯಾನ ಬೆಂಬಲಿಸುವ ಪ್ರದರ್ಶನ ಮೆರವಣಿಗೆ ಆಯೋಜಿಸಿದ್ದರು. ಜಾಥಾ ಆರಂಭಕ್ಕೂ ಕೆಲ ಕ್ಷಣಗಳಿಗೆ ಮುನ್ನ ಮುಂದೂಡಿದ್ದರಿಂದ ಬೃಹತ್ ಜನಸಮೂಹ ಮತ್ತು ಪೊಲೀಸರ ನಡುವೆ ಮಸೀದಿ ಮುಂಭಾಗ ಘರ್ಷಣೆಗೆ ಕಾರಣವಾಯಿತು ಎನ್ನಲಾಗಿದೆ.

### ವಾಂಗ್‌ಚುಕ್ ಒಡೆತನದ ಸರ್ಕಾರೇತರ ಸಂಸ್ಥೆ ಪರವಾನಿಗಿ ರದ್ದು

**ನವದೆಹಲಿ:** ಲಡಾಖ್‌ನಲ್ಲಿ ಹಿಂಸಾಚಾರ ನಡೆದ ಬೆನ್ನಲ್ಲೇ ಕೇಂದ್ರ ಗೃಹ ಸಚಿವಾಲಯ ಸೋನಮ್ ವಾಂಗ್‌ಚುಕ್ ಅವರ ಸರ್ಕಾರೇತರ ಸಂಸ್ಥೆ ಲಡಾಖ್ ವಿದ್ಯಾರ್ಥಿಗಳ ಲಡಾಖ್ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಳವಳಿಯ ಪರವಾನಗಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿದೆ. ನಾಲ್ವರು ಸಾವನ್ನಪ್ಪಿ ಇತರ ಅನೇಕರು ಗಾಯಗೊಂಡ ನಂತರ ಕೇಂದ್ರ ಸರ್ಕಾರವು ವಿದೇಶಿ ನಿಧಿಯ ನಿಯಮಗಳನ್ನು ಪದೇ ಪದೇ ಉಲ್ಲಂಘಿಸಿದ್ದಕ್ಕೆ ಪರವಾನಗಿ ರದ್ದು ಮಾಡಿದೆ. ವಾಂಗ್‌ಚುಕ್ ಅವರ ವೈಯಕ್ತಿಕ ಮತ್ತು ಜಂಟಿ ಖಾತೆಗಳಲ್ಲಿ ಹಣವನ್ನು ಸ್ವೀಕರಿಸಲಾಗಿದ್ದು ಇದು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ -2010 ಉಲ್ಲಂಘನೆಯಾಗಿದೆ. 2021 ಮತ್ತು 2024ರ ನಡುವೆ ಅವರ ಎನ್‌ಜಿಒ ವಿದೇಶದಿಂದ ಕೋಟ್ಯಂತರ ರೂಪಾಯಿಗಳನ್ನು ಸ್ವೀಕರಿಸಿದೆ. ವಿದೇಶದಿಂದ ಬಂದ ಹಣವನ್ನು ಅಪರಿಚಿತ ಸಂಸ್ಥೆಗಳಿಗೆ ಕಳುಹಿಸಲಾಗಿದೆ ಎಂದು ಅದು ಹೇಳಿದೆ.

59 ವರ್ಷ ವಯಸ್ಸಿನ ಸೋನಮ್ ವಾಂಗ್‌ಚುಕ್ 9 ಖಾತೆಗಳನ್ನು ಹೊಂದಿದ್ದು ಅವುಗಳಲ್ಲಿ 8 ಖಾತೆಗಳನ್ನು ಘೋಷಣೆ ಮಾಡಿಲ್ಲ. ಈ ಎಂಟರ ಪೈಕಿ ಹಲವು ಖಾತೆಗಳಲ್ಲಿ ಭಾರಿ ಪ್ರಮಾಣದ ವಿದೇಶಿ ಹಣ ರವಾನೆಯಾಗಿದೆ. ವಾಂಗ್‌ಚುಕ್ 2021 ಮತ್ತು 2024 ರ ನಡುವೆ ತಮ್ಮ ವೈಯಕ್ತಿಕ ಖಾತೆಯಿಂದ ವಿದೇಶಗಳಿಗೆ ಸುಮಾರು 2.3 ಕೋಟಿ ರೂ. ಗಳನ್ನು ಕಳುಹಿಸಿದ್ದಾರೆ ಎಂದು ಉಲ್ಲೇಖಿಸಿದೆ. ಈ ವಿಷಯದಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಕೂಡ ತನಿಖೆ ನಡೆಸುವ ಸಾಧ್ಯತೆಯಿದೆ. ಪಾಕಿಸ್ತಾನಕ್ಕೆ ಹೋಗಿ ಬಂದಿರುವ ವಾಂಗ್‌ಚುಕ್ ವಿರುದ್ಧ ಸಿಬಿಐ ಸಹ ಪ್ರಾಥಮಿಕ ತನಿಖೆ ಆರಂಭಿಸಿದೆ. ಪ್ರತ್ಯೇಕ ರಾಜ್ಯಸ್ಥಾನಮಾನಕ್ಕೆ ಆಗ್ರಹಿಸಿ ಸೋನಮ್ ವಾಂಗ್‌ಚುಕ್ ಪ್ರತಿಭಟನೆ ನಡೆಸುತ್ತಿದ್ದರು. ಈ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿ ನಾಲ್ವರು ಮೃತಪಟ್ಟಿದ್ದರು. 40 ಪೊಲೀಸ್ ಸಿಬ್ಬಂದಿ ಸೇರಿದಂತೆ 80 ಜನರು ಗಾಯಗೊಂಡರು. ಈ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಲು ವಾಂಗ್‌ಚುಕ್ ನೀಡಿದ ಹೇಳಿಕೆಯೇ ಕಾರಣ ಎಂದು ಕೇಂದ್ರ ಗೃಹಸಚಿವಾಲಯ ಹೇಳಿದೆ.

### ಶಿಕ್ಷಕಿ ಮೇಲೆ ಆಸಿಡ್ ಎರಚಿದವನ ಕಾಲಿಗೆ ಪೊಲೀಸರಿಂದ ಗುಡೇಟು

**ಸಂಭಾಲ್:** ಉತ್ತರ ಪ್ರದೇಶದಲ್ಲಿ ಶಿಕ್ಷಕಿಯೊಬ್ಬರ ಮೇಲೆ ಆಸಿಡ್ ಎರಚಿದ ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ. ಬಂಧಿತ ಆರೋಪಿಯನ್ನು ಅಮ್ರೋಹಾ ಜಿಲ್ಲೆಯ ಗಜ್ರೌಲಾ ಪೊಲೀಸ್ ಠಾಣೆ ಪ್ರದೇಶದ ಟಿಗ್ರಿ ಗ್ರಾಮದ ನಿವಾಸಿ ನಿಶು ತಿವಾರಿ (30) ಎಂದು ಗುರುತಿಸಲಾಗಿದೆ. ಸೆಪ್ಟೆಂಬರ್ 23 ರಂದು, ನಖಾಸಾ ಪೊಲೀಸ್ ಠಾಣೆ ಪ್ರದೇಶದಲ್ಲಿ, 22 ವರ್ಷದ ಶಿಕ್ಷಕಿಯೊಬ್ಬರು ಶಾಲೆಯಿಂದ ಮನೆಗೆ ಹಿಂತಿರುಗುತ್ತಿದ್ದಾಗ, ಆರೋಪಿಯು ಸ್ಕೂಟರ್ ಮೇಲೆ ಬಂದು ದೇಹಪಾ ಗ್ರಾಮದ ಬಳಿ ಆಕೆಯ ಮುಖದ ಮೇಲೆ ಆಸಿಡ್ ಎರಚಿದ್ದಾನೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಕೃಷ್ಣಕುಮಾರ್ ತಿಳಿಸಿದ್ದಾರೆ.

ದಾಳಿಯಲ್ಲಿ ಶಿಕ್ಷಕಿಗೆ ಶೇ. 20 ರಿಂದ 30 ರಷ್ಟು ಸುಟ್ಟ ಗಾಯಗಳಾಗಿವೆ. ಮಹಿಳೆಯನ್ನು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಮತ್ತು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಕಾರ್ಯಪ್ರವೃತ್ತರಾಗಿದ್ದಾರೆ ಎಂದು ಎಸ್ಪಿ ಹೇಳಿದ್ದಾರೆ. ತಡರಾತ್ರಿ ಕಲ್ಯಾಣಪುರ ಗ್ರಾಮದ ಬಳಿ ಸ್ಕೂಟರ್ ಸವಾರಿ ಮಾಡುತ್ತಿದ್ದ ಆರೋಪಿಯನ್ನು ನಖಾಸಾ ಪೊಲೀಸರು ತಡೆದಾಗ, ಅವರ ಮೇಲೆ ಗುಂಡು ಹಾರಿಸಿದರು ಎಂದು ಅವರು ಹೇಳಿದರು. ಪೊಲೀಸರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದರು, ಆರೋಪಿಯ ಎರಡೂ ಕಾಲುಗಳಿಗೆ ಗಾಯವಾಯಿತು. ತಿವಾರಿ ಅವರನ್ನು ಬಂಧಿಸಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ. ಆರೋಪಿಯಿಂದ ಒಂದು ಪಿಸ್ತೂಲ್, ಎರಡು ಕಾರ್ಟ್ರಿಡ್ಜ್‌ಗಳು, ಸ್ಕೂಟರ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

# ಅವತಾರ್ ಫೈರ್ ಆಂಡ್ ಆಶ್ 2ನೇ ಟ್ರೈಲರ್ ಬಿಡುಗಡೆ

'ಅವತಾರ್: ಫೈರ್ ಆಂಡ್ ಆಶ್' ಸಿನಿಮಾ ಬಿಡುಗಡೆಗೆ ರೆಡಿಯಾಗಿದ್ದು ಈ ವರೆಗೆ ಬಿಡುಗಡೆ ಆಗಿರುವ ಟ್ರೈಲರ್‌ನಿಂದ ತಿಳಿದು ಬರುತ್ತಿರುವುದೆಂದರೆ ಮೂರನೇ ಸಿನಿಮಾನಲ್ಲಿ ನಾವಿ ಜನಗಳ ನಡುವೆ ಅಂತರ್ಯುದ್ಧ ಶುರುವಾಗಿದೆ. ನಾವಿ ಜನರೇ ಪರಸ್ಪರರ ಮೇಲೆ ಕತ್ತಿ ಮಸೆದು ಯುದ್ಧಕ್ಕೆ ನಿಂತಿದ್ದಾರೆ. ನಾವಿ ಜನರ ಅಂತರ್ಯುದ್ಧದ ಲಾಭವನ್ನು ಮನುಷ್ಯರು ಪಡೆಯುತ್ತಿದ್ದಾರೆ.

'ಅವತಾರ್' ಸಿನಿಮಾ ಸರಣಿಯ ಎರಡು ಸಿನಿಮಾಗಳು ಈಗಾಗಲೇ ಬಿಡುಗಡೆ ಆಗಿದ್ದು, ಇದೇ ಸಿನಿಮಾ ಸರಣಿಯ ಮೂರನೇ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಮೂರನೇ ಸರಣಿಗೆ 'ಅವತಾರ್: ಫೈರ್ ಆಂಡ್ ಆಶ್' ಎಂದು ಹೆಸರಿಡಲಾಗಿದೆ. 2009 ರಲ್ಲಿ ಬಿಡುಗಡೆ ಆಗಿದ್ದ 'ಅವತಾರ್' ಸಿನಿಮಾ ಭಾರಿ ದೊಡ್ಡ ಯಶಸ್ಸು ಗಳಿಸಿತ್ತು. ಬಾಕ್ಸ್ ಆಫೀಸ್‌ನಲ್ಲಿ ಸಾರ್ವಕಾಲಿಕ ದಾಖಲೆಯನ್ನೇ ನಿರ್ಮಿಸಿತ್ತು. ಅದಾದ 13 ವರ್ಷಗಳ ಬಳಿಕ 2022 ರಲ್ಲಿ 'ಅವತಾರ್: ದಿ ವೇ ಆಫ್ ವಾಟರ್' ಸಿನಿಮಾ ಬಿಡುಗಡೆ ಆಯ್ತು. ಆ ಸಿನಿಮಾ ಸಹ ಹಿಟ್ ಆಯ್ತು.



# ಛೇ.. ರುಕ್ಕುಗೆ ಈ ರೀತಿ ಆಗಬಾರದಿತ್ತು




ಎಐ ಫೋಟೋಗಳು ವೈರಲ್

'ಕಾಂತಾರ: ಚಾಪ್ಟರ್ 1' ಸಿನಿಮಾದಲ್ಲಿ ರುಕ್ಮಿಣಿ ಅವರು ಯುವರಾಣಿಯಾಗಿ ಕಾಣಿಸಿಕೊಂಡಿದ್ದಾರೆ. ಕನಕವಲ್ಲಿ ಅವರ ಪಾತ್ರದ ಹೆಸರು. ಅವರು ಕತ್ತಿ ಹಿಡಿದು ಯೋಧೆಯಂತೆ ಹೋರಾಡುತ್ತಾರೆ. ಈ ರೀತಿ ಕತ್ತಿ ಹಿಡಿದ ಒಂದು ದೃಶ್ಯವನ್ನು ಕೆಲವರು ತಿರುಚಿದ್ದಾರೆ. ಈ ಫೋಟೋಗಳು ವೈರಲ್ ಆಗಿವೆ.

ದೃಶ್ಯ ಎಷ್ಟೇ ಅದ್ಭುತವಾಗಿರಲಿ, ಅದನ್ನು ಎಷ್ಟೇ ಚೆನ್ನಾಗಿ ಕಟ್ಟಿಕೊಟ್ಟರಲಿ ಅವುಗಳನ್ನು ಫನ್ ಆಗಿ ಬದಲಿಸುವ ಆಲೋಚನೆ ಅನೇಕರಿಗೆ ಇರುತ್ತದೆ. ಇತ್ತೀಚೆಗೆ ಬಿಡುಗಡೆ ಆದ 'ಕಾಂತಾರ: ಚಾಪ್ಟರ್ 1' ಸಿನಿಮಾದ ಪ್ರತಿ ದೃಶ್ಯಗಳು ಅದ್ಭುತವಾಗಿದೆ. ಈ ಟ್ರೇಲರ್ ನೋಡಿದ ಅನೇಕರಿಗೆ ಸಿನಿಮಾ ಮೇಲಿನ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಹೀಗಿರುವಾಗಲೇ ಟ್ರೇಲರ್‌ನಲ್ಲಿ ರುಕ್ಮಿಣಿ ವಸಂತ್ ಅವರ ಆ ಒಂದು ದೃಶ್ಯವನ್ನು ಎಐ ಟೂಲ್ ಬಳಸಿ ನಾನಾ ರೀತಿ ತಿರುಚಲಾಗಿದೆ. 'ಕಾಂತಾರ: ಚಾಪ್ಟರ್ 1' ಸಿನಿಮಾದಲ್ಲಿ ರುಕ್ಮಿಣಿ ಅವರು ಯುವರಾಣಿಯಾಗಿ ಕಾಣಿಸಿಕೊಂಡಿದ್ದಾರೆ. ಕನಕವಲ್ಲಿ ಅವರ ಪಾತ್ರದ ಹೆಸರು. ಅವರು ಕತ್ತಿ ಹಿಡಿದು ಯೋಧೆಯಂತೆ ಹೋರಾಡುತ್ತಾರೆ. ಈ ರೀತಿ ಕತ್ತಿ ಹಿಡಿದ ಒಂದು ದೃಶ್ಯವನ್ನು ಕೆಲವರು ತಿರುಚಿದ್ದಾರೆ. ಬೆಂಗಳೂರಿನ ಗುಂಡಿ ಬಿದ್ದ ರಸ್ತೆಗೆ ಟಾರ್ ಹಾಕುವಂತೆ, ಸೌಟು ಹಿಡಿದು ಅಡುಗೆ ಮಾಡಿದಂತೆಲ್ಲ ತೋರಿಸಲಾಗಿದೆ. 'ಕಾಂತಾರ: ಚಾಪ್ಟರ್ 1' ಸಿನಿಮಾದಲ್ಲಿ ರುಕ್ಮಿಣಿ ವಸಂತ್ ಅವರು ಸಖತ್ ಬ್ಯೂಟಿಫುಲ್ ಆಗಿ ಕಾಣಿಸಿಕೊಂಡಿದ್ದಾರೆ. ಅವರ ಸೌಂದರ್ಯಕ್ಕೆ ಸಾಟಿಯೇ ಇಲ್ಲದಂತೆ ಆಗಿದೆ. ಅವರ ಸೌಂದರ್ಯವನ್ನು ಅನೇಕರು ಕೊಂಡಾಡಿದ್ದಾರೆ. ಕೆಲವರು ಅವರನ್ನು, ಏಂಜಲ್ ಎಂದೆಲ್ಲ ಕರೆದಿದ್ದಾರೆ. 'ಕಾಂತಾರ: ಚಾಪ್ಟರ್ 1' ಸಿನಿಮಾ ಅಕ್ಟೋಬರ್ 2ರಂದು ರಿಲೀಸ್ ಆಗುತ್ತಿದೆ. ಈ ಚಿತ್ರವನ್ನು ಹೊಂಬಾಳೆ ಫಿಲ್ಮ್ಸ್ ಅದ್ದೂರಿಯಾಗಿ ನಿರ್ಮಾಣ ಮಾಡಿದೆ. 'ಕಾಂತಾರ' ಚಿತ್ರದ ಪ್ರೀಕ್ವೆಲ್ ಆಗಿ ಈ ಸಿನಿಮಾ ಮೂಡಿ ಬರುತ್ತಿದೆ.

# ಮತ್ತೆ ಭುಗಿಲೆದ್ದಿತು ವೈಮನಸ್ಸು

ಚಿರಂಜೀವಿ ಬಾಲಕೃಷ್ಣ ನಡುವೆ



ಮೆಗಾಸ್ಟಾರ್ ಚಿರಂಜೀವಿ ಮತ್ತು ನಂದಮೂರಿ ಕುಟುಂಬದ ನಡುವೆ ವೈಮನಸ್ಯ ದಶಕಗಳಿಂದಲೂ ಇದೆ. ಆದರೆ ಇತ್ತೀಚೆಗೆ ಎರಡೂ ಕುಟುಂಬಗಳ ನಡುವೆ ಸೌಹಾರ್ದ ಮೂಡಿತ್ತು. ಆದರೆ ಈಗ ಬಾಲಯ್ಯ ಮತ್ತೆ ಆ ಸೌಹಾರ್ದಕ್ಕೆ ಬೆಂಕಿ ಹಾಕಿದ್ದಾರೆ. ಚಿರಂಜೀವಿ ವಿರುದ್ಧ ಅಸೆಂಬ್ಲಿಯಲ್ಲೇ ಮಾತನಾಡಿದ್ದಾರೆ.

ಚಿರಂಜೀವಿ ಹಾಗೂ ಎನ್‌ಟಿಆರ್ ಕುಟುಂಬದ ನಡುವೆ ದಶಕಗಳಿಂದಲೂ ವೈಮನಸ್ಯ ಇದ್ದೇ ಇದೆ. ಆದರೆ ಇತ್ತೀಚೆಗೆ ಈ ವೈಮನಸ್ಯ ದೂರಾಗಿತ್ತು. ಎನ್‌ಟಿಆರ್ ಕುಟುಂಬದ್ದೇ ಪಕ್ಷವಾದ ಟಿಡಿಪಿ ಜೊತೆಗೆ ಚಿರಂಜೀವಿ ಸಹೋದರ ಪವನ್ ಕಲ್ಯಾಣ್ ಕೈ ಜೋಡಿಸಿ, ಚಂದ್ರಬಾಬು ನಾಯ್ಡು ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸಹ ಆದರು. ಆ ಬಳಿಕ ಚಿರಂಜೀವಿ ಹಾಗೂ ಬಾಲಯ್ಯ ಸಹ ಬಹಿರಂಗ ವೇದಿಕೆಯಲ್ಲಿ ಒಟ್ಟಿಗೆ ಕಾಣಿಸಿಕೊಂಡು ಪರಸ್ಪರರ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದರು. ಆದರೆ ಈ ಸ್ನೇಹ ಉಳಿದಿದ್ದು, ಕೆಲವೇ ದಿನಗಳು, ಈಗ ಮತ್ತೆ ಬಾಲಕೃಷ್ಣ ಹಾಗೂ ಚಿರಂಜೀವಿ ನಡುವೆ ವೈಮನಸ್ಯ ಮೂಡಿದೆ.

ಬಾಲಯ್ಯ, ಅಸೆಂಬ್ಲಿಯಲ್ಲೇ ಚಿರಂಜೀವಿ ವಿರುದ್ಧ ಸಿಟ್ಟಿನಿಂದ ಮಾತನಾಡಿದ್ದಾರೆ.

ಆಂಧ್ರಪ್ರದೇಶ ಅಸೆಂಬ್ಲಿಯಲ್ಲಿ ಪ್ರಸ್ತುತ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಜೋರು ಚರ್ಚೆ ಜಾರಿಯಲ್ಲಿದೆ. ಜಗನ್ ಸರ್ಕಾರವಿದ್ದಾಗ ಪ್ರಜಾ ಪ್ರನಿಧಿಗಳ ಮೇಲೆ, ವಿಪಕ್ಷ ಸದಸ್ಯರುಗಳ ಮೇಲೆ ಹಾಕಿದ ಕೇಸುಗಳು, ಅವರನ್ನು ಅಮಾನವೀಯವಾಗಿ ನಡೆಸಿಕೊಂಡ ವಿಧಾನಗಳ ಬಗ್ಗೆ ಜೋರಾಗಿ ಚರ್ಚೆ ನಡೆಯುತ್ತಿದೆ.

ಈ ವೇಳೆ ಹಾಲಿ ಸಚಿವ ಕಮಿನೇನಿ ಕೃಷ್ಣ ಶ್ರೀನಿವಾಸ್ ಮಾತನಾಡುತ್ತಾ, ಜಗನ್ ಎಂಥಹಾ ಕೆಟ್ಟ ವ್ಯಕ್ತಿ ಆಗಿದ್ದರು ಎಂಬುದನ್ನು ತಮ್ಮ ಮಾತಿನಲ್ಲಿ ವಿವರಿಸುತ್ತಾ, ಮೆಗಾಸ್ಟಾರ್, ನಟ ಚಿರಂಜೀವಿ ಅವರು ಜಗನ್ ಅವರನ್ನು ಭೇಟಿ ಆದ ಘಟನೆಯನ್ನು ವಿವರಿಸಿದರು.

# ಕಾಂತಾರದ ಜೊತೆ ಜಾನ್ವಿ ಕ್ಲಾಷ್



ಬಾಲಿವುಡ್ ಸ್ಟಾರ್ ಏನಂದ್ರು

ರಿಷಬ್ ಶೆಟ್ಟಿ ಅಭಿನಯದ ಕನ್ನಡದ 'ಕಾಂತಾರ: ಅಧ್ಯಾಯ 1' ಜೊತೆಗೆ ಈ ಚಿತ್ರವು ಬಾಕ್ಸ್ ಆಫೀಸ್ ಸದ್ದು ಮಾಡಲಿದೆ. ಇದು ಕೂಡ ಬಿಡುಗಡೆಯಾಗುತ್ತಿದೆ.

ವರುಣ್ ಧವನ್ ಈಗ 'ಕಾಂತಾರ: ಅಧ್ಯಾಯ 2' ಚಿತ್ರದ ಆಫೀಸ್ ಘರ್ಷಣೆಯ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಎಲ್ಲಾ ರೀತಿಯ ಚಿತ್ರಗಳಿಗೆ ಅವಕಾಶವಿದೆ ಎಂದು ನಂಬುವುದಾಗಿ ಹೇಳಿದ್ದಾರೆ. ಕಾಂತಾರ ಜೊತೆಗಿನ ಸನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ ಬಾಕ್ಸ್ ಆಫೀಸ್ ಘರ್ಷಣೆ: ಅಧ್ಯಾಯ 1 ಕುರಿತು ವರುಣ್ ಧವನ್ ಇಂಡಿಯಾ ಟುಡೇ ಕಾನ್ಕ್ಲೇವ್ 2025 ರಲ್ಲಿ ಮಾತನಾಡಿದ್ದಾರೆ.

ವರುಣ್ ಧವನ್ ಪ್ರತಿಕ್ರಿಯಿಸಿ, ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಬಿಡುಗಡೆ ದಿನಾಂಕವನ್ನು ನಿಗದಿಪಡಿಸುವಾಗ, ಹಲವು ವರ್ಷಗಳಿಂದ ಚಲನಚಿತ್ರಗಳನ್ನು ನಿರ್ಮಿಸುತ್ತಿರುವ ಧರ್ಮ ಪ್ರೊಡಕ್ಷನ್ಸ್ ಅಕ್ಟೋಬರ್ 2 ಅನ್ನು ಆಯ್ಕೆ ಮಾಡಿದೆ. ದಸರಾ ಮತ್ತು ಗಾಂಧಿ ಜಯಂತಿ ಎರಡೂ ಆಗಿರುವುದರಿಂದ ಇದು ಒಂದು ದೊಡ್ಡ ದಿನಾಂಕವಾಗಿದೆ. ಆದ್ದರಿಂದ, ಒಟ್ಟಾರೆಯಾಗಿ, ಈ ದಿನದಂದು ನಿರೀಕ್ಷಿತ ವ್ಯವಹಾರವು ಸಾಮಾನ್ಯ ಶುಕ್ರವಾರಕ್ಕಿಂತ ದೊಡ್ಡದಾಗಿರುತ್ತದೆ. ಹಿಂದಿಯಲ್ಲಿ ಮಾತ್ರ ಮಾಡಲು ಸುಮಾರು 70 ಕೋಟಿ ರೂಪಾಯಿಗಳ ವ್ಯವಹಾರ ಲಭ್ಯವಿದೆ ಎಂದಿದ್ದಾರೆ. ಸನ್ನಿ ಸಂಸ್ಕಾರಿ ಕಿ ತುಳಸಿ ಕುಮಾರಿ ಸಿನಿಮಾ ಕಾಂತಾರ ಜೊತೆಗಿನ ಬಾಕ್ಸ್ ಆಫೀಸ್ ಘರ್ಷಣೆಯ ಬಗ್ಗೆ ಮಾತನಾಡಿದ ಅವರು ರಿಷಬ್ ಶೆಟ್ಟಿ ಅಭಿನಯದ ಕಾಂತಾರ ಚಿತ್ರವು ಒಂದು ದೊಡ್ಡ ಚಿತ್ರ ಎಂದು ಒಪ್ಪಿಕೊಂಡರು. ಸ್ಪಷ್ಟವಾಗಿ, ಕಾಂತಾರ ಬಹಳ ದೊಡ್ಡ ಚಿತ್ರ. ಮೊದಲನೆಯದು ಅದ್ಭುತವಾಗಿತ್ತು. ನನಗೂ ಅದು ತುಂಬಾ ಇಷ್ಟವಾಯಿತು. ಆದರೆ ನಮ್ಮ ಚಿತ್ರವು ತುಂಬಾ ವಿಭಿನ್ನವಾಗಿದೆ. ಎಲ್ಲಾ ರೀತಿಯ ಚಿತ್ರಗಳಿಗೆ ಇಲ್ಲಿ ಸಾಕಷ್ಟು ಸ್ಥಳಾವಕಾಶವಿದೆ ಎಂದು ನಾನು ಭಾವಿಸುತ್ತೇನೆ ಎಂದು ಅವರು ಹೇಳಿದರು.

# ಜೈ ಹನುಮಾನ್ ಒಪ್ಪಿಕೊಂಡಿದ್ದು ಏಕೆ

ವರ್ಮಾರ ಅದ್ಭುತವಾದ ಕತೆ



'ಕಾಂತಾರ: ಚಾಪ್ಟರ್ 1' ಸಿನಿಮಾದ ಪ್ರಚಾರದಲ್ಲಿರುವ ರಿಷಬ್ ಶೆಟ್ಟಿ, ಸಂದರ್ಶನವೊಂದರ ವೇಳೆ ತಮ್ಮ ಮುಂದಿನ ಸಿನಿಮಾ 'ಜೈ ಹನುಮಾನ್' ಬಗ್ಗೆಯೂ ಮಾತನಾಡಿದ್ದಾರೆ. ಆ ಸಿನಿಮಾ ಒಪ್ಪಿಕೊಳ್ಳಲು ಕಾರಣ ಏನೆಂದು ವಿವರಿಸಿದ್ದಾರೆ. 'ಕಾಂತಾರ: ಚಾಪ್ಟರ್ 1' ಸಿನಿಮಾ ಮುಗಿಯುವ ವರೆಗೆ ಬೇರೆ ಯಾವ ಸಿನಿಮಾವನ್ನೂ ಸಹ ಒಪ್ಪಿಕೊಳ್ಳಬಾರದು ಎಂದು ರಿಷಬ್ ಶೆಟ್ಟಿ ನಿರ್ಧರಿಸಿದ್ದರಂತೆ. ಆದರೆ ಪ್ರಶಾಂತ್ ವರ್ಮ ಬಂದು 'ಜೈ ಹನುಮಾನ್' ಸಿನಿಮಾದ ಕತೆ ಹೇಳಿದಾಗ ಸಿನಿಮಾ ಒಪ್ಪಿಕೊಳ್ಳದೆ ಇರಲಾಗಲಿಲ್ಲವಂತೆ. 'ಪ್ರಶಾಂತ್ ವರ್ಮಾ ಅದ್ಭುತವಾಗಿ ಕತೆ ಮಾಡಿಕೊಂಡಿದ್ದಾರೆ. ಅವರು ಹೇಳಿದ ಕತೆ ಕೇಳಿದ ಬಳಿಕ ನನಗೆ ನೋ ಹೇಳಲು ಆಗಲೇ ಇಲ್ಲ' ಎಂದಿದ್ದಾರೆ ರಿಷಬ್ ಶೆಟ್ಟಿ.

'ಪ್ರಶಾಂತ್ ವರ್ಮಾ ಅದ್ಭುತವಾದ ಕತೆ ಮಾಡಿದ್ದಾರೆ. ನಾನು ಸಿನಿಮಾ ಒಪ್ಪಿದ ಬಳಿಕ ಫೋಟೊಶೂಟ್ ಮಾಡಿಸಿದೆವು. ಈಗ ಅವರು ಪ್ರೀ ಪ್ರೊಡಕ್ಷನ್‌ನಲ್ಲಿ ತೊಡಗಿಕೊಂಡಿದ್ದಾರೆ. 'ಕಾಂತಾರ: ಚಾಪ್ಟರ್ 1' ಸಿನಿಮಾದ ಬಿಡುಗಡೆ ಬಳಿಕ ಒಂದು ದಿನಾಂಕ ನಿಗದಿ ಮಾಡಿ ನಾವು ಸಿನಿಮಾದ ಚಿತ್ರೀಕರಣ ಪ್ರಾರಂಭ ಮಾಡಲಿದ್ದೇವೆ. ಪ್ರಶಾಂತ್ ವರ್ಮಾ ಹಾಗೂ ಮೈತ್ರಿ ಮೂವಿ ಮೇಕರ್ಸ್ ಜೊತೆಗೆ ಕೆಲಸ ಮಾಡಲು ಉತ್ಸುಕನಾಗಿದ್ದೇನೆ' ಎಂದು ರಿಷಬ್ ಶೆಟ್ಟಿ ಹೇಳಿದ್ದಾರೆ.

# ಏಷ್ಯಾ ಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ಭಾರತ- ಪಾಕ್ ನಡುವೆ ಫೈನಲ್ ಫೈಟ್



ಉಭಯ ತಂಡಗಳ ನಡುವೆ ಮೂರನೇ ಮುಖಾಮುಖಿ

ಏಷ್ಯಾಕಪ್ ಸೂಪರ್ 4 ಸುತ್ತಿನಲ್ಲಿ ಬಾಂಗ್ಲಾದೇಶವನ್ನು ಮಣಿಸಿರುವ ಪಾಕಿಸ್ತಾನ ಎರಡನೇ ತಂಡವಾಗಿ ಫೈನಲ್‌ಗೆ ಅರ್ಹತೆ ಪಡೆದುಕೊಂಡಿದೆ. ಈ ಮೊದಲು ಇದೇ ಬಾಂಗ್ಲಾದೇಶವನ್ನು ಮಣಿಸಿದ್ದ ಟೀಂ ಇಂಡಿಯಾ ಮೊದಲ ತಂಡವಾಗಿ ಫೈನಲ್ ಟಿಕೆಟ್ ಪಡೆದುಕೊಂಡಿತ್ತು. ಇದೀಗ ಭಾರತ ಹಾಗೂ ಪಾಕಿಸ್ತಾನ ನಡುವೆ ಏಷ್ಯಾಕಪ್ ಫೈನಲ್ ಪಂದ್ಯ ನಡೆಯಲಿದೆ. ಈ ಟೂರ್ನಿಯಲ್ಲಿ ಉಭಯ ತಂಡಗಳ ನಡುವೆ ಮೂರನೇ ಮುಖಾಮುಖಿ ಇದಾಗಲಿದೆ. ಇದು ಮಾತ್ರವಲ್ಲದೆ ಏಷ್ಯಾಕಪ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರತ ಹಾಗೂ ಪಾಕಿಸ್ತಾನ ನಡುವೆ ಫೈನಲ್ ಪಂದ್ಯ ನಡೆಯಲಿದೆ.

**ಪಾಕ್ ತಂಡಕ್ಕೆ ಆರಂಭಿಕ ಆಘಾತ:** ಇನ್ನು ಏಷ್ಯಾಕಪ್ ಸೂಪರ್ 4 ಸುತ್ತಿನಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ ತಂಡ, ಬಾಂಗ್ಲಾದೇಶ ಬೌಲರ್‌ಗಳ ಮುಂದೆ ಅಗ್ರ ಕ್ರಮಾಂಕ ಮಂಡಿಯೂರಿತು. ಆರಂಭಿಕ ಸಾಹಿಬ್‌ಜಾದಾ ಫರ್ಹಾನ್ 4 ರನ್‌ಗಳಿಗೆ ಔಟಾದರು. ಸ್ಯಾಮ್ ಅಯೂಬ್ ಮತ್ತೊಮ್ಮೆ ಖಾತೆ ತೆರೆಯಲು ವಿಫಲರಾದರು. ಫಖರ್ ಜಮಾನ್ 13 ರನ್‌ಗಳಿಗೆ ಔಟಾದರೆ, ಹುಸೇನ್ ತಲಾತ್ 3 ರನ್‌ಗಳಿಗೆ ಔಟಾದರು.

**31 ರನ್ ಬಾರಿಸಿದ ಹ್ಯಾರಿಸ್:** ಬಾಂಗ್ಲಾದೇಶದ ವಿರುದ್ಧ ಪಾಕಿಸ್ತಾನದ ಮಧ್ಯಮ ಕ್ರಮಾಂಕವೂ ಕೂಡ ರನ್ ಗಳಿಸಲು ಕಷ್ಟಪಡಬೇಕಾಯಿತು. ನಾಯಕ ಸಲ್ಮಾನ್ ಅಘಾ ಮತ್ತೊಮ್ಮೆ ಉತ್ತಮ ಪ್ರದರ್ಶನ ನೀಡುವಲ್ಲಿ ಎಡವಿದರು.

ಸಲ್ಮಾನ್ 23 ಎಸೆತಗಳಲ್ಲಿ 19 ರನ್ ಗಳಿಸಿದರು. ಶಾಹೀನ್ ಅಫ್ರಿದಿ 13 ಎಸೆತಗಳಲ್ಲಿ 2 ಸಿಕ್ಸರ್‌ಗಳೊಂದಿಗೆ ನಿರ್ಣಾಯಕ 19 ರನ್ ಗಳಿಸಿ ಔಟಾದರು. ಪಾಕಿಸ್ತಾನ ಪರ ಮೊಹಮ್ಮದ್ ಹ್ಯಾರಿಸ್ ಅತ್ಯಧಿಕ 31 ರನ್‌ಗಳ ಇನ್ನಿಂಗ್ಸ್ ಆಡಿದರು.

ವಾಸ್ತವವಾಗಿ ಬಾಂಗ್ಲಾದೇಶ ಹ್ಯಾರಿಸ್‌ಗೆ ಶೂನ್ಯಕ್ಕೆ ಜೀವದಾನ ನೀಡಿತು. ಹ್ಯಾರಿಸ್ ಇದರ ಲಾಭ ಪಡೆದು 31 ರನ್ ಗಳಿಸಿದರು. ಮೊಹಮ್ಮದ್ ನವಾಜ್ 15 ಎಸೆತಗಳಲ್ಲಿ 2 ಸಿಕ್ಸರ್ ಮತ್ತು 1 ಸಿಕ್ಸರ್ ಸೇರಿದಂತೆ 25 ರನ್ ಗಳಿಸಿದರು.

## ಗೆಲುವಿನ ಹೊಸ್ತಿಲಲ್ಲಿ ಎಡವಿದ ಲಂಕಾ

# ಸೂಪರ್ ಓವರ್‌ನಲ್ಲಿ ಭಾರತ ಜಯಭೇರಿ

ಏಷ್ಯಾ ಕಪ್ ಫೈನಲ್‌ಗೂ ಮುನ್ನ ಕೇವಲ ಔಪಚಾರಿಕ ಎಂದೇ ಪರಿಗಣಿಸಲ್ಪಟ್ಟ ಭಾದತ ಗಿ ಶ್ರೀಲಂಕಾ ಪಂದ್ಯ ಅಕ್ಷರಶಃ ಟಿ20ಯ ರೋಚಕತೆಯನ್ನು ಉಣಬಡಿಸಿತು. ಪತುಮ್ ನಿಸ್ಸಾಂಕಾ ಅವರ ಅದ್ಭುತ ಶತಕದಿಂದ ಸೂಪರ್ ಓವರ್ ಕಂಡ ಪಂದ್ಯ ಅಂತಿಮವಾಗಿ ಸೂಪರ್ ಓವರ್‌ನಲ್ಲಿ ಭಾರತ ತಂಡದ ಪಾಲಾಯಿತು.

ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡದ ಸೂಪರ್ 4 ಹಂತದ ಅಂತಿಮ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ 20 ಓವರ್ ಗಳಲ್ಲಿ 202 ರನ್ ಗಳ ಬೃಹತ್ ಮೊತ್ತ ಗಳಿಸಿತು.

ಇದಕ್ಕುತ್ತರವಾಗಿ ಶ್ರೀಲಂಕಾ ತಂಡ 20 ಓವರ್ ಗಳಲ್ಲಿ ಅಷ್ಟೇ ರನ್ ಗಳಿಸುವಲ್ಲಿ ಶಕ್ತವಾಯಿತು.

ಶ್ರೀಲಂಕಾ ತಂಡ ಮೊದಲ ವಿಕೆಟ್ ಕುಸಾಲ್ ಮೆಂಡಿಸ್ ರೂಪದಲ್ಲಿ 7 ರನ್ ಗೆ ಪತನಗೊಂಡಾಗ ಭಾರತ ಈ ಪಂದ್ಯವನ್ನು ಸುಲಭದಲ್ಲಿ ಗೆದ್ದುಬಿಡಬಹುದು



ಗೆಲುವಿನ ರೂವಾರಿಗಳು ಅಭಿಷೇಕ್ ಅರ್ಷದೀಪ್

ಎಂದೇ ಎಲ್ಲರೂ ಎಣಿಸಿದ್ದರು. ಆದರೆ ಪತುಮ್ ನಿಸ್ಸಾಂಕಾ ಮತ್ತು ಕುಸಾಲ್ ಪೆರೆರಾ ಅವರು ಪಂದ್ಯದ ಗತಿಯನ್ನೇ ಗತಿಯನ್ನೇ ಬದಲಾಯಿಸಿದರು. ಇವರಿಬ್ಬರೂ 2ನೇ ವಿಕೆಟ್ ಗೆ 127 ರನ್ ಕಲೆಹಾಕಿದರು. ಓವರ್ ಗೆ 11 ರನ್ ನಂತೆ ಗಳಿಸುತ್ತಾ ಹೋದ ಇವರಿಬ್ಬರೂ ಭಾರತೀಯ ಬೌಲರ್ ಗಳನ್ನು ಚೆನ್ನಾಗಿ ಗೋಳು ಹೊಯ್ದುಕೊಂಡರು. ತಂಡದ ಮೊತ್ತ 134 ರನ್ ಆಗಿರಬೇಕಾದರೆ ವರುಣ್ ಚಕ್ರವರ್ತಿ ಅವರ ಬೌಲಿಂಗ್ ನಲ್ಲಿ ಕೀಪರ್ ಸಂಜು ಸ್ಯಾಮ್ಸನ್ ಅವರ ಅದ್ಭುತ ಸ್ಟಂಪಿಂಗ್ ನಿಂದಾಗಿ ಕುಸಾಲ್ ಪೆರೆರಾ(32 ಎಸೆತದಲ್ಲಿ 58) ವಿಕೆಟ್ ಪತನಗೊಂಡಿತು.


### ಅಭಿಷೇಕ್ ಅಬ್ಬರ

**ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಗೆ ಇಳಿಸಲ್ಪಟ್ಟ ಭಾರತ ತಂಡದ ಆಕ್ರಮಣಕಾರಿ ಆಟ ಕ್ಕಿಳಿದರೂ 2ನೇ ಓವರ್ ನಲ್ಲಿ 15 ರನ್ ಗಳಾಗಿರುವಾಗ ಶುಭಮನ್ ಗಿಲ್ ಅವರ ವಿಕೆಟ್ ಪಡೆಯುವಲ್ಲಿ ಲಂಕಾ ಬೌಲರ್ ಗಳು ಯಶಸ್ವಿಯಾದರು. ಆದರೆ ಭರ್ಜರಿ ಫಾರ್ಮ್ ನಲ್ಲಿರುವ ಅಭಿಷೇಕ್ ಶರ್ಮಾ ಅವರು ಒಂದು ಬದಿಯಲ್ಲಿ ಸಿಡಿಯುತ್ತಲೇ ಇದ್ದರು. ಹಾಗಾಗಿ ಪವರ್ ಪ್ಲೇನ 6 ಓವರ್ ಗಳು ಮುಗಿಯುವ ಹೊತ್ತಿಗೆ ಭಾರತ ಒಂದು ವಿಕೆಟ್ ನಷ್ಟಕ್ಕೆ 71 ರನ್ ಗಳಿಸಿತ್ತು.**

ಆದರೂ ನಿಸ್ಸಾಂಕಾ ಹೋರಾಟ ಮಾತ್ರ ನಿಂತಿರಲಿಲ್ಲ. ಕೇವಲ 25 ಎಸೆತಗಳಲ್ಲಿ ಅರ್ಧಶತಕ ಬಾರಿಸಿದ್ದ ಅವರು 53 ಎಸೆತದಲ್ಲಿ ಶತಕ ಪೂರೈಸಿದರು. ಅಂತಿಮವಾಗಿ ಅವರು 58 ಎಸೆತಗಳಲ್ಲಿ 107 ರನ್ ಗಳಿಸಿ ಕೊನೇ ಓವರ್ ನಲ್ಲಿ ಔಟಾದರು. ಇದು ನಿಸ್ಸಾಂಕಾ ಅವರು ಮೊದಲ ಟಿ20 ಶತಕವಾಗಿದ್ದರೆ, ಏಷ್ಯಾ ಕಪ್ ಟಿ20 ಪಂದ್ಯದಲ್ಲಿ 3ನೇ ಶತಕವಾಗಿದೆ.

# ಫೈನಲ್ ಪಂದ್ಯಕ್ಕು ಮುನ್ನ ಪಾಕ್ ನಾಯಕ ಅಬ್ಬರದ ಮಾತು

2025ರ ಏಷ್ಯಾ ಕಪ್‌ನ ಸೂಪರ್-4 ರಲ್ಲಿ ಇನ್ನೂ ಒಂದು ಪಂದ್ಯ ಬಾಕಿ ಇದೆ, ಆದರೆ ಅದಕ್ಕೂ ಮೊದಲೇ ಫೈನಲ್‌ನಲ್ಲಿ ಮುಖಾಮುಖಿಯಾಗುವ ಎರಡು ತಂಡಗಳು ನಿರ್ಧಾರವಾಗಿವೆ. ಸೂಪರ್-4ರಲ್ಲಿ ತನ್ನ ಆರಂಭಿಕ ಎರಡೂ ಪಂದ್ಯಗಳನ್ನು ಗೆಲ್ಲುವ ಮೂಲಕ ಭಾರತ ತಂಡ ಈಗಾಗಲೇ ಪ್ರಶಸ್ತಿ ಪಂದ್ಯದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದರೆ, ಅತ್ತ ಪಾಕಿಸ್ತಾನ ತಂಡವು ಬಾಂಗ್ಲಾದೇಶ ವಿರುದ್ಧದ ಸೂಪರ್-4 ಪಂದ್ಯವನ್ನು 11 ರನ್‌ಗಳಿಂದ ಗೆಲ್ಲುವ ಮೂಲಕ ಫೈನಲ್‌ಗೆ ಟಿಕೆಟ್ ಪಡೆದುಕೊಂಡಿತು. ಬಾಂಗ್ಲಾದೇಶ ವಿರುದ್ಧದ ಗೆಲುವಿನ ನಂತರ, ಪಾಕಿಸ್ತಾನಿ ನಾಯಕ ಸಲ್ಮಾನ್ ಅಲಿ ಅಘಾ ಪೋಸ್ಟ್ ಮ್ಯಾಚ್ ಪ್ರೆಸೆಂಟೇಷನ್‌ನಲ್ಲಿ ಭಾರತದ ವಿರುದ್ಧದ ಅಂತಿಮ ಪಂದ್ಯಕ್ಕೂ ಮೊದಲು ದೊಡ್ಡ ಹೇಳಿಕೆ ನೀಡಿದ್ದಾರೆ.



ಬಾಂಗ್ಲಾದೇಶ ವಿರುದ್ಧ 11 ರನ್‌ಗಳ ಗೆಲುವಿನ ನಂತರ ಸೆಪ್ಟೆಂಬರ್ 28 ರಂದು ಪಂದ್ಯದ ಪ್ರಸ್ತುತಿಯ ಸಂದರ್ಭದಲ್ಲಿ ಭಾರತದ ವಿರುದ್ಧದ ಅಂತಿಮ ಪಂದ್ಯದ ಬಗ್ಗೆ ಕೇಳಿದಾಗ, ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಅಲಿ ಆಘಾ, ''ನಾವು ಯಾವುದೇ ತಂಡವನ್ನು ಎದುರಿಸಲು ಮತ್ತು ಅವರನ್ನು ಸೋಲಿಸಲು ಸಂಪೂರ್ಣವಾಗಿ ಸಮರ್ಥರಾಗಿದ್ದೇವೆ. ನಾವು ಭಾನುವಾರ ಮತ್ತೆ ಮೈದಾನಕ್ಕೆ ಇಳಿಯುತ್ತೇವೆ ಮತ್ತು ಇದೇ ರೀತಿ ಗೆಲುವು ಪಡೆಯಲು ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತೇವೆ'' ಎಂದು ಹೇಳಿದರು. 2025 ರ ಏಷ್ಯಾ ಕಪ್‌ನಲ್ಲಿ ಇಲ್ಲಿಯವರೆಗೆ ಭಾರತ ಮತ್ತು ಪಾಕಿಸ್ತಾನ ಒಟ್ಟು ಎರಡು ಬಾರಿ ಮುಖಾಮುಖಿಯಾಗಿವೆ, ಇದರಲ್ಲಿ ಪಾಕಿಸ್ತಾನ ತಂಡವು ಎರಡೂ ಬಾರಿ ಏಕಪಕ್ಷೀಯ ಸೋಲುಗಳನ್ನು ಎದುರಿಸಿದೆ ಎಂಬುದನ್ನು ಗಮನಿಸಬೇಕು.

ಬ್ಯಾಟಿಂಗ್‌ನಲ್ಲಿ ಸ್ವಲ್ಪ ಸುಧಾರಣೆ ತರಬೇಕಾಗಿದೆ

ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ ಪಾಕಿಸ್ತಾನ ತಂಡವು 20 ಓವರ್‌ಗಳಲ್ಲಿ ಕೇವಲ 135 ರನ್‌ಗಳನ್ನು ಗಳಿಸಲು ಸಾಧ್ಯವಾಯಿತು, ಒಂದು ಹಂತದಲ್ಲಿ ತಮ್ಮ ತಂಡದ ಅರ್ಧದಷ್ಟು ಭಾಗವನ್ನು 49 ರನ್‌ಗಳಿಗೆ ಕಳೆದುಕೊಂಡಿತು. ಈ ಬಗ್ಗೆ ಮಾತನಾಡಿದ ಪಾಕಿಸ್ತಾನ ನಾಯಕ ಸಲ್ಮಾನ್ ಅಲಿ ಅಘಾ, ''ಈ ಪಂದ್ಯದಲ್ಲಿ ನಾವು ಸುಮಾರು 15 ರನ್‌ಗಳು ಕಡಿಮೆ ಗಳಿಸಿದ್ದೇವೆ ಮತ್ತು ನಮ್ಮ ಬ್ಯಾಟಿಂಗ್ ಅನ್ನು ಸುಧಾರಿಸಬೇಕಾಗಿದೆ. ಆದಾಗ್ಯೂ, ಅಂತಹ ಪಂದ್ಯವನ್ನು ಗೆಲ್ಲುವುದು ಉತ್ತಮವೆನಿಸುತ್ತದೆ. ನಾವು ಬೌಲಿಂಗ್ ಮಾಡಿದ ರೀತಿಯಿಂದ ಎದುರಾಳಿಗೆ ಒತ್ತಡವನ್ನು ಸೃಷ್ಟಿಸಲು ಸಾಧ್ಯವಾಯಿತು'' ಎಂದು ಹೇಳಿದರು.

# ಫೈನಲ್‌ನಲ್ಲಿ ಸೂರ್ಯಕುಮಾರ್ ಆಡುತ್ತಾರೋ ಇಲ್ಲವೋ



ಒಂದೇ ಮೈದಾನದಲ್ಲಿ ಅಭ್ಯಾಸ

ಫೈನಲ್‌ನಲ್ಲಿ ಆಡಲಿರುವ ಟೀಮ್ ಇಂಡಿಯಾ ನಾಯಕ

ಭಾರತ ಮತ್ತು ಪಾಕಿಸ್ತಾನ ನಡುವಿನ ಏಷ್ಯಾ ಕಪ್‌ನ ಅಂತಿಮ ಪಂದ್ಯ ಭಾನುವಾರ ನಡೆಯಲಿದೆ. ಆದಾಗ್ಯೂ, ಆ ಪಂದ್ಯಕ್ಕೂ ಮೊದಲೇ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ವಿರುದ್ಧದ ಆರೋಪಗಳ ವಿಚಾರಣೆ ಪೂರ್ಣಗೊಂಡಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿ ದೂರಿನ ನಂತರ ಐಸಿಸಿ ಈ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ವಾಸ್ತವವಾಗಿ, ಸೆಪ್ಟೆಂಬರ್ 14 ರಂದು ಏಷ್ಯಾ ಕಪ್‌ನಲ್ಲಿ ಪಾಕಿಸ್ತಾನ ವಿರುದ್ಧ ಜಯಗಳಿಸಿದ ನಂತರ, ಸೂರ್ಯಕುಮಾರ್ ಪಂದ್ಯವನ್ನು ಆಪರೇಷನ್ ಸಿಂಧೂರ್‌ನ ಭಾಗವಾಗಿದ್ದ ಭಾರತೀಯ ಸಶಸ್ತ್ರ ಪಡೆಗಳಿಗೆ ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಮರಣ ಹೊಂದಿದವರಿಗೆ ಅರ್ಪಿಸಿದ್ದರು, ಇದರಿಂದಾಗಿ ಪಿಸಿಬಿ ಇದನ್ನು ಆಕ್ಷೇಪಿಸಿ ''ರಾಜಕೀಯ ಹೇಳಿಕೆ'' ಎಂದು ಕರೆದಿದೆ. ಅದರ ಬಗ್ಗೆಯೂ ದೂರು ನೀಡಿದೆ.

**ರೆಫರಿಯ ನಿರ್ಧಾರವೇನು:** ಈ ವಿಷಯದ ವಿಚಾರಣೆ ನಡೆದಿದೆ. ಇಡೀ ವಿಷಯವನ್ನು ಆಲಿಸಿದ ನಂತರ, ಮ್ಯಾಚ್ ರೆಫರಿ ರಿಚಿ ರಿಚರ್ಡ್ಸನ್ ಸೂರ್ಯಕುಮಾರ್ ಯಾದವ್ ಅವರ ಹೇಳಿಕೆಗೆ ಅಧಿಕೃತ ಎಚ್ಚರಿಕೆ ನೀಡಿದ್ದಾರೆ. ವಿಚಾರಣೆಗೆ ಭಾರತೀಯ ನಾಯಕನೊಂದಿಗೆ ಬಿಸಿಸಿಐ ಸಿಒಓ ಹೇಮಾಂಗ್ ಅಮೀನ್ ಮತ್ತು ಕ್ರಿಕೆಟ್ ಕಾರ್ಯಾಚರಣೆ ವ್ಯವಸ್ಥಾಪಕ ಸುಮಿತ್ ಮಲ್ಲಾಪುರ್ಕರ್ ಇದ್ದರು. ಸೂರ್ಯಕುಮಾರ್ ಅವರ ಹೇಳಿಕೆಯು ಆಟದ ಇಮೇಜ್ ಮೇಲೆ ಪರಿಣಾಮ ಬೀರಬಹುದು, ಆದರೆ ಅದು ಗಂಭೀರ ಅಪರಾಧದ ವರ್ಗಕ್ಕೆ ಬರುವುದಿಲ್ಲ ಎಂದು ರಿಚರ್ಡ್ಸನ್ ಬಿಸಿಸಿಐಗೆ ಇಮೇಲ್‌ನಲ್ಲಿ ತಿಳಿಸಿದ್ದಾರೆ.

**ಶಿಕ್ಷೆ ಏನು:** ಐಸಿಸಿ ನಿಯಮಗಳ ಪ್ರಕಾರ, ಈ ಘಟನೆಯನ್ನು ಲೆವೆಲ್ 1 ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ.

ಈ ಮಟ್ಟವನ್ನು ಉಲ್ಲಂಘಿಸಿದ್ದಕ್ಕಾಗಿ ಯಾವುದೇ ಆಟಗಾರನನ್ನು ನಿಷೇಧಿಸಲಾಗುವುದಿಲ್ಲ. ಆದಾಗ್ಯೂ, ಆಟಗಾರನಿಗೆ ಪಂದ್ಯ ಶುಲ್ಕದಿಂದ ದಂಡ ವಿಧಿಸಬಹುದು ಅಥವಾ ಡಿಮೆರಿಟ್ ಅಂಕಗಳನ್ನು ಪಡೆಯಬಹುದು. ಆದ್ದರಿಂದ ಈಗ ಶುಭ ಸುದ್ದಿ ಏನೆಂದರೆ ಈ ಕ್ರಮವು ಸೂರ್ಯಕುಮಾರ್ ಅವರ ಅಂತಿಮ ಪಂದ್ಯದಲ್ಲಿ ಆಡುವ ಸಾಧ್ಯತೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ಭಾರತ ತಂಡ ಈಗಾಗಲೇ ಏಷ್ಯಾ ಕಪ್ 2025ರ ಫೈನಲ್‌ಗೆ ಅರ್ಹತೆ ಪಡೆದಿದೆ. ಪ್ರಶಸ್ತಿಗಾಗಿ ಅಂತಿಮ ಪಂದ್ಯವು ಸೆಪ್ಟೆಂಬರ್ 28ರ ಭಾನುವಾರ ದುಬೈನಲ್ಲಿ ನಡೆಯಲಿದೆ. ಇಲ್ಲಿ ಭಾರತ ಮತ್ತೊಮ್ಮೆ ಅಂತಿಮ ಪಂದ್ಯದಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ. ಟೀಮ್ ಇಂಡಿಯಾಕ್ಕೆ ಸಮಾಧಾನಕರ ವಿಷಯವೆಂದರೆ ಈ ಹೈವೋಲ್ಟೇಜ್ ಪಂದ್ಯಕ್ಕೆ ನಾಯಕ ಸೂರ್ಯಕುಮಾರ್ ಯಾದವ್ ಲಭ್ಯವಿರುತ್ತಾರೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**